ಶ್ರೀ ಮಧ್ವಾಚಾರ್ಯರ ವೈಶಿಷ್ಟ್ಯ



॥ಅಭ್ರಮಂ ಭಂಗ ರಹಿತಂ ಅಜಡಂ ವಿಮಲಂ ಸದಾ
ಆನಂದ ತೀರ್ಥ ಮತುಲಂ ಭಜೇ ತಾಪತ್ರಯಾಪಹಂ॥

ಲೇಖಕರು :

ಆ. ನರಸಿಂಗರಾವ್, M.A. I.S.S.; [Rtd.]
Retd. Asst. Salt Commissioner,
1926, 4ನೇ ಕ್ರಾಸ್, ಸೋಮೇಶ್ವರ ಬಡಾವಣೆ,
ತುಮಕೂರು.

SRI MADHWACHARYARA VAISISHTYA

By

A. NARASINGA RAO, M.A., I.S.S. [Retd.]

First Impression 1983

PRICE : Rs 2-50

Copies Available at :

1926, G. K. Temple Street, Someswara Extension,
TUMKUR-572102.

ಒಂದು ಮಾತು

ನನ್ನ ಮಗಳು ಕುಂ॥ಸೌ॥ ಹೇಮಾವತಿ ಮತ್ತು ಅಳಿಯ ಚಿ॥ ಎಂ. ನರಸಿಂಹ ಮೂರ್ತಿ ಯವರು ಮಧ್ವಾಚಾರ್ಯರ ವೈಶಿಷ್ಟ್ಯದ ಬಗ್ಗೆ ಒಂದು Casette record ಮಾಡಿ ಕಳುಹಿಸಲು ಕೇಳಿಕೊಂಡರು. ಹಾಗೆ ಮಾಡಿದ ಬಳಿಕ ಅದನ್ನೇ ಉಪನ್ಯಾಸದ ಮೂಲಕ ಬರೆದರೆ ಸಾಮಾನ್ಯ ಜನರಿಗೆ ಶ್ರೀ ಮಧ್ವಾಚಾರ್ಯರ ಬಗ್ಗೆ ಸರಿಯಾದ ತಿಳುವಳಿಕೆ ಉಂಟಾಗುವುದೆಂದು ತಿಳಿದು ಇದನ್ನು ಬರೆದೆ. ಕೆಲವು ಮಿತ್ರರು ಇದನ್ನು ಓದಿ Print ಮಾಡಿಸಲು ಯೋಗ್ಯವಾಗಿದೆ ಎಂದರು. ಕಾರಣ ಇದು ಅಚ್ಚಾಗಿದೆ.

ಇದರಲ್ಲಿ, ಶ್ರೀ ರಾಮದೇವರ ಮಹಿಮೆ, ಶ್ರೀ ಕೃಷ್ಣನ ಮಹಿಮೆ, ವೇದದ ಮಹಿಮೆ, ಬ್ರಹ್ಮ ಸೂತ್ರಗಳ ಮಹಿಮೆ, ಭಗವದ್ಗೀತೆಯ ಮಹಿಮೆ, ಶ್ರೀ ಮಧ್ವಾಚಾರ್ಯರ ಮಹಿಮೆ, ಟೀಕಾಚಾರ್ಯರ ಮಹಿಮೆ, ವಾದಿರಾಜರ ಮಹಿಮೆ, ಸತ್ಯಬೋಧರ ಮಹಿಮೆ, ರಾಘವೇಂದ್ರ ಸ್ವಾಮಿಗಳ ಮಹಿಮೆ ಹೇಳಲ್ಪಟ್ಟಿದೆ. ಆದ್ದರಿಂದ ಇದನ್ನು ಓದುವುದು ಪರಮ ಮಂಗಳಕರ. ಈ ಉಪನ್ಯಾಸವನ್ನು ಹೊಂದಿದ್ದವರಿಗೆಲ್ಲಾ ಶುಭವಾಗುತ್ತದೆಂದು ನನ್ನ ನಂಬಿಕೆ.

ನನ್ನ ಮಗಳು ಕುಂ॥ಸೌ॥ ವಾಸುಕಿ ಮತ್ತು ಅವಳ ಗಂಡ ಬಹಳ ಶ್ರಮವಹಿಸಿ ಸಹಾಯ ಮಾಡಿದ್ದರಿಂದ ಇದನ್ನು ಶೀಘ್ರವಾಗಿ ಮುದ್ರಿಸಲು ಸಾಧ್ಯವಾಯಿತು.

ನನ್ನ ಬರಹ ಅಸ್ಪಷ್ಟವಾಗಿದ್ದರಿಂದ ಮುದ್ರಣದಲ್ಲಿ ಕೆಲವು ದೋಷಗಳು ಕಂಡು ಬಂದಿವೆ. ಇದನ್ನು ಶುದ್ಧಾಶುದ್ಧ ಪತ್ರಿಕೆ ನೋಡಿ ತಿದ್ದಿಕೊಳ್ಳಬೇಕೆಂದು ಕೋರಲಾಗಿದೆ.

ಇದರ ಬೆಲೆ ಮುದ್ರಣದ ಖರ್ಚಿಗೆ ಮಾತ್ರ ಸೀಮಿತ ವಾಗಿದೆ. ಶ್ರೀ ಮಧ್ವಾಚಾರ್ಯರ ಸೇವೆ ಒಂದೇ ಉದ್ದೇಶ. ಇದು ಒಂದು ಯಂತ್ರ ರೂಪದಲ್ಲಿದೆ. ಕೊಂಡವರು ಪದೇ ಪದೇ ಓದಿ ಇದರ ಫಲ ಪಡೆಯಲೆಂದು ಕೋರಿದೆ. ಉಚಿತವಾಗಿ ಓದಿದವರಿಗೆ ವಿನೋದ ಒಂದೇ ಲಾಭ.

ಧನದ ಅನುಕೂಲವಾದಾಗ ಇದರ English ಪ್ರತಿಯನ್ನೂ, ಶ್ರೀ ಮಧ್ವ ಸಿದ್ಧಾಂತದ ಪ್ರಮೇಯಗಳ ವಿವರಣೆಯನ್ನೂ ಜನಸಾಮಾನ್ಯರಿಗೆ ತಿಳಿಯುವಂತೆ ಅಚ್ಚು ಹಾಕಿಸುವ ಉದ್ದೇಶ ಇದೆ.

ಸಮಸ್ತ ಸನ್ಮಂಗಳಾನಿ ಭವಂತು.

ಎ. ನರಸಿಂಗರಾವ್.

9-5-83

1926, 4ನೇ ಕ್ರಾಸು
ಸೋಮೇಶ್ವರ ಬಡಾವಣೆ
ತುಮಕೂರು.

ಶ್ರೀ ರಾಮ ಜಯಂ

ಶ್ರೀ ಮಧ್ವಾಚಾರ್ಯರ ವೈಶಿಷ್ಟ್ಯ

" ಪ್ರಥಮೋ ಹನುಮನ್ನಾಮ ದ್ವಿತೀಯೋ ಭೀಮ ಏವಚ ।
ಪೂರ್ಣಪ್ರಜ್ಞಃ ತೃತೀಯಸ್ತು ಭಗವತ್ಕಾರ್ಯ ಸಾಧಕಃ ॥ "

ವಾಯುದೇವರ ಹನುಮ, ಭೀಮ, ಮಧ್ವವೆಂಬ ಮೂರು ಅವತಾರಗಳ ಮಹಿಮೆಯನ್ನು ವರ್ಣಿಸುವ "ವಾಯುಸ್ತುತಿ" ಎಂಬ ಸ್ತೋತ್ರವನ್ನು ತ್ರಿವಿಕ್ರಮ ಪಂಡಿತಾಚಾರ್ಯರು ರಚಿಸಿ ಶ್ರೀ ಮಧ್ವಾಚಾರ್ಯರಿಗೆ ಶ್ರವಣ ಮಾಡಿಸಿದರು. ಆಗ ಶ್ರೀ ಮಧ್ವಾಚಾರ್ಯರು ಬರೇ ತಮ್ಮ ಮಹಿಮೆ ಹೇಳಿದರೆ ಸಾಲದು, ಮೊದಲು ಪರಮಾತ್ಮನ ಮಹಿಮೆಯನ್ನು ವರ್ಣಿಸಬೇಕೆಂದು ಹೇಳಿ ತಾವು "ನರಸಿಂಹ ನಖ ಸ್ತುತಿ" ಎಂಬ ಎರಡು ಶ್ಲೋಕಗಳಿಂದ ನರಸಿಂಹ ದೇವರ ಸ್ತೋತ್ರ ಮಾಡಿ, ಈ ಎರಡು ಶ್ಲೋಕಗಳನ್ನು ಪಠನ ಮಾಡಿಯೇ "ವಾಯು ಸ್ತುತಿ" ಯನ್ನು ಪಠಿಸ ಬೇಕೆಂದು ಆಜ್ಞಾಪಿಸಿದರು. ಈ ಸಂಪ್ರದಾಯವನ್ನು ಅನುಸರಿಸಿ. ಶ್ರೀ ಮಧ್ವಾಚಾರ್ಯರ ವೈಶಿಷ್ಟ್ಯವನ್ನು ತಿಳಿಯುವ ಮುನ್ನ ಶ್ರೀ ರಾಮದೇವರ ಮಹಿಮೆಯನ್ನು ಸ್ವಲ್ಪ ತಿಳಿದುಕೊಳ್ಳೋಣ.

ಜಗತ್ತಿನಲ್ಲಿ ಮನುಷ್ಯನಿಗೆ ಬುದ್ಧಿ ಬಂದಾಗಿನಿಂದಲೂ ಬುದ್ಧಿ ಇರುವ ವರೆಗೂ ಸಮಂಜಸವಾಗಿ ಪರಿಹಾರವಾಗದ ಮತ್ತು ಎಲ್ಲರಿಗೂ ಹೊಳೆಯಬಹುದಾದ ಪ್ರಶ್ನೆ ಒಂದಿದೆ. ಒಂದು ಕಾರ್ಯ ಸಾಧಿಸಲಿಕ್ಕೆ ಮನುಷ್ಯನ ಪ್ರಯತ್ನವೇ ಕಾರಣವೊ, ಅಥವಾ ದೈವವೇ ಕಾರಣವೋ ಎಂಬುದು. ಕೆಲವರು ಮನುಷ್ಯನ ಪ್ರಯತ್ನವೇ ಕಾರಣವೆಂದೂ; ಇನ್ನೂ ಕೆಲವರು ದೈವವೇ ಕಾರಣವೆಂದೂ ವಾದಿಸುವುದುಂಟು. ಎರಡು ಪಕ್ಷಗಳಿಗೂ ಅನೇಕ ಉದಾಹರಣೆಗಳುಂಟು. ಒಬ್ಬ ಬಡವ ಸಾಹುಕಾರನಾದರೆ ಹೇಳಿಕೊಳ್ಳುತ್ತಾನೆ. ತಾನು ಕಷ್ಟಪಟ್ಟು ದುಡಿದದ್ದರಿಂದಲೇ ಸಂಪಾದನೆ ಆಯಿತು.

ಸುಮ್ಮನೆ ದೈವವನ್ನು ನಂಬಿ ಕುಳಿತಿದ್ದರೆ ಆಗುತ್ತಿತ್ತೇ? ಎಂದು ಪುರುಷ ಪ್ರಯತ್ನವೇ ಕಾರಣವೆಂದು ಇವನು ಹೇಳಿಕೆ. ಒಬ್ಬ ಹುಡುಗ ಕಷ್ಟಪಟ್ಟು ಹಗಲಿರುಳೂ ಓದುತ್ತಾನೆ. ಪಾಸಾಗುವುದಿಲ್ಲ. ಇನ್ನೊಬ್ಬ ಯಾವಾಗಲೂ ಆಡುತ್ತಲೇ ಇದ್ದು ಪರೀಕ್ಷೆಯ ಮುನ್ನ ಮಾತ್ರವೇ ಓದಿಕೊಂಡು ಪಾಸಾಗುತ್ತಾನೆ. ಮೊದಲಿನವಗೆ ದೈವಬಲವಿಲ್ಲ. ಎರಡನೆಯವಗೆ ದೈವಬಲವಿತ್ತೆಂದು ಹೇಳುವ ವಾಡಿಕೆ ಇದೆ. ಈ ವಿಷಯದಲ್ಲಿ ಭಗವದ್ಗೀತೆಯು ಕಾರ್ಯಸಾಧನೆಗೆ 5 ಕಾರಣಗಳನ್ನು ಹೇಳುತ್ತದೆ. ನ್ಯಾಯವಾಗಲಿ, ಅನ್ಯಾಯವಾಗಲಿ ಈ 5 ಕಾರಣಗಳು ಬೇಕೆಂದು ಹೇಳುತ್ತದೆ. "ಅಧಿಷ್ಠಾನಂ ತಥಾಕರ್ತಾ ಕರಣಂಚ ಪೃಥಗ್ವಿಧಂ । ವಿವಧಾಶ್ಚ ಪೃಥಕ್ಚೇಷ್ಟಾ ದೈವಂ ಚೈವಾತ್ರ ಪಂಚಮಮ್" ಅಂದರೆ (1) ಆಶ್ರಯ (ಸ್ಥಾನ) (2) ಮಾಡುವ ಕರ್ತಾ (3) ವಿವಿಧ ಸಾಮಗ್ರಿಗಳು (4) ಬಹುವಿಧ ಪ್ರಯತ್ನ (5) ದೈವದ ಕೃಪೆ. ಇವೈದೂ ಇದ್ದರೆನೇ ಕಾರ್ಯ ಸಿದ್ಧಿಸುತ್ತದೆ. ಕೊನೆಗೆ ದೈವವನ್ನು ಹೇಳಿದ್ದು ಮೊದಲು ಹೇಳಿದ ನಾಲ್ಕು ಅಂಶಗಳಿದ್ದರೂ ದೈವಬಲವಿಲ್ಲದಿದ್ದರೆ ಕಾರ್ಯ ಫಲಿಸುವುದಿಲ್ಲವೆಂತಲೂ, ದೈವ ಮನಸ್ಸುಮಾಡಿದರೆ ಕಾರ್ಯ ಫಲಿಸುತ್ತದೆಂತಲೂ ಸೂಚಿಸುತ್ತದೆ. ಇದು ರಾಮಾಯಣದಲ್ಲಿ ಬಹಳ ಸುಂದರವಾಗಿ ನಿರೂಪಿಸಿದೆ. ದಶರಥ ಮಹಾರಾಜ ಶ್ರೀರಾಮನಿಗೆ ಪಟ್ಟಗಟ್ಟಲು ಪ್ರಯತ್ನಿಸಿದನು. ಸಾಧ್ಯವಾಯಿತೇ? ಇಲ್ಲ. ಕೈಕೇಯಿಯು ಭರತನಿಗೆ ಪಟ್ಟಗಟ್ಟಲು ಪ್ರಯತ್ನಿಸಿದಳು. ಸಾಧ್ಯವಾಯಿತೇ? ಇಲ್ಲ. ಕೈಕೇಯಿ ದುಷ್ಟಳು, ಅವಳ ಯೋಚನೆಯೂ ಕೆಟ್ಟದು. ಆದ್ದರಿಂದ ದೈವ ಅನುಕೂಲವಾಗಲಿಲ್ಲ ಎನ್ನಬಹುದು. ಆದರೆ ದಶರಥನ ಬಗ್ಗೆ ಹೀಗೆ ಹೇಳಲಾಗುವುದಿಲ್ಲ. ಮಹಾವಿಷ್ಣುವನ್ನೇ ಮಗನಾಗಿ ಪಡೆದ ಅವನ ಯೋಗ್ಯತೆ ಅಪಾರ. ಅವನ ಉದ್ದೇಶವೂ ಯೋಗ್ಯ. ಆದರೂ ದೈವ ಏಕೆ ಅನುಕೂಲವಾಗಲಿಲ್ಲ? ದೈವದ ಇಚ್ಛೆಯನ್ನು ಬಲ್ಲವರಾರು? ಅದು ಮನುಷ್ಯರಿಗೆ ಅಚಿಂತ್ಯವಾದ ವಿಷಯ. ಹೇಗೆಂದರೆ, ಯಾರಾದರೂ ಪಾದುಕೆಗಳಿಗೆ ಪಟ್ಟಗಟ್ಟಲು ಪ್ರಯತ್ನಿಸಿದರೇ? ಇಲ್ಲ. ಆದರೂ ಪಾದಕಾಪಟ್ಟಾಭಿಷೇಕ ಆಯಿತು. ಯಾಕೆಂದರೆ, ದೈವದ ಇಚ್ಛೆಗೆ ಬಂದಿತು, ದೈವ ಯಾರೆಂದರೆ ಶ್ರೀರಾಮ. ನೀರಿನಲ್ಲಿ ತೇಲವುದು ಕಲ್ಲಿನ ಸ್ವಭಾವವಲ್ಲ. ಕಲ್ಲನ್ನು ತೇಲಿಸುವುದು ನೀರಿನ ಸ್ವಭಾವವಲ್ಲ. ಆದರೂ ದೊಡ್ಡ ದೊಡ್ಡ ಕಲ್ಲಿನ ಬೆಟ್ಟಗಳನ್ನೇ ನೀರಿನ ಮೇಲೆ ತೇಲುವಂತೆ ಮಾಡಿ ಸೇತುವೆಯನ್ನು ಕಟ್ಟಿದ ಶ್ರೀರಾಮ. ಅಘಟಿತ ಘಟನಾಶಕ್ತಿ ದೈವಕ್ಕೆ ಉಂಟು ಎಂಬುದು ತೋರಿಸಿದ ಶ್ರೀರಾಮ, ಕನಕದಾಸರು "ಹರಿಭಕ್ತಿಸಾರ" ದಲ್ಲಿ ಹೇಳುತ್ತಾರೆ. "ತನ್ನದೇ ಹಾತುರದೊಳನ್ಯರನು ಸಂಹರಿಸುತ್ತಿರೆ, ನಿನ್ನ ನಾಮದೊಳೆರಡಕ್ಷರವ ಬಣ್ಣಿಸುತೆ, ಧನ್ಯನಾದನು ಮುನಿಕುಲದಿ, ಸಂಪನ್ನನಾದನು, ನೀನೊಲಿದ ಬಳಿಕಿನ್ನು ಪಾತಕವುಂಟೆ, ದೇವ ರಕ್ಷಿಸು ನಮ್ಮ ನನವರತ"ಎಂದು. ವಾಲ್ಮೀಕಿಗೆ ಮಾಡಿದ ಶ್ರೀರಾಮನ ಅನುಗ್ರಹವಿದು. ನಮ್ಮಿಂದ ಹತ್ತು ಅಪರಾಧಗಳಾಗುತ್ತಿವೆ: ಮನಸ್ಸಿನಿಂದ

ಮೂರು—(1) Envy : ಅಸೂಯೆ, (2) Hatred ದ್ವೇಷ, (3) Scepticism-ಸಂದೇಹ ಅಥವಾ ಅಪನಂಬಿಕೆ; ನಾಲಿಗೆಯಿಂದ ನಾಲ್ಕು (1) Slander : ಹೀಯಾಳಿಕೆ, (2) Abuse ; ನಿಂದೆ, (3) Gossip ; ದೂರು ಅಥವಾ ಚಾಡಿ ಹೇಳುವುದು (4) Lying : ಸುಳ್ಳು ಹೇಳುವುದು; ದೇಹ ದಿಂದ ಮೂರು : (1) Killing : ಹಿಂಸೆ ಅಥವಾ ಕೊಲೆ; (2) Stealing : ಕಳವು : (3) Adultery : ವ್ಯಭಿಚಾರ, ಈ ಹತ್ತೂ ರಾವಣನ ಹತ್ತು ತಲೆ ಗಳಿದ್ದಂತೆ. ಶ್ರೀರಾಮನೇ ರಾವಣನ ಹತ್ತು ತಲೆಗಳನ್ನು ಕತ್ತರಿಸಲು ಸಮರ್ಥ. ನಮ್ಮ ಹತ್ತು ದುರ್ಗುಣಗಳು ಹೋಗಲು ರಾಮನಾಮವೇ ಔಷಧ. ಇದನ್ನೇ ಪುರಂದರದಾಸರು ಸಾರಿದರು. "ರಾಮ ನಾಮವ ಜಪಿಸೋ ಹೇ ಮನುಜ" ಎಂದು.

ಇನ್ನು ಶ್ರೀರಾಮನ ಏಕಾಂತ ಭಕ್ತ ಶಿಖಾಮಣಿಯಾದ ಶ್ರೀ ಮಧ್ವಾಚಾರ್ಯರ ವೈಶಿಷ್ಟ್ಯವನ್ನು ತಿಳಿಯೋಣ. ಈ ಸಂದರ್ಭದಲ್ಲಿ ನಾವು ಒಂದು ವಿಷಯವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಶಂಕರಾಚಾರ್ಯರಿಗೂ, ರಾಮಾನುಜಾಚಾರ್ಯರಿಗೂ ಸಂಸ್ಕೃತ ಜ್ಞಾನ ಕಡಿಮೆ ಇತ್ತೆಂದಲ್ಲ. ಅವರಿಬ್ಬರೂ ಬಹಳ ಮೇಧಾವಿಗಳು. ಅವರು ರಚಿಸಿರುವ ಸಂಸ್ಕೃತ ಗ್ರಂಥಗಳ ಶೈಲಿ ಬಹಳ ಅದ್ಭುತ ಮತ್ತು ಗಂಭೀರ. ಅವುಗಳ ಅರ್ಥವನ್ನು ತಿಳಿಯಲು ಶ್ರೇಷ್ಠ ವಿದ್ವಾಂಸರಿಗೂ ಕಷ್ಟಸಾಧ್ಯವೆಂದು ಇಡೀ ಜಗತ್ತೇ ಹೊಗಳುತ್ತದೆ. ಹೀಗಿರುವಾಗ ಶ್ರೀ ಮಧ್ವಾಚಾರ್ಯರ ವೈಶಿಷ್ಟ್ಯವೇನು? ಎಂಬ ಪ್ರಶ್ನೆ ಬರುತ್ತದೆ. ಮಧ್ವಾಚಾರ್ಯರ ವೈಶಿಷ್ಟ್ಯ ಉಂಟು. ಮಧ್ವಾಚಾರ್ಯರು ತೋರಿಸಿದ್ದೇನೆಂದರೆ ಬರೇ ಸಂಸ್ಕೃತ ಭಾಷಾಪಾಂಡಿತ್ಯದ ಬಲದಿಂದ ವೇದದಲ್ಲಿ ಬರುವ ಸಂಸ್ಕೃತ ಶಬ್ದಗಳ ಅರ್ಥ ಮಾಡಿಕೊಳ್ಳುವುದು ಸಾಧ್ಯವಿಲ್ಲ. ಅಪಾರ್ಥವಾಗುವ ಸಂಭವವೇ ಹೆಚ್ಚು. ಈ ರೀತಿಯನ್ನು ನೋಡಿ ನನ್ನಂತಹ ಕುಹಳೆಗಳು ಸಂಸ್ಕೃತದ ಪಾಡೇ ಹೀಗೆಂದು ಸಂಸ್ಕೃತವನ್ನು ಕಲಿಯಲಿಕ್ಕೇ ಪ್ರಯತ್ನಿಸುವುದಿಲ್ಲ ಎನ್ನುತ್ತೇವೆ. ಈಗ ನಾವು ಕನ್ನಡವನ್ನು ಹೇಗೆ ಬಳಸುತ್ತೇವೆಂಬುದನ್ನು ನೋಡೋಣ. ನಾವು ಬೆಂಗಳೂರಿಗೆ ಹೊರಟು ಯಶ್ವಂತಪುರ ದಾಟಿದ ಕೂಡಲೆ "ಬೆಂಗಳೂರು ಬಂತು" ಎನ್ನುತ್ತೇವೆ. ಬೆಂಗಳೂರು ಬರಲೂ ಇಲ್ಲ, ಹೋಗಲೂ ಇಲ್ಲ. ಅದು ಇದ್ದಲ್ಲಿಯೇ ಇದೆ. "ಬಂತು" ಎಂದರೆ ನಾವು ಸೇರಿದೆವು ಎಂದರ್ಥ. ಮನೆಯಲ್ಲಿ 'ಕೋತಿ ಬಂತು' ಎಂಬಲ್ಲಿ "ಬಂತು" ಎಂಬುವುದು ಈ ಅರ್ಥ ಕೊಡುವುದಿಲ್ಲ. ನಮ್ಮನ್ನು ಕಾಣಲು ಬಂದ ವ್ಯಕ್ತಿ ಸ್ವಲ್ಪ ಹೊತ್ತು ಮಾತನಾಡಿದ ಮೇಲೆ "ನಾನು ಬರ್ತೀನಿ" ಎನ್ನುತ್ತಾನೆ. "ಬರ್ತೀನಿ" ಎಂದರೆ "ಹೋಗ್ತೀನಿ" ಎಂದು ಅರ್ಥ. ಬೇರೆ ಊರಿನಲ್ಲಿರುವ ಮಗನು "ನಾಳೆ ಬರ್ತೀನಿ" ಎಂದು ಕಾಗದ ಬರೆದರೆ "ಬರ್ತೀನಿ"

ಎಂಬುವುದು ಈ ಅರ್ಥಕೊಡುವುದಿಲ್ಲ. ನಾವು ಬಳಸುವ ಕನ್ನಡ ಶಬ್ದಗಳೇ ಈ ರೀತಿ ಇರುವಾಗ ವೇದದಲ್ಲಿ ಬರುವ ಪರತತ್ತ್ವವನ್ನು ತಿಳಿಸಿಕೊಡುವ ಸಂಸ್ಕೃತ ಶಬ್ದಗಳನ್ನು ಅರ್ಥಮಾಡಿಕೊಳ್ಳಲು ಸಂಸ್ಕೃತ ಭಾಷಾ ಜ್ಞಾನವೇ ಸಾಲದು ಎಂದರೆ ಆಶ್ಚರ್ಯವೇನಿಲ್ಲ, ವೇದಕ್ಕೆ ವೇದವೇ ವ್ಯಾಖ್ಯಾನ. ತಾತ್ಪರ್ಯಲಿಂಗಗಳಲ್ಲದೆ "ಶಬ್ದ ನಿರ್ಣಯ", "ಬ್ರಹ್ಮ ತರ್ಕ" ಮುಂತಾದ ಗ್ರಂಥಗಳು ವೇದದ ಭಾಷೆಯನ್ನು ತಿಳಿದುಕೊಳ್ಳಲು ಸಹಾಯವಾಗುತ್ತವೆ ಎಂದು ಶ್ರೀ ಮಧ್ವಾಚಾರ್ಯರು ತೋರಿಸಿದುದೇ ಅವರ ವೈಶಿಷ್ಟ್ಯ. ಉದಾಹರಣೆಗೆ, "ನಿರ್ಗುಣ" ಎಂಬ ಶಬ್ದ ತೊಗೊಳ್ಳೋಣ. ಭಾಷಾ ಬಲದಿಂದ "ನಿರ್ಗುಣ" ಎಂದರೆ ಯಾವ ಗುಣವೂ ಇಲ್ಲ ಎಂದಾಗುತ್ತದೆ. ಆದರೆ ವೇದದಲ್ಲಿ ಬರುವ "ನಿರ್ಗುಣ" ಶಬ್ದ ಗುಣಗಳನ್ನು ಸಹಿಸತಕ್ಕದ್ದು. ಹೇಗೆಂದರೆ ಶ್ವೇತಾಶ್ವತರ ಶ್ರುತಿ ಹೇಳುತ್ತದೆ. "ಏಕೋ ದೇವಃ ಸರ್ವ ಭೂತೇಷು ಗೂಢಃ ಸರ್ವವ್ಯಾಪ್ತೀ ಸರ್ವಾಭೂತಾಂತರಾತ್ಮಾ। ಕರ್ಮಾಧ್ಯಕ್ಷಃ ಸರ್ವ ಭೂತಾದಿವಾಸಃ ಸಾಕ್ಷೀ ಚೇತಾ, ಕೇವಲೋ ನಿರ್ಗುಣಶ್ಚ" ಎಂದು. ಇದು ಬ್ರಹ್ಮನ ಮಹಿಮೆ. ಇಲ್ಲಿ (1 ಏಕಃ, 2) ದೇವಃ, 3) ಸರ್ವ ಭೂತೇಷು ಗೂಢಃ, 4) ಸರ್ವವ್ಯಾಪ್ತೀ 5) ಸರ್ವ ಭೂತಾಂತರಾತ್ಮ 6) ಕರ್ಮಾಧ್ಯಕ್ಷಃ 7) ಸರ್ವ ಭೂತಾಧಿವಾಸಃ. 8) ಸಾಕ್ಷಿಃ 9) ಚೇತಃ 10) ಕೇವಲಃ ಎಂಬ ಹತ್ತು ಗುಣಗಳುಳ್ಳವನು "ನಿರ್ಗುಣ" ಎಂದು ಹೇಳುತ್ತದೆ. ಬ್ರಹ್ಮ ನಿರ್ಗುಣನಾದ್ದರಿಂದಲೇ ಈ ರೀತಿ ಹತ್ತು ಗುಣಗಳನ್ನು ಉಳ್ಳವನಾಗಲಿಕ್ಕೆ ಸಾಧ್ಯ ವೆಂದು ಇದರ ಅಭಿಪ್ರಾಯ. ಇಲ್ಲಿ ಹೇಳಿರುವ ಒಂದೊಂದು ಗುಣವೂ ಅನಂತಾರ್ಥಗಳುಳ್ಳವು. ಈಗ "ಏಕಃ" ಎಂಬುವ ಒಂದು ಶಬ್ದದ ಒಂದು ಅರ್ಥ ತೆಗೆದುಕೊಳ್ಳೋಣ. 'ಏಕ' ಎಂದರೆ ಒಂದು. ಎಂದರೆ ಅಖಂಡ ಎಂದರ್ಥ. ಬ್ರಹ್ಮ ಅಖಂಡ ವಸ್ತು, ಬ್ರಹ್ಮನಲ್ಲಿ ಭೇದವಿಲ್ಲ. ಅಂದರೆ ಬ್ರಹ್ಮನ ಮೂಲ ರೂಪಕ್ಕೂ ಅವನು ತೆಗೆದು ಕೊಂಡ ಅನಂತ ರೂಪಗಳಿಗೂ ಭೇದವಿಲ್ಲ. ಇದನ್ನೆ ವೇದ "ನೇಹ ನಾನಾಸ್ತಿ ಕಿಂಚನ" ಎಂಬ ವಾಕ್ಯದಿಂದ ಸ್ಪಷ್ಟಪಡಿಸಿದೆ. "ಇಹ" ಎಂದರೆ ಬ್ರಹ್ಮನಲ್ಲಿ "ನಾನಾ" ಎಂದರೆ ಯಾವ ವಿಧವಾದ ಭೇದವು "ನಾಸ್ತಿ ಕಿಂಚನ" ಎಂದರೆ ಸ್ವಲ್ಪವೂ ಇಲ್ಲ, ಎಂದು. ಬ್ರಹ್ಮ ಅಖಂಡನಾಗಿರುವಾಗ ಮಧ್ವಾಚಾರ್ಯರು ಬ್ರಹ್ಮನ ಮೂಲ ರೂಪ ಬೇರೆ, ಅವತಾರ ರೂಪಗಳು ಬೇರೆ, ಅಂತರ್ಯಾಮಿ ರೂಪಗಳು ಬೇರೆ, ಇತ್ಯಾದಿ. ಈ ರೀತಿ ಹೇಳುತ್ತಾರೆಂದು ಭಾವಿಸುವುದು ತಪ್ಪು, ಬ್ರಹ್ಮನ ಎಲ್ಲಾ ರೂಪಗಳೂ ಒಂದೇ ಎಂಬುದು ಮಧ್ವಾಚಾರ್ಯರ ಹೇಳಿಕೆ. ಈಗ "ಒಂದೇ" ಎಂದರೇನು? "ಒಂದೇ" ಎಂದರೆ 'ಗುಣಪೂರ್ಣ' ಎಂದರ್ಥ. ಇದು ವೇದ ಎಲ್ಲಿ ಹೇಳಿದೆ ಎಂದರೆ. "ಪೂರ್ಣಮದಃ ಪೂರ್ಣಮಿದಂ, ಪೂರ್ಣಾತ್ಪೂರ್ಣ ಮುದಚ್ಯತೇ। ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ॥ ಎಂದು. ಬ್ರಹ್ಮನ ಮೂಲ ರೂಪವೂ ಪೂರ್ಣ, ಅವನು ತೆಗೆದುಕೊಂಡ

ಅನಂತ ರೂಪಗಳು ಮೂಲರೂಪದಿಂದಲೇ ಬಂದವು, ಅವುಗಳೂ ಪೂರ್ಣ. ಪೂರ್ಣ ರೂಪದಿಂದ ಪೂರ್ಣ ರೂಪಗಳು ಬಂದು ಪೂರ್ಣ ರೂಪದಲ್ಲಿ ಸೇರುತ್ತವೆ, ಎಂದರ್ಥ. ಇದೇ ಬ್ರಹ್ಮ ಏಕ ಅಥವಾ ಅಖಂಡ ಎಂಬುದರ ಅರ್ಥ. ಇದೇ ಆವನ ಮಹಿಮೆ. ಹೀಗಿರಲಿಕ್ಕೆ ಅವನು "ನಿರ್ಗುಣ" ನಾಗಿದ್ದರೇ ಸಾಧ್ಯವೆಂದು ವೇದ ಹೇಳುತ್ತದೆ. ವೇದಾಂತ ಭಾಷೆಯಲ್ಲಿ "ಗುಣ" ಎಂಬ ಶಬ್ದ ಪ್ರಕೃತಿ ಯಿಂದ ಬಂದ ಸತ್ವ, ರಜಸ್, ತಮಸ್ ಎಂಬ ಮೂರು ಗುಣಗಳನ್ನು ತೋರಿಸು ತ್ತದೆ. ಬ್ರಹ್ಮನು "ನಿರ್ಗುಣ" ನೆಂದರೆ ಬ್ರಹ್ಮನು ಪ್ರಕೃತಿ ಸಂಬಂಧವಾದ ಮೂರು ಗುಣಗಳಿಲ್ಲದವನು ಎಂದರ್ಥ. ಪ್ರಕೃತಿಯ ಗುಣಗಳು ದೋಷಗಳು. ಇವುಗಳಿಲ್ಲದ ಬ್ರಹ್ಮ "ನಿರ್ದೋಷ". ಇದನ್ನೇ ಮಧ್ವಾಚಾರ್ಯರು, ಬ್ರಹ್ಮನು "ಅನಂತ ಕಲ್ಯಾಣ ಗುಣ ಪರಿಪೂರ್ಣ ನಿರ್ದೋಷ" ಎಂದು ಕರೆದಿರುವರು. ಬ್ರಹ್ಮನ ಗುಣಗಳು "ಅಪ್ರಾಕೃತ" ಆದ ಕಾರಣ ಅವನ ಗುಣಗಳಲ್ಲಿ ಪರಸ್ಪರ ಭೇದವಿಲ್ಲ. ಇದೇ 'ಏಕ' ಅಥವಾ "ಅಖಂಡ" ಎಂಬುದರ ಅರ್ಥ. ಒಂದು ಲೌಕಿಕ ಉದಾಹರಣೆ ಇದನ್ನು ಸ್ಪಷ್ಟಪಡಿಸುತ್ತಿದೆ. ನಾನು 5 ಅಡಿ 6 ಅಂಗುಲ ಎತ್ತರ ಇದ್ದೇನೆ. 7 ಅಡಿ ಆಗಲಿಕ್ಕೆ ಸಾಧ್ಯವೊ ? ಇಲ್ಲ. 3 ಅಡಿ ಆಗಲಿಕ್ಕೆ ಸಾಧ್ಯವೋ ? ಇಲ್ಲ. ಏಕಕಾಲದಲ್ಲಿ 7 ಅಡಿಯೂ 3 ಅಡಿಯೂ ಆಗಲಿಕ್ಕೆ ಸುತರಾಂ ಸಾಧ್ಯವಿಲ್ಲ. ಏಕೆಂದರೆ, ನನ್ನ ದೇಹ ಪ್ರಕೃತಿಯಿಂದ ಬಂದ ಸತ್ವ, ರಜಸ್, ತಮಸ್ ಎಂಬ ಮೂರು ಗುಣಗಳಿಂದ ಮಾಡಿದ್ದು. ಆದರೆ ಶ್ರೀಕೃಷ್ಣ ಯಶೋದೆಯ ತೊಡೆಯ ಮೇಲೆ ಕುಳಿತಿದ್ದಾಗಲೇ ತನ್ನ ಬಾಯಿಯಲ್ಲಿ 14 ಲೋಕಗಳನ್ನೇ ಯಶೋದೆಗೆ ತೋರಿಸಿದ. ಹೇಗೆ ಸಾಧ್ಯವಾಯಿತೆಂದರೆ ಅವನ ದೇಹ ಅಪ್ರಾಕೃತ. ಪ್ರಕೃತಿಯ ಗುಣಗಳ ಸಂಬಂಧವಿಲ್ಲದ್ದು. ಯುದ್ಧಭೂಮಿ ಯಲ್ಲಿ ರಥದಲ್ಲಿದ್ದಾಗಲೇ ಶ್ರೀಕೃಷ್ಣ ದಿವ್ಯ ಕಣ್ಣುಗಳನ್ನು ಪಡೆದ ಅರ್ಜುನನಿಗೆ ವಿಶ್ವರೂಪ ತೋರಿಸಿದ. ಅಪ್ರಾಕೃತ ಶರೀರವಾದ್ದರಿಂದಲೇ ಇದು ಸಾಧ್ಯ ವಾಯಿತು. ಇದನ್ನು ತಿಳಿಯಲು ದಿವ್ಯ ಕಣ್ಣುಗಳುಬೇಕು. ನಮ್ಮ ಅಂತಸ್ಥಿಗೆ ಬರುವಷ್ಟರಲ್ಲಿ ಆವನು ನೀಲವರ್ಣನಾದ. ಬಲರಾಮ, ಲಕ್ಷ್ಮಣರು ಕೆಂಪು, ಕೃಷ್ಣ, ರಾಮ ನೀಲಿ, ಏಕೆಂದರೆ ನೀಲಿ ಬಣ್ಣ 'ಅಪಾರ' ಎಂಬುದನ್ನು ಸೂಚಿಸುತ್ತಿದೆ. ಸಮುದ್ರ ನೀಲಿ, ಆಕಾಶ ನೀಲಿ, ಹೀಗೆ 'ಏಕ' ಎಂಬ ವೇದದಲ್ಲಿ ಬರುವ ಶಬ್ದ ಬ್ರಹ್ಮನ ರೂಪಗಳಿಗಾಗಲಿ, ಅವನ ಗುಣಗಳಿಗಾಗಲಿ, ಅವಯುವಗಳಿಗಾಗಲಿ ಭೇದ ವಿಲ್ಲವೆಂದು ಹೇಳಿ, ಇದು ಅವನು "ನಿರ್ಗುಣ" ನಾದ್ದರಿಂದಲೇ ಸಾಧ್ಯ ಎಂದು ತೋರಿಸುತ್ತಿದೆ.

ಈ ಸಂದರ್ಭದಲ್ಲಿ ಮಧ್ವಾಚಾರ್ಯರ ಬಗ್ಗೆ ಗಮನಿಸಬೇಕಾದ ಒಂದು ವಿಷಯ.

ಅವರು ಗೋವಾಕ್ಕೆ ಹೋದಾಗ ಊಟ ಮಾಡಿದ ಮೇಲೆ 4,000 ಬಾಳೆ ಹಣ್ಣು ಗಳನ್ನು ತಿಂದು 30 ಕೊಡ ಹಾಲು ಕುಡಿದರೆಂದೂ, ಆದರೂ ಅವರ ಹೊಟ್ಟೆಯ ಗಾತ್ರ ದೊಡ್ಡದಾಗಲಿಲ್ಲವೆಂದೂ "ಸುಮಧ್ವ ವಿಜಯ" ತಿಳಿಸುತ್ತದೆ. "ಸುಮಧ್ವ ವಿಜಯ" ಎಂಬುದು ಸಮಕಾಲೀನರಾದಂಥಾ ನಾರಾಯಣ ಪಂಡಿತಾಚಾರ್ಯರು ಬರೆದ ಮಧ್ವಾಚಾರ್ಯರ ಜೀವನ ಚರಿತ್ರೆ. ಈ ರೀತಿ ಮಾಡಲಿಕ್ಕೆ ಮಧ್ವಾಚಾರ್ಯರ ಶರೀರ ಅಪ್ರಾಕೃತವಾದ್ದರಿಂದಲೇ ಸಾಧ್ಯವಾಯಿತು, ಎಂದು ಬೇರೆ ಹೇಳ ಬೇಕಾಗಿಲ್ಲ. ಅವರು ಅವತಾರಮಾಡಿ ಜನರ ಕಣ್ಣಿಗೆ ಮನುಷ್ಯ ಶರೀರದಿಂದ ಕಾಣಿಸಿಕೊಂಡು ತಮ್ಮ ಕಾರ್ಯ ಮುಗಿದ ಮೇಲೆ ಅದೃಶ್ಯರಾದರು. ಇದೇ ಅವರ ವೈಶಿಷ್ಟ್ಯ. ಆದರೆ ಮಧ್ವಾಚಾರ್ಯರು 4,000 ಬಾಳೆ ಹಣ್ಣುಗಳನ್ನು ತಿಂದ ಮೇಲೆ, ನಾವು 40 ಆದರೂ ತಿನ್ನಬೇಕೆಂಬುವರು ಮಾಧ್ವ ಸಮಾಜದಲ್ಲಿದ್ದು, ಮಾಧ್ವ ರೆಂದರೆ ತೀರ್ಥ ಪ್ರಸಾದದವರೆಂದು (ತಿಂಡಿ ಪೋತಗಳು) ಹೀಯಾಳಿಕೆಗೆ ಒಳಗಾಗಿರುವುದು ಶೋಚನೀಯ ವಿಷಯ.

ವೇದದ ಇನ್ನೊಂದು ವಾಕ್ಯ ತೆಗೆದುಕೊಳ್ಳೋಣ. "ಸರ್ವಂಖಲ್ವಿದಂ ಬ್ರಹ್ಮ" ಎಂಬುದು. ಭಾಷಾರೀತ್ಯಾ "ಇದೆಲ್ಲವೂ ಅಂದರೆ ನಮ್ಮ ಅನುಭವಕ್ಕೆ ಬರುವ ಜಗತ್ತೆಲ್ಲವೂ ಬ್ರಹ್ಮನೇ ಸರಿ" ಎಂದಾಗುತ್ತದೆ. ಈ ಅರ್ಥವೇ ರೂಢಿಯಲ್ಲಿ ಬಂದು "ಜಗವೆಲ್ಲವೂ ಬ್ರಹ್ಮಮಯ" "ಜಗವೆಂತಾ ರಾಮಮಯಂ" ಎಂದು ಹೇಳುವ ವಾಡಿಕೆ ಬಂದಿದೆ. ಮಧ್ವಾಚಾರ್ಯರು ಈ ರೀತಿ ಅರ್ಥ ಮಾಡುವುದು ವಿಪರೀತವಾಗುತ್ತದೆಂದು ತೋರಿಸಿದ್ದಾರೆ. ಹೇಗೆಂದರೆ "ಇದರ" ಎಂದರೆ ನಮ್ಮ ಅನುಭವಕ್ಕೆ ಬರುವ ಜಗತ್ತಿನ, ಜ್ಞಾನವಾದರೆ ಬ್ರಹ್ಮನ ಜ್ಞಾನ ವಾದಂತಾಯಿತು. ಇದರಿಂದ ಬೀದಿಯಲ್ಲಿ ಕಸ ಗುಡಿಸುವನಿಂದ ಹಿಡಿದು ಪ್ರಖ್ಯಾತ ಡಾಕ್ಟರುಗಳೂ, ವಿಜ್ಞಾನಿಗಳೂ, ಮೊದಲಾದವರೆಲ್ಲಾ ತಮ್ಮ ತಮ್ಮ ಜಗತ್ತಿನ ಜ್ಞಾನಕ್ಕೆ ಅನುಗುಣವಾಗಿ ಬ್ರಹ್ಮಜ್ಞಾನಿಗಳಾಗಿ, ಇದು ಅಂದರೆ ಅನುಭವಕ್ಕೆ ಬರುವ ಜಗತ್ತು ಬ್ರಹ್ಮನಲ್ಲ "ನೇತಿ, ನೇತಿ" ಎಂದು ತಿಳಿದು ಕಣ್ಣು ತೆಗೆದರೆ ಬ್ರಹ್ಮನಲ್ಲದ್ದಲ್ಲಿ ಕಾಣುವುದೋ ಎಂಬ ಭಯದಿಂದ ಕಣ್ಣು ಮುಚ್ಚಿ, ಬ್ರಹ್ಮನಲ್ಲದ ವಿಚಾರ ಬಿಡುವುದಕ್ಕಾಗಿ ಏಕಾಂತದಲ್ಲಿದ್ದು, ಆಹಾರ, ನಿದ್ರೆಗಳನ್ನು ತೊರೆದು ಬ್ರಹ್ಮನನ್ನು ಕಾಣುವ ಪ್ರಯತ್ನ ಮಾಡುವ ತಪಸ್ವಿಗಳೆಲ್ಲರೂ ಭ್ರಾಂತರಾಗ ಬೇಕಾಗುವ ದುಸ್ಥಿತಿ ಬರಬೇಕಾಗುತ್ತದೆ. ಹಾಗಾದರೆ ವೇದವಾಕ್ಯದ ಅರ್ಥ ವೇನೆಂದರೆ ಜಗತ್ತು ಸರ್ವಾಂಶದಲ್ಲಿಯೂ ಸ್ವತಂತ್ರನಾದ ಬ್ರಹ್ಮನ ಅಧೀನದಲ್ಲಿರು ವುದರಿಂದ ಬ್ರಹ್ಮನೇ ಎಂದು ಹೇಳುವ ಪದ್ಧತಿ. ಬ್ರಹ್ಮನನ್ನು ಬಿಟ್ಟು ಜಗತ್ತು ಇಲ್ಲ. ಆದರೆ ಜಗತ್ತೇ ಬ್ರಹ್ಮನಲ್ಲ. ವೇದಾಂತ ಭಾಷೆಯಲ್ಲಿ ಹೇಳುವುದಾದರೆ

ಜಗತ್ತು ಬ್ರಹ್ಮನಿಂದ ಅನನ್ಯ, ಬ್ರಹ್ಮ ಜಗತ್ತಿನಿಂದ ಅನ್ಯ. ಉದಾಹರಣೆಗೆ ಯುದ್ಧ ದಲ್ಲಿ ರಾಜ ಗೆದ್ದ ಎಂದು ಹೇಳುವ ವಾಡಿಕೆ. ವಾಸ್ತವವಾಗಿ ಯುದ್ಧದಲ್ಲಿ ಗೆದ್ದದ್ದು ಸೈನಿಕರು. ರಾಜ ತನ್ನ ಅರಮನೆಯಲ್ಲಿಯೇ ಸುಖವಾಗಿದ್ದ. ಆದರೂ ಸೈನಿಕರೆಲ್ಲಾ ರಾಜನ ಅಧೀನರಾಗಿದ್ದ ಕಾರಣ, ರಾಜ ಗೆದ್ದ ಎಂದು ಹೇಳವುದು.

ಈ ರೀತಿಯಲ್ಲಿ ವೇದಗಳಿಗೂ. ಬ್ರಹ್ಮ ಸೂತ್ರಗಳಿಗೂ. ಭಗವದ್ಗೀತೆಗೂ ಅಸಾಧಾರಣವೂ ಪ್ರಮಾಣ ಸಮ್ಮತವೂ ಆದ ವ್ಯಾಖ್ಯಾನ ಮಾಡಿ ತತ್ತ್ವಜ್ಞಾನವು ಸರಿಯಾದ ರೀತಿಯಲ್ಲಿ ಆಗುವಂತೆ ತಮ್ಮ ಸಿದ್ಧಾಂತವನ್ನು ಸ್ಥಾಪಿಸಿದುದೇ ಶ್ರೀ ಮಧ್ವಾಚಾರ್ಯರ ವೈಶಿಷ್ಟ್ಯ

ಇಲ್ಲಿ ಒಂದು ಪ್ರಶ್ನೆ ಬರುತ್ತದೆ. ಮಧ್ವಾಚಾರರ್ಯರಿಗೆ ಮಾತ್ರ ಈ ರೀತಿ ಅರ್ಥ ಹೊಳೆಯಿತು, ಬೇರೆ ಆಚಾರ್ಯರಿಗೆ ಏಕೆ ಹೊಳೆಯಲಿಲ್ಲ? ಎಂದು. ಇದಕ್ಕೆ ಉತ್ತರ ಹೀಗಿದೆ. ಮಧ್ವಾಚಾರ್ಯರು ಋಜುಗುಣ ಶ್ರೇಷ್ಠರಾದ ವಾಯುದೇವರ ಅವತಾರವಾದುದರಿಂದಲೇ ವೇದಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಯಿತು. ಇತರ ಆಚಾರ್ಯರಿಗೆ ಈ ಯೋಗ್ಯತೆ ಇರಲಿಲ್ಲ. "ಋಜುಗುಣಸ್ಥ" ಎಂದರೆ ಅಜ್ಞಾನ, ವಿಪರೀತ ಜ್ಞಾನ, ಅರಿಷಡ್ವರ್ಗದ ದೋಷವಿಲ್ಲದ ಜೀವೋತ್ತಮರೆಂದರ್ಥ. ಮಿಕ್ಕವರೆಲ್ಲಾ ಅಜ್ಞಾನ ವಿಪರೀತ ಜ್ಞಾನಕ್ಕೆ ಬಲಿಯಾದವರೇ. ಇದನ್ನು ಸ್ವಲ್ಪ ವಿಚಾರಿಸೋಣ. ನಮ್ಮ ಆಚಾರ್ಯರಿಗೆ "ಮಧ್ವ" ಎಂಬ ಹೆಸರು ಹೇಗೆ ಬಂತು? ತಂದೆ. ತಾಯಿಗಳು "ವಾಸುದೇವ ಎಂಬ ಹೆಸರು ಕೊಟ್ಟರು. ಸನ್ಯಾಸ ಕೊಟ್ಟ ಅಚ್ಯುತ ಪ್ರೇಕ್ಷರು "ಪೂರ್ಣಪ್ರಜ್ಞ" ಎಂದು ಹೆಸರಿಟ್ಟರು. ವೃದ್ಧ ಸನ್ಯಾಸಿ ಒಬ್ಬರನ್ನು ವಾದದಲ್ಲಿ ಗೆದ್ದದ್ದರಿಂದ "ಅನುಮಾನ ತೀರ್ಥ" ಎಂಬ ಬಿರುದು ಪಡೆದರು. ವೇದಾಂತ ಸಾಮ್ರಾಜ್ಯ ಪಟ್ಟಾಭಿಷೇಕ ಕಾಲದಲ್ಲಿ "ಆನಂದ ತೀರ್ಥ" ಎಂಬ ಹೆಸರಿಟ್ಟರು. ಆದರೆ ಇವುಗಳಾವೂ ಪ್ರಸಿದ್ಧಿಯಲ್ಲಿಲ್ಲ. "ಮಧ್ವ" ಎಂಬ ಹೆಸರನ್ನು ಯಾರೂ ಕೊಡಲಿಲ್ಲ. ಆದರೆ ಈ ಹೆಸರೇ ಲೋಕವಿಖ್ಯಾತವಾಗಿದೆ. "ಮಧ್ವ" ಎಂಬ ಹೆಸರನ್ನು ಆಚಾರ್ಯರು ತಾವೇ ಸ್ವೀಕರಿಸಿದರು. ಋಗ್ವೇದದಲ್ಲಿ ಬರುವ "ಬಳಿತ್ಥಾ ಸೂಕ್ತ"ದ ವಾಕ್ಯಗಳನ್ನು ತಮ್ಮ ಗ್ರಂಥಗಳ ಕೊನೆಯಲ್ಲಿ ಉದಾಹರಿಸಿ ಅದರಲ್ಲಿ ಬರುವ ವಾಯುದೇವರ ಮೂರನೇ ಅವತಾರವಾದ "ಮಧ್ವ" ಎಂಬುವರು ತಾವೇ ಎಂದು ಹೇಳಿಕೊಂಡಿದ್ದಾರೆ. "ಯದೀ ಮನು ಪ್ರದಿವೋ ಮಧ್ವ ಆಧವೇ ಗುಹಾಸಂತಂ ಮಾತರಿಶ್ವಾಮಥಾಯತಿ॥" ಎಂಬುದು ಬಳಿತ್ಥಾ ಸೂಕ್ತದ ವಾಕ್ಯ. "ವಾಯೋರ್ ರಾಮ ವಚೋ ನಯಂ ಪ್ರಥಮಶಂ ಪೃಕ್ಷೋ ದ್ವಿತೀಯಂ ವಪುಃ ಮಧ್ವೋ

ಯಸ್ತು ತೃತೀಯ ಮೋತದ ಮನಾ ಗ್ರಂಥಃ ಕೃತಃ ಕೇಶವೇ " ಎಂಬುದು ಆಚಾರ್ಯರ ವಾಕ್ಯ. ವಾಯು ದೇವರ ಮೂರನೇ ಅವತಾರವೇ ಜ್ಞಾನ ಪ್ರಕಾರಕ್ಕಾಗಿ ಆದ "ಮಧ್ವ" ಎಂಬುದು. ಹೀಗೆ ಶ್ರೀ ಮಧ್ವಾಚಾರ್ಯರ ಹೆಸರು ವೇದದಿಂದಲೇ ಬಂದದ್ದೆಂಬುದೇ ಅವರ ವೈಶಿಷ್ಟ್ಯ. ವಾಯು ದೇವರು ಜ್ಞಾನದಲ್ಲಿಯೂ ಬಲ ದಲ್ಲಿಯೂ ಎಲ್ಲಾ ದೇವತೆಗಳಿಗಿಂತಲೂ ಶ್ರೇಷ್ಠರು. ಅವರೇ ತಾವೆಂದು ಹೇಳುತ್ತಾ "ನಾಸ್ಮದುಕ್ತಿ ಸದೃಶಂ ಹಿತರೂಪಂ"—ನನ್ನ ವಾಕ್ಯಗಳಿಗೆ ಸಮಾನವಾದ ಹಿತಕರ ವಾದದ್ದು ಮತ್ತೊಂದಿಲ್ಲ-ಎಂದು ಘೋಷಿಸಿದ್ದಾರೆ.

ಇಲ್ಲಿ ಒಂದು ಆಕ್ಷೇಪಣೆ ಬರುತ್ತದೆ. ಒಬ್ಬ ವ್ಯಕ್ತಿ ತನ್ನ ಶ್ರೇಷ್ಠತೆಯನ್ನೂ ತಾನೇ ಹೇಳಿಕೊಳ್ಳುವುದು ಸರಿಯಲ್ಲ. ಇತರರು ಹೊಗಳಿದ್ದರಲ್ಲಿ ಮಹತ್ವವುಂಟು. ಕಾರಣ ಮಧ್ವಾಚಾರ್ಯರು ತಮ್ಮ ಶ್ರೇಷ್ಠತೆ ಬಗ್ಗೆ ಹೇಳಿಕೊಂಡಿರುವುದು ಸರಿಯಲ್ಲ ಎಂಬುದು ಆಕ್ಷೇಪ. ಉದಾಹರಣೆಗೆ: ನಾನೇ ಜಾಣನೆಂದು ಹೇಳಿಕೊಂಡರೆ ಆತ್ಮ ಪ್ರಶಂಸೆ ಎನ್ನುತ್ತಾರೆ. ಆದರೆ ಇತರರು ನನ್ನನ್ನು ಜಾಣನೆಂದು ಕರೆದರೆ ಅದಕ್ಕೆ ಬೆಲೆಯುಂಟು ಎಂಬುದು ವಾಡಿಕೆ. ಈ ಲೌಕಿಕ ಉದಾಹರಣೆ ಸರಿಯಲ್ಲ. ನನ್ನಲ್ಲಿರುವ ಹಿಮಾಲಯದಷ್ಟು ಅಜ್ಞಾನವನ್ನು ಒಂದು ಸಾಸಿವೆ ಕಾಳಿನಷ್ಟು ಜ್ಞಾನ ದಿಂದ ಮುಚ್ಚುವ ವಂಚನೆಯ ಪ್ರಯತ್ನವಾಗುತ್ತದೆ ನಾನೇ ಜಾಣನೆಂದು ಹೇಳಿ ಕೊಂಡರೆ. ಇತರರು ಜಾಣನೆಂದು ಕರೆದರೆ ಸಮುದ್ರದಷ್ಟು ದೋಷಗಳನ್ನು ಗಮನಿಸದೆ, ಒಂದು ಕೂಪದ ಅಲೆಯನ್ನು ನೋಡಿ ಸಮುದ್ರವೆಂದು ಕರೆದ ರೀತಿಯಲ್ಲಿ ಅಭಿಮಾನದ ಮಾತಾಗುತ್ತದೆ, ಅದ ಕಾರಣ ಎರಡೂ ತಪ್ಪೇ. ಉದಾಹರಣೆ ಬೇಕಾದರೆ ಭಗವದ್ಗೀತೆಯನ್ನು ತೆಗೆದುಕೊಳ್ಳೋಣ. ಶ್ರೀ ಕೃಷ್ಣನ ಉಪದೇಶದ ಸಾರವೆಂದರೆ: "ನಾನು ನನ್ನದು" "ಅಹಂಕಾರ ಮಮಕಾರ" ಗಳನ್ನು ಬಿಡಬೇಕೆಂಬುದು. ಆ ಶ್ರೀ ಕೃಷ್ಣ ತನ್ನ ಬಗ್ಗೆ ಹೇಳಿಕೊಳ್ಳುವುದು: "ಅಹಂ ಕೃತ್ಸ್ನಸ್ಯ ಜಗತಃ ಪ್ರಭವಃ ಪ್ರಲಯಸ್ತಥಾ". ಈ ಜಗತ್ತಿನ ಸೃಷ್ಟಿ, ಸ್ಥಿತಿ ಲಯಗಳನ್ನು ಮಾಡುವವನು ನಾನೇ. "ಮತ್ತಃ ಪರತರಂ ನಾನ್ಯ-ದಸ್ತಿ" ನನಗಿಂತಲೂ ಶ್ರೇಷ್ಠನಾದವನು ಬೇರೆ ಯಾರೂ ಇಲ್ಲ. "ಭಕ್ತಾಸ್ತೇಽತೀವ ಮೇ ಪ್ರಿಯಾಃ" ನನ್ನ ಭಕ್ತರು ನನಗೆ ಅತಿ ಪ್ರಿಯರು. "ಮನ್ಮನಾ ಭವ" ನನ್ನವ ನಾಗು. ಈ ರೀತಿ ಇದು ಅಹಂಕಾರ ಮಮಕಾರಗಳ ಮಯವಾಗಿದೆ ಎಂದು ತೋರುತ್ತದೆ. ಇತರರಿಗೆ ಇದು ದೋಷವೆಂದು ಬೋಧಿಸಿ, ತಾನು ಹೀಗೆ ಹೇಳಿ ಕೊಳ್ಳಬಹುದೋ? ಇದನ್ನು ದೋಷವೆಂದೆಣಿಸಿದರೆ ಭಗವದ್ಗೀತೆಯು ಪ್ರಮಾಣ ವೆನ್ನಲಾಗುತ್ತದೋ? ಆದರೆ ಭಗವದ್ಗೀತೆಯು ಶ್ರೇಷ್ಠ ಪ್ರಮಾಣ ಗ್ರಂಥವೆಂದು ಎಲ್ಲಾ ಆಚಾರ್ಯರೂ ಕರೆದಿದ್ದಾರೆ. ಅವರು ಕರೆದಿದ್ದರಿಂದ ಭಗವದ್ಗೀತೆಗೆ

ಪ್ರಮಾಣವುಟ್ಟ ಬರಲಿಲ್ಲ. ಗೀತೆಯನ್ನು ಪ್ರಮಾಣವೆಂದು ಒಪ್ಪಿದ್ದರಿಂದಲೇ ಇತರ ಆಚಾರ್ಯರ ಮಾತಿಗೆ ಬೆಲೆ. ಏಕೆಂದರೆ, ಎಲ್ಲಾ ಆಚಾರ್ಯರೂ ಸರ್ವದರ ಸರ್ವ ಅವಸ್ಥೆಗೂ ಸ್ವತಂತ್ರ ಕಾರಣನಾದವನು ಎಂದು ವೇದ ಹೇಳುವ ಬ್ರಹ್ಮನೇ ಶ್ರೀಕೃಷ್ಣ ರೂಪಿ ಪರಮಾತ್ಮನೆಂದು ಒಪ್ಪಿದಾರೆ. ಹೀಗೆ ಏಕೆಂದರೆ, ವೇದದಲ್ಲಿ ಬರುವ 'ಬ್ರಹ್ಮ' ಶಬ್ದ ನಪುಂಸಕ ಲಿಂಗದಲ್ಲಿದೆ. "ತದೈಕ್ಷತ"–ಅದು ನೋಡಿತು. "ತೇನವಿನಾ ತೃಣಮಪಿನಚಲತಿ"–ಅದನ್ನು ಬಿಟ್ಟು ಹುಲ್ಲುಕಡ್ಡಿಯೂ ಅಲ್ಲಾಡ ಲಾರದು. ಈ ರೀತಿ ಕಲಿಯುಗದಲ್ಲಿ ಬರುವ ನನ್ನಂತಹ ಕುಹಕಿಗಳು ಬ್ರಹ್ಮನ ಕುರಿತು ಬರುವ ವೇದ ವಾಕ್ಯಗಳು ಹುಚ್ಚನ ಮಾತುಗಳಂತಿವೆ ಎನ್ನುವರೆಂದು ತಿಳಿದೇ ವೇದವ್ಯಾಸರು ಆ ಬ್ರಹ್ಮನೇ ಪುರುಷ ರೂಪಿ ಕೃಷ್ಣನೆಂದು ಮಹಾಭಾರತದಲ್ಲಿ ಬರುವ ಭಗವದ್ಗೀತೆಯಲ್ಲಿ ತೋರಿಸಿರುವುದು. ವೇದದಲ್ಲಿಯೇ ಪುರುಷರೂಪದಲ್ಲಿದ್ದಿದ್ದರೆ, ಅವನಿಗೆ ತಂದೆ ಯಾರು? ಎಂಬ ಪ್ರಶ್ನೆಯೂ ಬರುತ್ತಿತ್ತು, ವೇದಗಳು ಪೌರು ಷೇಯ ಗ್ರಂಥಗಳಾಗುತ್ತಿದ್ದವು. ಈ ರೀತಿ ಸ್ವತಂತ್ರ ಚೇತನನಾದ ಶ್ರೀ ಕೃಷ್ಣನಲ್ಲಿ ನಾನು, ನನ್ನದು ಎಂಬುದು ದೋಷವಲ್ಲವೆಂದು ಎಲ್ಲಾ ಆಚಾರ್ಯರುಗಳು ಒಪ್ಪಿ ದ್ದಾರೆ. ಸ್ವತಂತ್ರನಿಗೇ ನಾನು, ನನ್ನದು ಎಂಬ ಹಕ್ಕು ಸಲ್ಲುತ್ತದೆ. ಅಸ್ವತಂತ್ರ ರಾದ ಜೀವರಲ್ಲಿ ಅಹಂಕಾರ, ಮಮಕಾರಗಳು ದೋಷಗಳು. ಇದೇ ರೀತಿಯಲ್ಲಿ ಶ್ರೀ ಮಧ್ವಾಚಾರ್ಯರು ಬಲದಲ್ಲಿಯೂ ಜ್ಞಾನದಲ್ಲಿಯೂ ಎಲ್ಲಾ ಜೀವಿಗಳಿಗಿಂತಲೂ ಶ್ರೇಷ್ಠರೆಂದು ಹೇಳಿಕೊಂಡಂತೆ ತಮ್ಮ ಜೀವನದಲ್ಲಿ ತೋರಿಸಿದ್ದಾರೆ. ಬೆಟ್ಟದಿಂದ ಬೆಟ್ಟಕ್ಕೆ ಹಾರುತ್ತಾ, ಬದರಿಯಿಂದ ಮನುಷ್ಯರಿಗೆ ಅತೀತವಾದ ವ್ಯಾಸಾಶ್ರಮಕ್ಕೆ ಹೋಗಿದ್ದು ಮುಂತಾದ ಕಾರ್ಯಗಳು ಅವರ ಬಲದ ಶ್ರೇಷ್ಠತೆಯನ್ನು ತೋರಿಸುತ್ತದೆ. ಇಲ್ಲಿ ಒಂದು ಗಮನದಲ್ಲಿಡತಕ್ಕ ವಿಷಯ. ವಾಯು ದೇವರ ಮೂರು ಅವತಾರ ಗಳಾದ ಹನುಮ, ಭೀಮ, ಮಧ್ವ ಎಂಬಲ್ಲಿ ಒಂದೇ ರೀತಿಯ ಕಾರ್ಯವನ್ನು ತೋರಿಸಿದ್ದಾರೆ. ಹನುಮಂತನಾಗಿ 800 ಯೋಜನವುಳ್ಳ ಸಮುದ್ರವನ್ನು ಲಂಘಿಸಿ ತಮ್ಮ ಬಗ್ಗೆ ಚಿಂತಾಕ್ರಾಂತರಾದ ವಾನರರಿಗೆ "ಕಂಡೆ ಸೀತೆ" ಎಂದು ಕೂಗಿ ಹರ್ಷವನ್ನುಂಟು ಮಾಡಿದರು. ಸೌಗಂಧಿಕಾ ಪುಷ್ಪವನ್ನು ತರಲಿಕ್ಕೆಂದು ಹೋದ ಭೀಮನು ತನ್ನ ಬಗ್ಗೆ ಚಿಂತಾಕ್ರಾಂತರಾದ ಧರ್ಮಾದಿಗಳಿಗೆ ಪುಷ್ಪ ತಂದು ಹರ್ಷವನ್ನುಂಟುಮಾಡಿದರು. ವ್ಯಾಸಾಶ್ರಮಕ್ಕೆ ಹೋಗಿದ್ದಾಗ ಬಹಳ ಚಿಂತಾ ಕ್ರಾಂತರಾಗಿದ್ದ ಸತ್ಯತೀರ್ಥ ಮೊದಲಾದ ಶಿಷ್ಯರಿಗೆ ತಿರುಗಿ ಬಂದು ಹರ್ಷವನ್ನುಂಟು ಮಾಡಿದರು. ಜ್ಞಾನ ವಿಷಯವಾಗಿ ನೋಡುವಾಗ, ಇತರರಿಗೆ ಪರಿಚಯವೇ ಇಲ್ಲದ ಮತ್ತು ಪ್ರಸಿದ್ಧವಿದ್ದ ಶ್ರುತಿ, ಸ್ಮೃತಿಗಳ ಸಾವಿರಾರು ವಾಕ್ಯಗಳನ್ನು ಉದಾಹರಿಸಿ ತಾವು ಹೇಳುವುದೆಲ್ಲಾ ಪ್ರಮಾಣ ಸಮ್ಮತವೆಂದು ಹೇಳಿದ್ದು ಅವರ ಜ್ಞಾನ ಶ್ರೇಷ್ಠತೆಯನ್ನು ತೋರಿಸುತ್ತದೆ. ಈ ಕಾರಣದಿಂದಾಗಿ ಶ್ರೀ ಮಧ್ವಾಚಾರ್ಯರು

ವಾಯುದೇವರ ಮೂರನೇ ಅವತಾರವೆಂದು ಹೇಳಿಕೊಂಡಿದ್ದು ತಪ್ಪಾಗದು. ಅಲ್ಲದೆ, ಇದು ಸಮಂಜಸವಾಗಿಯೇ ಇದೆ.

ಒಂದು ಲೌಕಿಕ ಉದಾಹರಣೆಯಿಂದ ಇದರ ಮಹತ್ವವನ್ನು ಇನ್ನೂ ಸ್ಪಷ್ಟ ಪಡಿಸಬಹುದು. England ನಲ್ಲಿ James I ಎಂಬ ರಾಜನು ಆಳುತ್ತಿದ್ದಾಗ Francis Bacom ಎಂಬ ಮಹಾ ಮೇಧಾವಿ ಅವನ ಮಂತ್ರಿ ಆಗಿದ್ದ. ಅವನ ಬುದ್ಧಿ ಕೌಶಲ್ಯಕ್ಕೆ ಅವನ ಒಂದು ವಾಕ್ಯವನ್ನು ಉದಾಹರಿಸ ಬಹುದು: Reading maketh a full man, conference a ready man, and writing an exact man. ಈ ವಾಕ್ಯ ಎಷ್ಟು ಅರ್ಥ ಗರ್ಭಿತವಾಗಿದೆ ಎಂಬುದು English ಬಲ್ಲವರಿಗೆ ತಿಳಿಯುತ್ತದೆ. ಇವನಿಗೆ James I, "Lord valercm, viscamt of Albans ಎಂಬ ಬಿರುದುಗಳನ್ನು ಕೊಟ್ಟನು. English ನವರ ಪದ್ಧತಿ ಪ್ರಕಾರ Lord ಎಂಬ ಬಿರುದು ಬಂದ ಮೇಲೆ ಮೊದಲಿನ ಹೆಸರಿನ ಬದಲು Lord ಎಂಬ ಬಿರುದಿನ ಹೆಸರೇ ಪ್ರಚಾರದಲ್ಲಿ ಬರುತ್ತದೆ. ಆದರೆ Francis Bacon ನ ವಿಷಯದಲ್ಲಿ ಹೀಗೆ ಬದಲಾವಣೆ ಆಗಲಿಲ್ಲ. ಇದನ್ನು ಚರ್ಚಿಸುವಾಗ Bacon ನ ಜೀವನ ಚರಿತ್ರೆ ಬರೆದ Macaulay ಎಂಬುವನು ಹೇಳುತ್ತಾನೆ: Bacon ನ ಯೋಗ್ಯತೆಯನ್ನು ಕಂಡುಕೊಳ್ಳಲು James I ಗೇ ಯೋಗ್ಯತೆ ಸಾಲದೆಂದು ಜನರೇ ತೋರಿಸಿದರೆನ್ನುತ್ತಾನೆ. ಮಧ್ವಾಚಾರ್ಯರ ವಿಷಯದಲ್ಲಿ "ಸುಮಧ್ವ ವಿಜಯ" ವನ್ನು ಓದುವಾಗ ಅಚ್ಯುತ ಪ್ರೇಕ್ಷಾಚಾರ್ಯರು ಗುರುಗಳಾಗಿದ್ದರೆಂದು ಭಾಸವಾಗುತ್ತದೆ. ಆದರೆ ಗುರುಪದವಿ ಹಾಗಿರಲಿ ಅಚ್ಯುತ ಪ್ರೇಕ್ಷಾಚಾರ್ಯರಿಗೆ ಹೆಸರು ಕೊಡುವ ಯೋಗ್ಯತೆಯೂ ಕೂಡ ಇರಲಿಲ್ಲ ಎಂದು ಇಡೀ ಪ್ರಪಂಚವೇ ತಿಳಿದೋ, ತಿಳಿಯದೆಯೋ ಒಪ್ಪಿಕೊಂಡಿದೆ. ಆಚಾರ್ಯರ ಹೆಸರು "ಮಧ್ವ" ಎಂದು ವೇದವೇ ಹೇಳಿದೆ. ಆಚಾರ್ಯರಿಗೆ ಗುರುಗಳು ನಾರಾಯಣನ ಅವತಾರರಾದ ವೇದವ್ಯಾಸರೇ. ಅಚ್ಯುತ ಪ್ರೇಕ್ಷಾಚಾರ್ಯರ ಗುರುತ್ವ ಶ್ರೀಕೃಷ್ಣನಿಗೆ ಸಾಂದೀಪನೀ ಗುರುತ್ವವಿದ್ದಂತೆಯೇ. ನೆಪಮಾತ್ರ ಇದೇ ಮಧ್ವಾಚಾರ್ಯರ ವೈಶಿಷ್ಟ್ಯ. ಹೀಗಿರುವಾಗ ಗುರುಪರಂಪರೆ ಎಂಬ ರೀತಿಯಲ್ಲಿ ಪುರಂದರದಾಸರ ಹೆಸರಿನಲ್ಲಿ ಒಂದು ಸ್ತೋತ್ರ ಬಂದಿರುವುದು ಶೋಚನೀಯ.

ಈಗ ಅದ್ವೈತಿಗಳು ಶಂಕರಾಚಾರ್ಯರ ಬಗ್ಗೆ, ಶ್ರೀ ವೈಷ್ಣವರು ರಾಮಾನುಜಾಚಾರ್ಯರ ಬಗ್ಗೆ ಏನು ಹೇಳಿಕೊಳ್ಳುತ್ತಾರೆ, ಅವರ ಹೇಳಿಕೆಗಳಿಗೆ ಎಷ್ಟು ಮಹತ್ವವಿದೆ ಎಂಬುದನ್ನು ವಿಚಾರಿಸೋಣ. ಅದ್ವೈತಿಗಳು ಹೇಳಿಕೊಳ್ಳುತ್ತಾರೆ ಶಂಕರಾಚಾರ್ಯರು ಶಿವನ ಅವತಾರವೆಂದು. ಶ್ರೀ ವೈಷ್ಣವರು ಹೇಳಿಕೊಳ್ಳುತ್ತಾರೆ ರಾಮಾನುಜಾಚಾರ್ಯರು

ಆದಿಶೇಷನ ಅವತಾರವೆಂದು. ಇದು ನಿಜವಾಗಿದ್ದರೆ ರುದ್ರದೇವರಿಗೆ ಮತ್ತು ಆದಿಶೇಷ ದೇವರಿಗೆ ತಿಳಿಯದ ವಿಷಯಗಳು ನಮಗೆ ತಿಳಿಯುತ್ತವೆಯೋ, ಮತ್ತು ಆ ದೇವತೆಗಳ ಹೇಳಿಕೆಯಲ್ಲಿ ವಿಶ್ವಾಸವಿಡುವುದು ತಪ್ಪಲ್ಲವೆಂದೂ ಭಾವನೆ ಬರುವುದು ಸಹಜ. ದೇವತೆಗಳ ತಾರತಮ್ಯ ಒಪ್ಪದಿದ್ದರೆ ಇದು ಇನ್ನೂ ಬಲಪಡುತ್ತದೆ. ಕಾರಣ ರುದ್ರದೇವರ ಬಗ್ಗೆಯೂ ಶೇಷದೇವರ ಬಗ್ಗೆಯೂ ಸ್ವಲ್ಪ ತಿಳಿಯೋಣ. ಮೋಹಿನಿ ಅವತಾರ ನೋಡಿದ ಕೂಡಲೇ ರುದ್ರನಿಗೆ ಕಾಮವಿಕಾರ ಉಂಟಾಯಿತೆಂಬುದು ಭಾಗವತದಿಂದ ತಿಳಿಯುತ್ತದೆ. ಕಾಮ ಕ್ರೋಧಾದಿಗಳಿಗೆ ವಶನಾಗುವುದು ಒಂದು ದೊಡ್ಡ ದೋಷವೇ ಸರಿ. ಈ ರೀತಿ ದೋಷಗಳು ವಾಯು ದೇವರ ಮೂಲ ರೂಪದಲ್ಲಾಗಲೀ, ಅವತಾರ ರೂಪದಲ್ಲಾಗಲಿ ಕಾಣುವುದಿಲ್ಲ. ಕಾರಣ ವಾಯು ದೇವರಿಗೆ ಮಾತ್ರವೇ ಅಜ್ಞಾನವಾಗಲಿ, ವಿಪರೀತ ಜ್ಞಾನವಾಗಲಿ ಇಲ್ಲ. ತಿರುಪತಿ ಬೆಟ್ಟಕ್ಕೆ ಶೇಷಾಚಲವೆಂದು ಹೆಸರು ಬಂದುದು ವಾಯು ದೇವರು ಶೇಷ ದೇವರಿಗಿಂತಲೂ ಶ್ರೇಷ್ಠರೆಂದು ತಿಳಿಸುತ್ತದೆ. ರಾಮಾನುಜಾಚಾರ್ಯರು ಆದಿಶೇಷನ ಅವತಾರರೆಂದು ಹೇಳುವ ಬಗ್ಗೆ ವಿಚಾರಿಸೋಣ. ಆದಿಶೇಷನ ಅವತಾರನಾದ ಬಲರಾಮನಿಗೆ ಅಜ್ಞಾನ, ವಿಪರೀತ ಜ್ಞಾನವಿತ್ತೆಂಬುದು ಭಾರತ. ಭಾಗವತಗಳಿಂದ ತಿಳಿಯುತ್ತದೆ. ಇನ್ನು ಲಕ್ಷ್ಮಣನ ಉದಾಹರಣೆ ತೆಗೆದುಕೊಂಡರೆ ಶ್ರೀ ರಾಮನ ವಾಕ್ಯವೇ ಲಕ್ಷ್ಮಣನ ಯೋಗ್ಯತೆಯನ್ನು ತಿಳಿಸುತ್ತದೆ. ವಾಲಿಯ ಸಂಹಾರವಾದ ಕೂಡಲೇ ಲಕ್ಷ್ಮಣ ರಾಮನ ಹತ್ತಿರ ಹೇಳುತ್ತಾನೆ: ಎಂತಹ ತಮ್ಮಂದಿರಿರುತ್ತಾರೆ– ಅಣ್ಣನನ್ನು ಕೊಂದಾದರೂ ಸುಖಪಡಬೇಕೆಂಬುವರು. ಎಂದು ಆಗ ಶ್ರೀ ರಾಮನು ಹೇಳುತ್ತಾನೆ: ಎಲ್ಲರೂ ಭರತನಂತೆ ಇರತ್ತಾರೆಯೋ ಎಂದು. ಇದು ಲಕ್ಷ್ಮಣನ ಭಕ್ತಿ ಭರತನ ಭಕ್ತಿಗಿಂತ ಕಡಿಮೆ ಎಂದು ತೋರಿಸುತ್ತದೆ—ರಾಮನ ವಾಕ್ಯದಿಂದಲೇ. ವಾಯು ದೇವರ ಅವತಾರರಾದ ಹನುಮಂತ ದೇವರ ಭಕ್ತಿಗೆ ಮೆಚ್ಚಿ ಭಾವಿ ಬ್ರಹ್ಮ ಪಟ್ಟವನ್ನೇ ಕೊಟ್ಟನು ಶ್ರೀ ರಾಮ. ದೇವತೆಗಳಲ್ಲಿಯೂ ವಾಯು ದೇವರೇ ಶ್ರೇಷ್ಠರು.

ಈಗ ಈ ಇಬ್ಬರು ಆಚಾರ್ಯರ ಜೀವನ ಚರಿತ್ರೆಯನ್ನು ನೋಡಿ, ಅವರುಗಳು ದೇವತೆಗಳ ಅವತಾರರೆಂದು ಹೇಳಿಕೊಳ್ಳುವಲ್ಲಿ ಎಷ್ಟು ನಿಜಾಂಶವಿದೆಂಬುದನ್ನು ನೋಡೋಣ. ಮೊದಲಿಗೆ ಶಂಕರಚಾರ್ಯರ ಚರಿತ್ರೆ ನೋಡೋಣ. ಅಲ್ಲಿ ಹೇಳಿಕೊಂಡಂತೆ, ಶಂಕರಾಚಾರ್ಯರು ಮಂಡನಮಿಶ್ರನೆಂಬ ಮೀಮಾಂಸಕನನ್ನು ವಾದದಲ್ಲಿ ಜಯಿಸಿದಾಗ ಅವನ ಹೆಂಡತಿ ತನ್ನನ್ನು ಗೆಲ್ಲುವ ತನಕ ಜಯ ಪೂರ್ಣವಾಗಲಿಲ್ಲವೆಂದು ವೆಂದು ಹೇಳಿ ಶಂಕರಾಚಾರ್ಯರಿಗೆ ಕಾಮಶಾಸ್ತ್ರದಲ್ಲಿ ಒಂದು ಪ್ರಶ್ನೆ ಹಾಕಿದನು. ಬಾಲ ಬ್ರಹ್ಮಚಾರಿಗಳಾಗಿದ್ದರಿಂದ ಶಂಕರಾಚಾರ್ಯರಿಗೆ ಉತ್ತರ ಕೊಡಲು ಸಾಧ್ಯವಾಗದೆ,

ಅವರು ತಮ್ಮ ಯೋಗ ಶಕ್ತಿಯಿಂದ ತಮ್ಮ ದೇಹವನ್ನು ಒಂದು ಗುಹೆಯಲ್ಲಿಟ್ಟು ಆಗ ತಾನೇ ಮೃತನಾದ ರಾಜಕುಮಾರನ ದೇಹವನ್ನು ಪ್ರವೇಶಿಸಿ ಅವನ ಪತ್ನಿಯರಲ್ಲಿ ಕ್ರೀಡಿಸಿದರು. ಆಗ ಆ ಪತ್ನಿಯರಿಗೆ ತಮ್ಮ ಗಂಡನ ದೇಹದಲ್ಲಿರುವ ಜೀವ ಬೇರೆಯೆಂದು ತಿಳಿದು, ತಮ್ಮ ಗಂಡನನ್ನು ಉಳಿಸಿಕೊಳ್ಳುವುದಕ್ಕಾಗಿ ಶಂಕರಾಚಾರ್ಯರ ದೇಹವನ್ನು ಹುಡಿಕಿಸಿ ಸುಡಲು ಚಿತೆಯ ಮೇಲೇರಿಸಿ ಬೆಂಕಿ ಹಚ್ಚಿಸಿದರು. ಆಗ ಶಂಕರಾಚಾರ್ಯರಿಗೆ ಇದು ತಿಳಿದು ರಾಜಕುಮಾರನ ದೇಹವನ್ನು ಬಿಟ್ಟು ತಮ್ಮ ನಿಜ ದೇಹವನ್ನು ಪುನಃ ಪ್ರವೇಶಿಸಿದರು. ಸುತ್ತಲೂ ಉರಿ ಇದ್ದುದರಿಂದ "ಲಕ್ಷ್ಮೀ ನರಸಿಂಹ ಮಮದೇಹಿ ಕರಾವಲಂಬಂ" ಎಂಬದಾಗಿ ನರಸಿಂಹ ದೇವರನ್ನು ಪ್ರಾರ್ಥಿಸಿ ಪಾರಾದರೆಂದು ಈ ಚರಿತ್ರೆ ಹೇಳುತ್ತದೆ. ಶಂಕರಾಚಾರ್ಯರಿಗೆ ಪರಕಾಯ ಪ್ರವೇಶ ಮಾಡುವ ಶಕ್ತಿ ಇತ್ತೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ ಅವರ ಶಿಷ್ಯರು. ಅದ್ವೈತಿಗಳು ಹೇಳಿಕೊಳ್ಳುವಂತೆ ಶಂಕರಾಚಾರ್ಯರು ಶಿವನ ಅವತಾರರಾಗಿದ್ದರೆ, ಶಿವನಿಗೂ ಆಪತ್ಕಾಲದಲ್ಲಿ ನಾರಾಯಣನೇ ರಕ್ಷಕನೆಂದು ಅವರೇ ಒಪ್ಪಿದಂತಾಗುತ್ತದೆ. ಈ ದೃಷ್ಟಾಂತವೇ ಶಂಕರಾಚಾರ್ಯರು ಶಿವನ ಅವತಾರವಲ್ಲವೆಂದು ತಿಳಿಸುತ್ತದೆ. ಅರ್ಧ ನಾರೀಶ್ವರನೆಂದು ಹೆಸರಾದ ರುದ್ರದೇವರಿಗೆ ಕಾಮಶಾಸ್ತ್ರದ ಪ್ರಶ್ನೆಗೆ ಉತ್ತರ ಕೊಡಲು ಅಸಾಧ್ಯವಾಗುತ್ತಿರಲಿಲ್ಲ. ಇದಲ್ಲದೆ, ಯಾವುದಾದರೂ ಒಂದು ತೊಡಕು ಪ್ರಶ್ನೆ ಬಂದಾಗ ಬುದ್ಧಿಭ್ರಮೆ ಆಗುವುದಾದರೆ ಅವರು ಸರ್ವಜ್ಞರಲ್ಲವೆಂದೂ ಹೇಳಬಹುದು. ಶ್ರೀ ವಾದಿರಾಜರ ಜೀವನದಲ್ಲಿಯೂ ಇಂತಹ ಪ್ರಸಂಗ ಬಂದಿತ್ತು. ಅವರು ರಚಿಸಿದ "ರುಕ್ಮಿಣೀಶ ವಿಜಯ" ಎಂಬ ಮಹಾ ಕಾವ್ಯದಲ್ಲಿ ರುಕ್ಮಿಣಿಗೂ ಶ್ರೀ ಕೃಷ್ಣನಿಗೂ ನಡೆದ ಸಲ್ಲಾಪಧ ಸಪದಲ್ಲಿ ಮಹಾಕಾವ್ಯಕ್ಕೆ ಅವಶ್ಯವಾದ ಬಹಳ ಶೃಂಗಾರ ರಸವನ್ನು ತುಂಬಿದ್ದಾರೆ. ಇದನ್ನು ಓದಿದ ಒಬ್ಬ ಅದ್ವೈತ ಪಂಡಿತನು ಮಾತ್ಸರದಿಂದ ಕಾಮ ಕ್ರೀಡೆಗಳನ್ನು ಆಡಿಲ್ಲದಿದ್ದಲ್ಲಿ ಈ ರೀತಿ ವರ್ಣಿಸಲಿಕ್ಕೆ ಸಾಧ್ಯವೇ ಇಲ್ಲವೆಂತಲೂ, ಬಾಲ ಸನ್ಯಾಸಿಗಳಾದ್ದರಿಂದ ಶ್ರೀಗಳವರಲ್ಲಿ ಏನೂ ಹೇಳಲಿಕ್ಕೆ ಸಂಕೋಚವಾಗುತ್ತದೆಂತಲೂ ಶ್ರೀ ವಾದಿರಾಜರ ಹತ್ತಿರ ಹೇಳಿದನು. ಇದಕ್ಕೆ ಶ್ರೀ ವಾದಿರಾಜರು ಇದರ ಉತ್ತರ 15 ದಿವಸಗಳ ನಂತರ ಕೊಡುವುದಾಗಿ ಹೇಳಿ ಶಿಷ್ಯನನ್ನು ಕರೆಸಿ ಒಂದು ಕಿಲುಬು ಹಿಡಿದ ಕಪ್ಪಾದ ತಾಮ್ರದ ತಂಬಿಗೆಯನ್ನು ತೆಗೆದುಕೊಂಡು ಹೋಗಿ ಆ ಪಂಡಿತನ ಎದುರಿಗೇ ಒಂದು ಹೇಲು ಗುಂಡಿಯಲ್ಲಿ ಹೂಳಿಸಿ ಬರುವುದಾಗಿ ಕಳುಹಿಸಿದರು. 15 ದಿವಸಗಳ ನಂತರ ಅದೇ ಪಂಡಿತನನ್ನು ಕರೆದುಕೊಂಡು ಹೋಗಿ ಆ ತಂಬಿಗೆಯನ್ನು ತೆಗೆಸಿ ತೊಳಸಿಕೊಂಡು ಬರುವುದಾಗಿ ಕಳುಹಿಸಿದರು. ಅಷ್ಟರಲ್ಲಿ ಕಿಲವು ಹೋಗಿ ಆ ತಂಬಿಗೆ ಕೆಂಪಾಗಿತ್ತು. ಇದನ್ನು ನೋಡಿ, ಶ್ರೀ ವಾದಿರಾಜರು ಆ ಪಂಡಿತನಿಗೆ ಇದು ಬೇರೆ ತಂಬಿಗೆ ಎಂದು ಕಾಣುತ್ತದೆ ಎಂದರು. ನಾವು ಕಳಿಸಿದ ತಂಬಿಗೆ ಕಪ್ಪಾಗಿತ್ತು ಎಂದರು. ಅದಕ್ಕೆ ಆ ಪಂಡಿತನು ಹೇಳಿದ

ಹುಳಿಯಿಂದ ಕಿಲುವು ಹೋಗಿ ಕೆಂಪಾಗಿದೆ ಎಂದನು. ಆಗ ಶ್ರೀ ವಾದಿರಾಜರು ಹುಳಿ ಎಸ್ಸು ಕೈತೀಯಲ್ಲಾ, ರುಚಿ ನೋಡಿದ್ಯಾ ಎಂದು ಪಂಡಿತನನ್ನು ಕೇಳಿದರು. ಕೂಡಲೇ ಪಂಡಿತನಿಗೆ ತಲೆ ತಗ್ಗಿಸುವಂತಾಗಿ ಶ್ರೀಗಳವರಿಗೆ ನಮಸ್ಕಾರ ಮಾಡಿ ತಾನು ಮಾಡಿದ "ರುಕ್ಮಿಣೀಶ ವಿಜಯ"ದ ಪ್ರಶ್ನೆಗೆ ಉತ್ತರ ಸಿಕ್ಕಿತೆಂದನು. ಹೀಗಿರುವಾಗ ಪರತತ್ತ್ವ ವಿಚಾರದಲ್ಲಿ ಅನಂತ ಕಠಿಣ ಪ್ರಶ್ನೆಗಳಿಗೆ ಸರಿಯಾದ ಮಾರ್ಗ ದರ್ಶಕರೆಂದು ಶಂಕರಾ ಚಾರ್ಯರ ಬಗ್ಗೆ ನಿಶ್ಚಯವಾಗಿ ಹೇಳಲಾಗುವುದಿಲ್ಲ. ಈಶ್ವರನ ಅವತಾರರಂತೂ ಅಲ್ಲವೇ ಅಲ್ಲ.

ಇನ್ನು ರಾಮಾನುಜಾಚಾರ್ಯರ ಬಗ್ಗೆ ಶ್ರೀ ವೈಷ್ಣವರು ಅವರ ಜೀವನ ಚರಿತ್ರೆ ಯಲ್ಲಿ ಹೇಳಿಕೊಂಡಿರುವುದನ್ನು ನೋಡಿದರೆ ಅವರು ನಿಜವಾಗಿಯೂ ಆದಿಶೇಷನ ಅವತಾರರಲ್ಲ ವೆಂಬುದು ತಿಳಿಯುತ್ತದೆ. ಅಲ್ಲಿ ಹೀಗೆ ಹೇಳಿದೆ. ರಾಮಾನುಜಾ ಚಾರ್ಯರು ವೈಷ್ಣವ ಸಿದ್ಧಾಂತವನ್ನು ಪ್ರಚಾರ ಮಾಡುತ್ತಿರುವುದು ತಂಜಾವೂರಿನ ರಾಜಾಶ್ರಯದಲ್ಲಿದ್ದ ವಿಷ್ಣುದ್ವೇಷಿಗಳಾದ ಶೈವರಿಗೆ ಸೈರಣೆ ಆಗಲಿಲ್ಲ. ವಾದ ಮಾಡುವ ನೆವದಿಂದ ರಾಮಾನುಜಾಚಾರ್ಯರ ಕಣ್ಣುಗಳನ್ನು ಕೀಳಬೇಕೆಂಬ ಹಂಚಿಕೆ ಹಾಕಿ ವಾದಕ್ಕೆ ಕರೆದರು. ಈ ಹಂಚಿಕೆಯು ರಾಮಾನುಜಾಚಾರ್ಯರಿಗೆ ತಿಳಿಯಿತು. ವಾದಕ್ಕೆ ಕರೆದಾಗ ಹೋಗದೆ ಇರುವುದು ವಿದ್ವಾಂಸರಿಗೆ ಸರಿಯಲ್ಲ. ಆಗ ಕುರೇಶ ನೆಂಬ ಶಿಷ್ಯನು ರಾಮಾನುಜಾಚಾರ್ಯರ ಹೋಲಿಕೆಯಲ್ಲಿಯೇ ಇದ್ದನು. ಗುರುಗಳನ್ನು ಪಾರು ಮಾಡುವ ಉದ್ದೇಶದಿಂದ ತಾನು ಸನ್ಯಾಸಿ ವೇಷ ಧರಿಸಿ ವಾದಕ್ಕೆ ಹೋಗು ವುದಾಗಿಯೂ ಸಲಹೆ ಇತ್ತನು. ಇದಕ್ಕೆ ಒಪ್ಪಿ ರಾಮಾನುಜಾಚಾರ್ಯರು ಗೃಹಸ್ಥ ನಂತೆ ಮೈಸೂರು ಪ್ರಾಂತದಲ್ಲಿದ್ದ ಮೇಲುಕೋಟೆಗೆ ಹೋದರು. ಕುರೇಶನು ವಾದಕ್ಕೆ ಹೋಗಿ ಕಣ್ಣುಗಳನ್ನು ಕಳಕೊಂಡನು. ಇವನೇ "ಕೂರತ್ತಾಳ್ವಾರ್" ಎಂದು ಶ್ರೀ ವೈಷ್ಣವರಲ್ಲಿ ಪ್ರಸಿದ್ಧಿ ಹೊಂದಿದನು. ರಾಮಾನುಜಾಚಾರ್ಯರು ಮೇಲುಕೋಟೆ ಯನ್ನು ತಲುಪಿ ಒಂದು ಕಲ್ಯಾಣಿಯಲ್ಲಿ ಸ್ನಾನಮಾಡಿ ಪುನಃ ಕಾವಿ ವಸ್ತ್ರವನ್ನು ಧರಿಸಿದ ರೆಂದು ಅವರ ಚರಿತ್ರೆ ಹೇಳುತ್ತದೆ. ಈಗಲೂ ಆ ಕಲ್ಯಾಣಿಯನ್ನು ತೋರಿಸುತ್ತಾರೆ. ಒಂದು ವೇಳೆ ರಾಮಾನುಜಾಚಾರ್ಯರು ಆದಿಶೇಷನ ಅವತಾರರಾಗಿದ್ದರೆ, ಆದಿಶೇಷನ ಕಣ್ಣುಗಳನ್ನು ಕೀಳಲು ಯಾರಿಗಾದರೂ ಸಾಧ್ಯವೆ? ಇದಕ್ಕಾಗಿ ಅವರು ಭಯಪಟ್ಟು ಸನ್ಯಾಸಾಶ್ರಮವನ್ನು ಬಿಟ್ಟು ಗೃಹಸ್ಥನಂತೆ ಹೋಗಬೇಕಾಗಿದ್ದಿರಲಿಲ್ಲ. ಈಗಲೂ ಶ್ರೀ ವೈಷ್ಣವರಲ್ಲಿ ಸನ್ಯಾಸಿಗಳು ಜುಟ್ಟು, ಜನಿವಾರ ತೆಗೆಯುವ ಪದ್ಧತಿಯಿಲ್ಲ, ರಾಮಾನುಜಾಚಾರ್ಯರು ಆಚರಿಸಿದಂತೆ ಬರೇ ಕಾವಿ ವಸ್ತ್ರ ಧಾರಣೆಯೇ ರೂಢಿಯಲ್ಲಿದೆ. ಈ ಸಂದರ್ಭದಲ್ಲಿ. ಶ್ರೀ ವಾದಿರಾಜರು ಸೋದೆ ಪ್ರಾಂತದಲ್ಲಿ ಪ್ರಚಂಡವಾಗಿ ಬೆಳೆ ದಿದ್ದ ಲಿಂಗಾಯಿತರ ಬ್ರಾಹ್ಮಣ ದ್ವೇಷವನ್ನು ಅಡಗಿಸಿದ್ದೂ, ಅದೇ ರೀತಿಯಲ್ಲಿ

ಶ್ರೀ ವಿಜಯೇಂದ್ರ ಸ್ವಾಮಿಗಳು ಅವರ ಮತ್ತು ಅದ್ವೈತಿಗಳ ಹಾವಳಿಯನ್ನು ಕುಂಭಕೋಣೆಯಲ್ಲಿ ತಡೆದಿದ್ದನ್ನೂ ನೋಡಿದರೆ ತಪಃ ಶಕ್ತಿಯಿದ್ದಲ್ಲಿ ಯಾರಿಗೂ ಹೆದರುವ ಅವಶ್ಯಕತೆ ಇರುವುದಿಲ್ಲವೆಂಬುದು ಸ್ಪಷ್ಟವಾಗುತ್ತದೆ. ದೇವಾಂಶರಾಗ ಬೇಕಾದುದು ಬಹಳ ದೂರದ ಮಾತು. ರಾಮಾನುಜಾಚಾರ್ಯರು ಗೋಷ್ಠಿ ಪೂರ್ಣನೆಂಬ ಶೂದ್ರನಿಂದ ಮಂತ್ರೋಪದೇಶವನ್ನೂ, "ಎಂಪೆರುಮಾನಾರ್" ಎಂಬ ಬಿರುದನ್ನೂ ಪಡೆದರೆಂಬ ಅವರ ಚರಿತ್ರೆ ತಿಳಿಸುತ್ತದೆ. ಹೀಗಿರುವಾಗ ಶ್ರೀ ವೈಷ್ಣವ ಬ್ರಾಹ್ಮಣರು ಇತರ ಬ್ರಾಹ್ಮಣರ ಜೊತೆಯಲ್ಲಿ ಊಟ ಮಾಡದಿರುವುದೂ ಇತರ ಬ್ರಾಹ್ಮಣರನ್ನು ಕೀಳು ಭಾವದಿಂದ ನೋಡುವುದೂ ಸ್ವಲ್ಪ ವಿಪರೀತವಾಗಿಯೇ ಕಾಣುತ್ತದೆ. ನಿಷ್ಠ ಮುಸಲ್ಮಾನರು ಹಿಂದೂಗಳಿಂದ ಆಹಾರ ಸ್ವೀಕರಿಸುವುದಿಲ್ಲ ವೆಂಬುದನ್ನು ಸ್ಮರಿಸಿದರೆ ಸಂಕುಚಿತ ಭಾವನೆ ಎಲ್ಲಿಯೂ ಉಂಟು ಎಂಬುದು ತಿಳಿಯುತ್ತದೆ. ಅದ್ವೈತಿಗಳಲ್ಲಿ ಇದು ಕಂಡುಬರುವುದಿಲ್ಲ.

ಮೇಲೆ ವಿಚಾರಿಸಿದ ವಿಷಯಗಳಿಂದ, ಶಂಕರಾಚಾರ್ಯರಲ್ಲಿ ರಾಮಾನುಜಾಚಾರ್ಯರಲ್ಲಿ ಸಂಸ್ಕೃತದ ಅಸದೃಶ ಪಾಂಡಿತ್ಯವೂ ಕೆಲವು ಅಮಾನುಷ ಶಕ್ತಿಯೂ ಇದ್ದುದರಿಂದ ಅವರ ಅನುಯಾಯಿಗಳು ಅವರುಗಳ ಹೆಸರು ಸೂಚಿಸುವ ದೇವತೆಗಳ ಅವತಾರರೆಂದು ಹೇಳಿಕೊಂಡಂತೆ ಕಾಣುತ್ತದೆ. ಈ ರೀತಿ ಹೆಸರುಗಳೇ ಅವತಾರ ಸೂಚಕವಾದರೆ ಕಲ್ಲಪ್ಪ, ಹುಚ್ಚಪ್ಪನೆಂದು ಹೆಸರಿಟ್ಟುಕೊಂಡವರು ದಡ್ಡರಾದರಂತೂ ದೇವರೇ ಗತಿ. ನಮ್ಮ ಆಚಾರ್ಯರ ಜೀವನದಲ್ಲಾದರೋ ಇಂತಹ ಲಜ್ಜಾಸ್ಪದವಾದ ಸಂಘಟನೆಗಳು ಒಂದಾದರೂ ಇಲ್ಲವೆಂಬುದೇ ಅವರ ವೈಶಿಷ್ಟ್ಯ. ಬಲಿಷ್ಠರಾಗಲೀ ಕುಹಕಿಗಳಾಗಲೀ ಅವರನ್ನು ದ್ವೇಷಿಸಿದವರಿರಲಿಲ್ಲವೇತಲ್ಲ. ಬೇಕಾದಷ್ಟು ವಿಷಮ ಪರೀಕ್ಷೆಯ ಪ್ರಸಂಗಗಳಿದ್ದವು. ಮಹಾ ಪ್ರವಾಹದಲ್ಲಿದ್ದ ಗಂಗಾನದಿಯನ್ನು ಶಿಷ್ಯ ಸಮೇತರಾಗಿ ಬಟ್ಟೆಗಳು ತೊಯ್ಯದಲೆ ಕಾಲು ನಡುಗೆಯಿಂದ ದಾಟಿದ್ದು, ಹಿಂದೂಗಳ ಮೇಲೆ ವಿಷಕಾರುವ ಮಹಾ ಕ್ರೂರನಾದ ತುರುಷ್ಕ ರಾಜನನ್ನು ತಮ್ಮ ತೇಜಸ್ಸಿನಿಂದಲೇ ಗೆದ್ದದ್ದೂ, ಸರ್ಪ, ವ್ಯಾಘ್ರಗಳನ್ನೂ, ಚೋರರನ್ನೂ, ಕುಹಕಿಗಳಾದ ಮಂತ್ರವಾದಿಗಳನ್ನೂ ಪರಾಭವಗೊಳಿಸಿದ್ದೂ ಅವರ ಅದ್ಭುತ ಬಲವನ್ನೂ ತೋರಿಸುತ್ತದೆ. ಮಹಾ ಮೇಧಾವಿಗಳಾದ ಅದ್ವೈತವಾದಿಗಳನ್ನು ವಾದದಲ್ಲಿ ಸೋಲಿಸಿದ್ದೂ, ಅವರ ವಾಕ್ಯಗಳ ಗಾಂಭೀರ್ಯವೂ, ಅವರು ಉದಾಹರಿಸಿರುವ ಶ್ರುತಿ, ಸ್ಮೃತಿಗಳ ವಾಕ್ಯಗಳೂ, ಅವರ ಅದ್ಭುತ ವಿದ್ಯೆಯನ್ನು ತೋರಿಸುತ್ತದೆ. ಇವೆಲ್ಲವೂ ಅವರು ವಾಯು ದೇವರ ಅವತಾರರೆಂಬುದರಲ್ಲಿ ಸಂದೇಹಕ್ಕೂ ಅವಕಾಶ ಕೊಡುವುದಿಲ್ಲ. ಅವರು ಜೀವೋತ್ತಮರೇ.

ಇನ್ನು ಮಧ್ವಸಿದ್ಧಾಂತ ವೈಶಿಷ್ಟ್ಯವನ್ನು ಒಂದು ಉಪನ್ಯಾಸದಲ್ಲಿ ತಿಳಿಸಲು ಸಾಧ್ಯವಿಲ್ಲ. ಇದಕ್ಕೆ ಪ್ರತ್ಯೇಕವಾಗಿ ಪ್ರತಿಒಂದು ಪ್ರಮೇಯಗಳ ಬಗ್ಗೆ ಬರೆಯ ಬೇಕಾಗುತ್ತದೆ. ಆದರೂ ಸಂಕ್ಷೇಪವಾಗಿ ಅದರ ಮಹಿಮೆಯನ್ನು ತಿಳಿಯೋಣ. ನನ್ನಂತಹ ನ್ಯಾಯ, ವ್ಯಾಕರಣ, ತರ್ಕ, ವೇದಾಂತ ಮುಂತಾದ ಶಾಸ್ತ್ರದ ಪರಿಚಯ ವಿಲ್ಲದವರಿಗೂ ತಿಳಿಯುವಂತೆ, ಎಲ್ಲರಲ್ಲಿಯೂ ಇರುವ ಯುಕ್ತಿಯಿಂದಲೇ ಮಧ್ವ ಸಿದ್ಧಾಂತದ ಶ್ರೇಷ್ಠತೆಯನ್ನು ಶ್ರೀ ವಾದಿರಾಜರು ತಮ್ಮ "ಯುಕ್ತಿ ಮಲ್ಲಿಕಾ" ಎಂಬ ಗ್ರಂಥದಲ್ಲಿ ತಿಳಿಸಿದ್ದಾರೆ. ಇದನ್ನು ಸ್ವಲ್ಪ ಪರಿಚಯ ಮಾಡಿಕೊಳ್ಳೋಣ. ಮೊದಲಿಗೆ, ಬಹಳ ಪ್ರಚಾರದಲ್ಲಿರುವ ಅದ್ವೈತ ಮತವನ್ನು ಬಿಟ್ಟು ಮಧ್ವಮತವನ್ನೇ ಏಕೆ ಅವಲಂಬಿಸಿದಿರಿ ಎಂಬ ಪ್ರಶ್ನೆ ಹಾಕಿ ಕೊಂಡು ಅವರು ಹೇಳುತ್ತಾರೆ: ಅದ್ವೈತ ಮತದಂತೆ ಹೋದರೆ ಭಗವಂತನ ನಿಂದೆ ಮಾಡಿದಂತೆ ಆಗುತ್ತದೆ. ಬ್ರಹ್ಮನಲ್ಲಿ ಭಕ್ತಿ ಮೂಡದಿದ್ದರೂ, ದ್ರೋಹ ಮಾಡಿದ ಪಾಪದಿಂದ ದೂರವಿರಬೇಕೆಂದು ಮಧ್ವ ಮತವನ್ನು ಸ್ವೀಕರಿಸಿದೆ ಎನ್ನುತ್ತಾರೆ, ಶ್ರೀ ವಾದಿರಾಜರು. ವೇದಗಳು ಬ್ರಹ್ಮ ಅನಂತ ಕಲ್ಯಾಣ ಗುಣ ಪರಿಪೂರ್ಣನೆಂದು ಸಾರುತ್ತಿರುವಾಗ, ಅವನು ನಿರ್ಗುಣ ನೆಂದರೆ ಅವನ ನಿಂದೆಯೇ ಆಗುತ್ತದೆ. ಲೋಕದಲ್ಲಿ ಒಬ್ಬನಿಗೆ ಕಿವಿ ಕೇಳಿಸುವುದಿಲ್ಲ. ಅವನನ್ನು 'ಕಿವುಡಾ' ಎಂದು ಕರೆದರೆ ತನ್ನನ್ನು ಬೈದಂತೆ ಭಾವಿಸುತ್ತಾನೆ. ಕಾಲಿಲ್ಲ ದವನನ್ನು "ಹೇ ಕುಂಟಾ" ಎಂದು ಕರೆದರೆ ನಿಂದೆಯಾಗುತ್ತದೆ. ಹೀಗೆ ಒಂದೊಂದು ಗುಣ ನಿಜವಾಗಿ ಇಲ್ಲದಿದ್ದರೂ ಅದನ್ನು ತೋರಿಸಿದರೆ, ಅವರವರ ನಿಂದೆಯೆಂದೇ ಭಾವಿಸುತ್ತಾರೆ. ಹೀಗಿರುವಾಗ ಯಾವಗುಣವೂ ಇಲ್ಲವೆಂದು ಹೇಳಿದರೆ ಅತಿ ನಿಂದೆಯೆಂದೇ ಭಾವಿಸುವುದುಂಟು. ನಾವು 'ಎಲ್ಲಾ ಇದೆ. ಗುಣಮಾತ್ರ ಇಲ್ಲ' ಎಂದು ಹೇಳಿದಾಗ ಒಬ್ಬನನ್ನು ನಿಂದಿಸಿದಂತೆಯೇ ಸರಿ. ಹೀಗೆ ಬ್ರಹ್ಮನಲ್ಲಿ ಯಾವ ಗುಣವೂ ಇಲ್ಲ ಎಂದರೆ ಪರಮಾತ್ಮನ ನಿಂದೆಯೇ ಆಗುತ್ತದೆಂಬುದರಲ್ಲಿ ಸಂದೇಹವಿಲ್ಲ. ಇನ್ನು ಪರಮಾತ್ಮ ಬಹಳ ಚಿತ್ರ, ವಿಚಿತ್ರವಾದ ಜಗತ್ತನ್ನು ಸೃಷ್ಟಿಸಿದ್ದಾನೆಂದು ವೇದ ಹೇಳುತ್ತದೆ. ಮತ್ತು ನಮ್ಮ ಅನುಭವದಲ್ಲಿಯೂ ಇದೆ, ಹೀಗಿರುವಾಗ ಜಗತ್ತು ಮಿಥ್ಯ ಅಥವಾ ಸುಳ್ಳು ಎಂದು ಹೇಳುವುದಾದರೆ ಅದು ಬ್ರಹ್ಮನ ನಿಂದೆಯೇ ಆಗುತ್ತದೆ. ಉದಾಹರಣೆಗೆ, ಲೋಕದಲ್ಲಿ ಒಬ್ಬ ವ್ಯಕ್ತಿ ಒಂದು ಗುಡಿಯನ್ನೋ, ಮಠವನ್ನೋ ಕಟ್ಟಿಸುತ್ತೇನೆಂದು ಹೇಳಿ ಒಂದು ಲಕ್ಷ ರೂಪಾಯಿ ಚಂದಾ ವಸೂಲು ಮಾಡುತ್ತಾ ನೆಂದು ಹೇಳೋಣ. ತರುವಾಯ ಅವನು ಕಟ್ಟಿಸಿದುದಕ್ಕೆ 60,000 ರೂಪಾಯಿ ಮಾತ್ರ ಖರ್ಚು ಮಾಡಿದ, ಬಾಕಿ ಹಣವನ್ನೆಲ್ಲಾ ತಾನೇ ಇಟ್ಟುಕೊಂಡ ಎಂದು ಜನರಾಡಿಕೊಂಡರೆ ಅದು ಅವನ ನಿಂದೆಯು ಮಾತ್ರ ಆಗುತ್ತದೆ. ಹೀಗಿರುವಾಗ ಅವನು ಗುಡಿ ಅಥವಾ ಮಠವನ್ನು ಕಟ್ಟಿಸಿದ್ದೇ ಸುಳ್ಳು ಎಂದರೆ ಇದು ಅತಿ ನಿಂದೆಯು ಮಾತ್ರ ಆಗುತ್ತದಲ್ಲವೇ? ಇದೇ ರೀತಿ ಜಗತ್ತು ಮಿಥ್ಯ ಎಂದರೆ ಪರಮಾತ್ಮನ ನಿಂದೆಯೇ ಆಗುತ್ತದೆ.

ಈಗ ನಾವು ಒಂದು ವಿಷಯ ಗಮನಿಸಬೇಕು. ಶಂಕರಾಚಾರ್ಯರು ನನ್ನಂತಹ ದಡ್ಡರಲ್ಲ. ಮಹಾ ಮೇಧಾವಿಗಳು. ಹೀಗಿರುವಾಗ ಜಗತ್ತು ಮಿಥ್ಯೆ ಎಂದು ಏಕೆ ಹೇಳಿದರು ಎಂಬ ಪ್ರಶ್ನೆ. ಜಗತ್ತಿನಲ್ಲಿ ನಾವು ನೋಡುತ್ತಿರುವುದು ಅನಂತ ಅನ್ಯಾಯ, ಅನಂತ ವ್ಯತ್ಯಾಸ. ಅನಂತ ದುಃಖಕ್ಕೆ ಕಾರಣಗಳು, ಕರುಣಾ ಸಮುದ್ರನಾಗಿರಬೇಕಾದ ಬ್ರಹ್ಮ ಇಂತಹ ಜಗತ್ತನ್ನು ಏಕೆ ಸೃಷ್ಟಿಸಿದ ಎಂಬ ಪ್ರಶ್ನೆ ಸಹಜವಾಗಿ ಹುಟ್ಟಿ ಇದಕ್ಕೆ ಸಮಾಧಾನ ಹೇಳುವುದು ಬಹಳ ಕಷ್ಟಕರವಾದ ವಿಷಯ. ಆದರೆ ಜಗತ್ತು ಸುಳ್ಳೆಂದು ಹೇಳಿದರೆ ಸಮಾಧಾನ ಹೇಳುವ ಪ್ರಶ್ನೆಯೇ ಬರುವುದಿಲ್ಲ. ಒಂದು ಲೌಕಿಕ ಉದಾಹರಣೆಯಿಂದ ಇದರ ಸ್ವಾರಸ್ಯ ಬಯಲಾಗುವುದು. ನಾನು ಮದ್ರಾಸಿನಲ್ಲಿದ್ದಾಗ ನನ್ನ ಒಬ್ಬ ಜವಾನ ತಿಂಗಳು ಸಂಬಳ ತೆಗೆದುಕೊಂಡು ಮನೆಗೆ ಸಾಮಾನುಗಳನ್ನು ತರುವೆನೆಂದು ಹೆಂಡತಿಗೆ ಹೇಳಿ ಬಜಾರಕ್ಕೆಂದು ಹೋದ. ಸ್ವಲ್ಪ ಹೊತ್ತಿನ ಮೇಲೆ ಬರೇ ಕೈಲಿ ಬಂದು ಜೋಬಿ ಕಳ್ಳರಿಂದ ದುಡ್ಡೆಲ್ಲಾ ಕಳವಾಯಿತೆಂದು ಹೆಂಡತಿಗೆ ತಿಳಿಸಿದ. ಈ ಸಂಗತಿಯನ್ನು ನನಗೆ ತಿಳಿಸಿದ ಇನ್ನೊಬ್ಬ ಜವಾನ ಹೇಳಿದ ಅವನಿಗೆ ಲತ್ತಾ ಆಡುವ ಅಭ್ಯಾಸವಿದೆ. ಲತ್ತೆಯಲ್ಲಿ ಸೋತಿದ್ದರಿಂದ ಸಂಬಳ ದುಡ್ಡೆಲ್ಲಾ ತೆರಬೇಕಾಯಿತು ಎಂದು. ನಿಜ ಸಮಾಚಾರವನ್ನು ಹೆಂಡತಿಗೆ ಏಕೆ ತಿಳಿಸಲಿಲ್ಲವೆಂದು ಕೇಳಿದಾಗ ಹಾಗೆ ತಿಳಿಸಿದ್ದರೆ ಜೂಜಾಕೆ ಆಡಿದೆ? ಯಾರು ಕಲಿಸಿದರು? ಮುಂತಾಗಿ ಬೈಗಳೇ ಬರುತ್ತಿದ್ದವು. ಕಳುವಾಯಿತೆಂದರೆ "ತ್ರೀಂದು ಪೋಚಿ" ಎಂದು, ಬೈಗಳ ಬದಲು ಅನುಕಂಪವೇ ಅವನಿಗೆ ಬಂತು. ಇದೇ ರೀತಿಯಲ್ಲಿ ಅದ್ವೈತದ "ಜಗತ್ತು ಮಿಥ್ಯೆ" ಎಂಬುದು ಭೂಷಣವಾಗಿಯೇ ಪರಿಗಣಿಸಲಾಗಿದೆ. ಅವರ ಮಾತಿನಲ್ಲಿ "ಭೂಷಣಂ ನತು ದೂಷಣಂ" ಎಂದಿದ.

ಈ ಜಗತ್ತಿನ ಸೃಷ್ಟಿಯ ವಿಷಯವಾಗಿ ರಾಮಾನುಜಾಚಾರ್ಯರು ಏನು ಹೇಳುತ್ತಾರೋ ನೋಡೋಣ. ಅದು ಇನ್ನೂ ಅಧ್ವಾನವಾಗಿಯೇ ಇದೆ. ಜಗತ್ತಿನಲ್ಲಿ ತೋರುವ ಅನ್ಯಾಯ, ದುಃಖ ಮೊದಲಾದುವನ್ನು ಅನಾದಿ ಕರ್ಮ, ಅನಾದಿ ಅವಿದ್ಯೆ ಮುಂತಾದವುಗಳಿಂದ ಸಮಾಧಾನ ಹೇಳಬಹುದು. ಆದರೆ ನಾವು ಜಗತ್ತಿನಲ್ಲಿ ಕಾಣುವುದು ಎರಡು—ಜೀವ ಮತ್ತು ಜಡ. ಇವುಗಳನ್ನು ಹೊಂದಿದ ಜಗತ್ತನ್ನು ಪರಮ ಚೇತನನಾದ ಬ್ರಹ್ಮ ಹೇಗೆ ಸೃಷ್ಟಿಸಿದ? ಎಂಬ ಪ್ರಶ್ನೆ. ಕುಂಬಾರನು ಮಣ್ಣಿನ ಮಡಿಕೆಗಳನ್ನು ಮಾಡಿದಂತೆ ಎಂದು ಹೇಳಲಾಗುವುದಿಲ್ಲ. ಏಕೆಂದರೆ, ಕುಂಬಾರನಿಗಿಂತ ಮೊದಲೇ ಮಣ್ಣು ಇದೆ. ಬ್ರಹ್ಮನಿಗಿಂತ ಜೀವ, ಜಡ ಮೊದಲೇ ಇತ್ತೆಂದರೆ, ಆದಿಯಲ್ಲಿ ಬ್ರಹ್ಮನೊಬ್ಬನೇ ಇದ್ದ ಎಂಬ ವೇದವಾಕ್ಯಕ್ಕೆ ವಿರುದ್ಧವಾಗುತ್ತದೆ. ಕಾರಣ ಜೀವ, ಜಡರಿಂದ ಕೂಡಿಕೊಂಡೇ ಜಗತ್ತನ್ನು ಸೃಷ್ಟಿಸಿದ ಎನ್ನುತ್ತಾರೆ ರಾಮಾನುಜಾಚಾರ್ಯರು. ಅವರ ವಾಕ್ಯದ ರೀತ್ಯಾ ಜಗತ್ತಿಗೆ ಬ್ರಹ್ಮನು "ಅಭಿನ್ನ

ನಿಮಿತ್ತ ಉಪಾದಾನ ಕಾರಣ" Bramha is both the efficient and material cause of the world. ಜೀವ, ಜಡರುಗಳು ಸೇರಿ ಬ್ರಹ್ಮನ ದೇಹದಂತೆ ಅವನ ಅಧೀನ. ಇದೇ ಅವರು ಹೇಳುವ ದೇಹೀ-ದೇಹ ಭಾವ, ಅಂಶಿ-ಅಂಶ ಭಾವ ಅಥವಾ ಶೇಷಿ-ಶೇಷ ಭಾವ. ಜೀವ ಬ್ರಹ್ಮನ ಅಂಶ. ಹಾಗೆಯೇ ಜಡವೂ. ಈ ವಾದವಲ್ಲಿ ಎರಡು ದೋಷಗಳು ಎತ್ತಿ ಕಾಣುತ್ತವೆ. 1) ಇದರಿಂದ ಬ್ರಹ್ಮನ ದೇಹ ಬ್ರಹ್ಮನಿಂದ ಭಿನ್ನ ಎಂದ ಹಾಗಾಯಿತು. ಹೇಗೆ ಜೀವರಿಗೆ ಜಡವಾದ ದೇಹವು ಜೀವರಿಂದ ಬೇರೆಯಾಗಿ ಜೀವರಿಗೆ ಅಧೀನವಾಗಿರುತ್ತದೋ, ಹಾಗೆಯೆ ಜೀವ-ಜಡ ಕೂಡಿಕೊಂಡು ಪರಮಾತ್ಮನ ದೇಹವಾಗಿ ಅವನಿಂದ ಬೇರೆ ಆಗಿ ಅವನ ಅಧೀನದಲ್ಲಿದೆ ಎಂದಂತಾಯಿತು. ಜೀವನಿಗೂ ಬ್ರಹ್ಮನಿಗೂ ವಿಶೇಷ ವ್ಯತ್ಯಾಸವೇನೂ ಇದ್ದಂತೆ ತೋರುವುದಿಲ್ಲ. ಇದು "ನೇಹ ನಾನಾಸ್ತಿ ಕಿಂಚನ" ಎಂಬ ವೇದ ವಾಕ್ಯಕ್ಕೆ ವಿರುದ್ಧವಾಯಿತು. ಜೀವ ಜಡ ದೇಹದಿಂದ ಬಿಡುಗಡೆ ಹೊಂದಿ ಮುಕ್ತನಾಗಬಹುದು. ಆದರೆ ಬ್ರಹ್ಮನಿಗೆ ಅಭಿನ್ನವಾದ ತನ್ನ ಜೀವ-ಜಡ ಸ್ವರೂಪವಾದ ದೇಹದಿಂದ ಬಿಡುಗಡೆ ಇಲ್ಲ. ಇದು ಅಪದ್ಧ, 2) ಬ್ರಹ್ಮನಿಗಿಂತ ಜೀವರ ಅವಸ್ಥೆಯೇ ಮೇಲೆನಿಸುತ್ತದೆ. ಮುಕ್ತ ಜೀವರ ಲಕ್ಷಣವನ್ನು ಹೇಳುವಾಗ ಬ್ರಹ್ಮಸೂತ್ರ; "ಜಗದ್ವ್ಯಾಪಾರ ವರ್ಜಂ" ಎಂದು ಹೇಳಿದೆ. ರಾಮಾನುಜಾಚಾರ್ಯರ ರೀತ್ಯಾ ಮುಕ್ತನಾದ ಜೀವ ಬ್ರಹ್ಮನಿಗೆ ಸಮಾನವಾದ ಆನಂದವನ್ನು ಹೊಂದುತ್ತಾನೆ. ಆದರೆ ಅವನಿಗೆ ಬ್ರಹ್ಮನಿಗಿದ್ದಂತೆ ಜಗತ್ತಿನ ಸೃಷ್ಟಿ, ಸ್ಥಿತಿ, ಲಯ ಮೊದಲಾದ ವ್ಯಾಪಾರ ಮಾತ್ರ ಇಲ್ಲದವನು. ಹಾಗಲ್ಲದೆ ಈ ವ್ಯಾಪಾರದಿಂದಾಗುವ ನಿಂದಾ, ಸ್ತುತಿಗಳೂ ಇಲ್ಲದವನು. ಇದು ಅಪದ್ಧವೆಂಬುದು ಒಂದು ಲೌಕಿಕ ಉದಾಹರಣೆಯಿಂದ ತಿಳಿಯಬಹುದು. ಒಬ್ಬ ವೃದ್ಧ ಗೃಹಸ್ಥ ಮಗ ಕೈಗೆ ಬಂದ ಮೇಲೆ ಸಂಸಾರದ ಹೊಣೆಯನ್ನೆಲ್ಲಾ ಅವನಿಗೆ ಒಪ್ಪಿಸಿ, ತಾನು ನಿಶ್ಚಿಂತೆಯಿಂದ ಸುಖವಾಗಿರುತ್ತಾನೆ. ಅಂಗಡಿ ಬಾಕಿ ಕೇಳಲು ಬಂದರೆ ಮಗನನ್ನು ಕೇಳಿ ಅನ್ನುತ್ತಾನೆ. ಮನೆಗೆ ಬರುವ ಬಂಧುಗಳನ್ನಾಗಲೀ, ಅತಿಥಿಗಳನ್ನಾಗಲಿ ವಿಚಾರಿಸಿಕೊಳ್ಳುವುದು ಮಗನ ಜವಾಬ್ದಾರಿ. ತನಗೆ ಬೇಕಾಗುವ ಸೌಕರ್ಯಗಳನ್ನು ವ್ಯತ್ಯಾಸವಿಲ್ಲದೆ ಮಗನಂತೆ ಅನುಭೋಗಿಸುತ್ತಾ ನಿಶ್ಚಿಂತೆಯಿಂದ ಇರುತ್ತಾನೆ ಮುಕ್ತನಾದ ಜೀವ ವೃದ್ಧ ತಂದೆಯಂತೆ, ಬ್ರಹ್ಮ ಜವಾಬ್ದಾರಿ ಮತ್ತು ದುಡಿಮೆ ವಹಿಸಿದ ಮಗನಂತೆ. ಇದು ರಾಮಾನುಜಾಚಾರ್ಯರ ಸೃಷ್ಟಿ ಬಗ್ಗೆ ಹೇಳಿದ ಸಿದ್ಧಾಂತದ ಪರಿಣಾಮ.

ಇನ್ನು ಶಂಕರಾಚಾರ್ಯರು ಹೇಳುವ ಮಹಾ ವಾಕ್ಯಗಳ ಬಗ್ಗೆ ಸ್ವಲ್ಪ ತಿಳಿಯೋಣ. ಮೊದಲು ಗಮನದಲ್ಲಿಡಬೇಕಾದ್ದು: "ಮಹಾವಾಕ್ಯ"ಗಳು ಎಂದು ಕರೆಯಲು ಶಂಕರಾಚಾರ್ಯರ ಮಾತೇ ಪ್ರಮಾಣ ಹೊರತು ಬೇರೆ ಪ್ರಮಾಣವಿಲ್ಲ. ಅವರಲ್ಲಿ

ನಂಬಿಕೆ ಇಲ್ಲದವರು ಈ ರೀತಿ ವಾಕ್ಯಗಳಿವೆ ಎಂದು ಒಪ್ಪಬೇಕಾಗಿಲ್ಲ. ಹೀಗಾಗಿ ಮಧ್ವಸಿದ್ಧಾಂತವನ್ನು ಬಿಟ್ಟು ಬಾಕಿ ಎಲ್ಲಾ ಸಿದ್ಧಾಂತಗಳಿಗೂ ಅದರದರ ಪ್ರವರ್ತಕರಲ್ಲಿರುವ ನಂಬಿಕೆಯೇ ಮೂಲ. ಮಧ್ವಸಿದ್ಧಾಂತ ಮಾತ್ರವೇ ಸರ್ವಾಂಶದಲ್ಲಿಯೂ ವಿಚಾರದ ಮಾತು. ಈ ಮಹಾ ಕಾವ್ಯಗಳ ಹುರುಳು ತಿಳಿಯಬೇಕಾದರೆ ನಮಗೆ ವೇದವೆಂದರೇನು? ಅವು ಯಾವರೀತಿಯಲ್ಲಿವೆ? ಎಂಬುದು ತಿಳಿಯುವುದು ಅವಶ್ಯಕ. ವೇದವೆಂದರೆ ಪರತತ್ತ್ವವನ್ನು ತಿಳಿಸಿಕೊಡುವ **ಅಪೌರುಷೇಯ** ಶಬ್ದರಾಶಿ. ಅವು ಯಾರು ಮಾಡಿದ್ದೂ ಅಲ್ಲ. ಈ ಶಬ್ದ ರಾಶಿಗಳನ್ನು ಋಷಿಗಳು ಕೇಳಿದ್ದೇ ಹೊರತು ರಚಿಸಿದ್ದಲ್ಲ. ಈ ಕಾರಣದಿಂದಲೇ ಇವುಗಳಿಗೆ "**ಶ್ರುತಿ**" ಎಂದು ಹೆಸರು. ಅವು ಅನಾದಿ, ನಿತ್ಯ. ಇವು ನಾಲ್ಕು ರೀತಿಯಲ್ಲಿವೆ: 1) ಮಂತ್ರ, 2) ಬ್ರಾಹ್ಮಣ, 3) ಆರಣ್ಯಕ ಮತ್ತು 4) ಉಪನಿಷತ್ ಎಂದು. "ಮಂತ್ರ" ಭಾಗ ದೇವತೆಗಳ ಸ್ತೋತ್ರ ರೂಪದಲ್ಲಿವೆ. ಧನ ಬೇಕೆಂದರೆ ಲಕ್ಷ್ಮಿ ಸ್ತುತಿ, ವಿದ್ಯೆ ಬೇಕೆಂದರೆ ಸರಸ್ವತಿ ಸ್ತುತಿ, ಕಾರ್ಯಸಿದ್ಧಿಗೆ ಗಣೇಶನ ಸ್ತುತಿ. ಈ ರೀತಿ. "ಬ್ರಾಹ್ಮಣ" ಎಂಬುದು ಯಜ್ಞಗಳ ವಿಧಿಗಳನ್ನೂ, ಫಲಗಳನ್ನೂ, ಹೇಳುತ್ತದೆ. ಜ್ಞಾನ ಬೇಕೆಂದರೆ ಪವಮಾನ ಹೋಮ. ಮಳೆ ಬೇಕೆಂದರೆ ಪರ್ಜನ್ಯಹೋಮ, ಭೂತ, ಪ್ರೇತಗಳ ಅನುಗ್ರಹಕ್ಕೆ ಚಂಡಿ ಹೋಮ. ಈ ರೀತಿ "ಆರಣ್ಯಕ" ಎಂಬುದು ಅರಣ್ಯದಲ್ಲಿದ್ದು ಬ್ರಹ್ಮನ ಪ್ರೀತಿಗಾಗಿ ಯಜ್ಞ, ಹೋಮಾದಿಗಳನ್ನು ಮಾಡುತ್ತಾ, ಬ್ರಹ್ಮನ ವಿಚಾರವಾಗಿ ಚರ್ಚೆಯೂ ನಡೆಯುತ್ತಿದ್ದುದನ್ನು ತಿಳಿಸುತ್ತದೆ. ಹೀಗೆ ತೈತ್ತಿರೀಯ ಉಪನಿಷತ್ತು ಯಜುರ್ವೇದದ ಆರಣ್ಯಕದಲ್ಲಿ ಸೇರಿದೆ. "ಉಪನಿಷತ್ತು" ಎಂಬುದು ಪರತತ್ವದ ಬಗ್ಗೆ ಗೋಪ್ಯವಾದ ವಿಚಾರದ ಶಬ್ದ ರಾಶಿಗಳು, ಇವು ಸಂವಾದರೂಪದಲ್ಲಿವೆ.ಗಂಡ–ಹೆಂಡಿರ ಸಂವಾದ: ಯಾಜ್ಞವಲ್ಕ್ಯ–ಮೈತ್ರೇಯಿಯಂತೆ; ತಂದೆ-ಮಗನ ಸಂವಾದ : ಉದ್ದಾಲಕ–ಸ್ವೇತಕೇತುವಿನಂತೆ; ಗುರು–ಶಿಷ್ಯರ ಸಂವಾದ : ಯಮ–ನಚಿಕೇತರಂತೆ–ಈ ರೀತಿ. ಈಗ ನಮ್ಮಗಳ ಸಂವಾದಗಳನ್ನು ವೇದಮಾತೆ ಏಕೆ ಕೇಳುವುದಿಲ್ಲ ಎಂದು ಕೇಳಬಹುದು. ನಮ್ಮ ಸಂವಾದವಾದರೊ "ನಿಮ್ಮ ಮನೆಯಲ್ಲಿ ಏನು ಅಡಿಗೆ?" "ನಿಮ್ಮ ಮನೆಯಲ್ಲಿ ಏನು ಅಡಿಗೆ?" ಎಂದೋ, ಈ ತಿಂಗಳ ರೇಷನ್ ಯಾವಾಗ ಕೊಡುತ್ತಾರೆ ? ಎಂದೊ ಇರುತ್ತದೆ. ಇಂತಹ ಸಂವಾದಗಳಿಂದ ಯಾರಿಗೆ ಪ್ರಯೋಜನ? ಇವನ್ನು ವೇದ ಏಕೆ ಹೇಳಬೇಕು? ಉಪನಿಷತ್ತುನಲ್ಲಿರುವ ಸಂವಾದವಾದರೋ : "ಜಗತ್ತು ಎಂದರೇನು? ಇದು ಹೇಗೆ ಬಂತು? ಯಾರು ಸೃಷ್ಟಿಸಿದರು? ಮತ್ತು ಏತಕ್ಕೆ? ನಾನು ಯಾರು? ಏಕೆಬಂದೆ? ಎಲ್ಲಿಗೆಹೋಗುತ್ತೇನೆ? ಈ ರೀತಿ. ಇವು ಎಷ್ಟು ಭಯಂಕರವಾಗಿವೆ ಎಂದರೆ, ಇಂತಹ ವಿಚಾರ ಮಾಡುವವರನ್ನು "ಧೀರ" ರೆಂದು ವೇದವೇ ಕರೆಯುತ್ತದೆ. ಇಂತಹ ವಿಷಯಗಳನ್ನು

ಹೇಳುತ್ತೇನೆಂದಿದ್ದರೆ ನನ್ನ ಉಪನ್ಯಾಸವೇ ಬೇಡವೆನ್ನುತ್ತಿದ್ದಿರಿ. ಸಾಮಾನ್ಯ ಜನರು ಇಂತಹ ವಿಚಾರಕ್ಕೇ ಹೋಗುವುದಿಲ್ಲ.

ಈಗ ಶಂಕರಾಚಾರ್ಯರು ಕರೆದಿರುವ "ಮಹಾ ವಾಕ್ಯಗಳು" ಉಪನಿಷತ್ತಿನಲ್ಲಿ ಬಂದಿರುವ ಸಂವಾದದಲ್ಲಿನ ವಾಕ್ಯಗಳು. ಉದಾಹರಣೆಗೆ "ಅಹಂ ಬ್ರಹ್ಮಾಸ್ಮಿ ಎಂಬ "ಮಹಾವಾಕ್ಯ" ಬೃಹದಾರಣ್ಯಕ ಉಪನಿಷತ್ತಿನಲ್ಲಿ ಬರುವ ಸಂವಾದದಲ್ಲಿನ ವಾಕ್ಯ. ಇದರ ಅರ್ಥ "ನಾನು ಬ್ರಹ್ಮನಾಗಿದ್ದೀನಿ" ಎಂದು. ಈ ವಾಕ್ಯವನ್ನು ತೆಗೆದುಕೊಂಡು ಶ್ರೀ ವಾದಿರಾಜರು ಕೇಳುತ್ತಾರೆ: ಉಪನಿಷತ್ತಿನಲ್ಲಿ ಯಾರಾದರೂ ಒಬ್ಬ ವ್ಯಕ್ತಿ "ಅಹಂ ಬ್ರಹ್ಮಾಸ್ಮಿ"—"ನಾನು ಬ್ರಹ್ಮನಾಗಿದ್ದೀನಿ" ಎಂದು ಹೇಳಿಕೊಂಡಿದ್ದರೆ. ಇದರಿಂದ ಶಿವಕುಮಾರ ಶಾಸ್ತ್ರಿ, ಹಿಡಂಭಕ ಭಟ್ಟ, ಮಾರೀಚರಾಯ, ಕುಂಭಕರ್ಣ ಆಚಾರು, ಪಾರ್ವತಮ್ಮ, ಶೂರ್ಪಣಾಖಿ ಬಾಯಿ, ತಾಟಕವ್ವ, ಬಿಸ್ಮಿಲ್ಲಾಖಾನ್, Toru, Dick & Harry chau-En-Lai, ಎಮ್ಮೆಗೌಡ, ನಾಯಿ ನಾಯಕ ಮುಂತಾದವರೆಲ್ಲರೂ ಒಬ್ಬೊಬ್ಬರಾಗಿ "ನಾನು ಬ್ರಹ್ಮನಾಗಿದ್ದೀನಿ—ಅಹಂ ಬ್ರಹ್ಮಾಸ್ಮಿ" ಎಂದು ಹೇಳಿಕೊಳ್ಳಬಹುದೆಂದು ಹೇಳಲು ಶಂಕರಾಚಾರ್ಯರಿಗೆ ಏನು ಅಧಿಕಾರ? ಇದು ಹಾಸ್ಯದ ಮಾತಲ್ಲ. ಶಂಕರಾಚಾರ್ಯರ ರೀತ್ಯಾ ಎಲ್ಲಾ ಜೀವಿಗಳು ಬ್ರಹ್ಮರೇ. ಇದು ಶುದ್ಧ ಅಪದ್ಧ ಎಂದು ಬೇರೆ ಹೇಳಬೇಕಾಗಿಲ್ಲ.

ಹಾಗಾದರೆ ಮಧ್ವಾಚಾರ್ಯರ ರೀತ್ಯಾ ಈ ವಾಕ್ಯಕ್ಕೆ ಏನು ಅರ್ಥ ಮತ್ತು ಶಂಕರಾಚಾರ್ಯರ ವ್ಯಾಖ್ಯಾನದ ಬಗ್ಗೆ ಅವರು ಏನು ಹೇಳುತ್ತಾರೆಂಬುದನ್ನು ನೋಡೋಣ. ಈ ವಾಕ್ಯವನ್ನು ಯಾರು ಹೇಳಿದ್ದು, ಯಾವ ಸಂದರ್ಭದಲ್ಲಿ ಹೇಳಿದ್ದು ಎಂಬುದನ್ನು—ಬಿಟ್ಟು ಅದನ್ನು ಒಂದು ಸ್ವತಂತ್ರವಾದ ವಾಕ್ಯವೆಂದು ತೆಗೆದು ಅದನ್ನು "ಮಹಾವಾಕ್ಯ" ವೆಂದು ಹೇಳುವುದು ವೇದಕ್ಕೆ ಶಂಕರಾಚಾರ್ಯರು ಮಾಡಿದ ಅಪಚಾರ. "ಅಹಂ ಬ್ರಹ್ಮಾಸ್ಮಿ" ಎಂಬ ವಾಕ್ಯವನ್ನು ಸಂದರ್ಭದಿಂದ ಬಿಡಿಸಿ ಪ್ರತ್ಯೇಕವಾಗಿ ಎಲ್ಲರಿಗೂ ಅನ್ವಯಿಸುವ ವಾಕ್ಯವೆಂಬುದು "Devil quoting the scriphaes" ಎಂಬ ರೀತಿಯಲ್ಲಿದೆ. ಸಂದರ್ಭ ಹೀಗಿದೆ: ಈ ವಾಕ್ಯ ಬೃಹದಾರಣ್ಯಕ ಉಪನಿಷತ್ತಿನಲ್ಲಿ ಬರುವ "ಮಧು ಕಾಂಡದ" "ಅವ್ಯಾಕೃತ ಬ್ರಾಹ್ಮಣ" ಎಂಬ ಭಾಗದಲ್ಲಿದೆ. ಯಾಜ್ಞವಲ್ಕ್ಯರು ತಮ್ಮ ಶಿಷ್ಯರಿಗೆ ಉಪದೇಶ ಮಾಡುತ್ತಾ "ಯಾರು ಪರಬ್ರಹ್ಮನನ್ನು ತಿಳಿಯುತ್ತಾರೋ ಅವರು ಬ್ರಹ್ಮ ಅಂದರೆ ಪೂರ್ಣರಾಗುತ್ತಾರೆ. ಅಂದರೆ ಅವರಿಗೆ ಬೇರೆ ಏನೂ ತಿಳಿಯಬೇಕಾದ್ದಿಲ್ಲ" ಎಂದು ಹೇಳುತ್ತಾರೆ. ಆಗ ಕೆಲ ಶಿಷ್ಯರು "ಬ್ರಹ್ಮ ತನ್ನ ಸ್ವರೂಪವನ್ನು ತಿಳಿದುಕೊಂಡೇ ಪೂರ್ಣನಾಗಿ

ದ್ವಾಸಿಯೋ? ಎಂದು ಕೇಳುತ್ತಾರೆ. ಇದಕ್ಕೆ ಉತ್ತರವಾಗಿ ಯಾಜ್ಞವಲ್ಕ್ಯರು "ಬ್ರಹ್ಮಾವಾ ಇದಮಗ್ರ ಆಸೀತ್। ತದಾತ್ಮಾನ ಮೇವಾ ವೇತ್। ಅಹಂ ಬ್ರಹ್ಮಾಸ್ಮೀತಿ। ತಸ್ಮಾತ್ ತತ್ಸರ್ವಮಭವತ್" ಎಂದು, ಹೇಳುತ್ತಾರೆ. ಜಗತ್ಸೃಷ್ಟಿಗೆ ಮೊದಲು ಬ್ರಹ್ಮನೊಬ್ಬನೇ ಇರುತ್ತಿದನು. ನಾನು ಬ್ರಹ್ಮ (ಪೂರ್ಣ) ನಾಗಿರುವೆನು ಎಂದು ತನ್ನನ್ನೆ ಅರಿತುಕೊಂಡನು. ಆದುದರಿಂದ ಎಲ್ಲವನ್ನೂ ತಿಳಿದುಕೊಂಡಂತಾದನು, ಎಂದು ಇದರ ಅರ್ಥ. ಎಂತಹ ಪ್ರಶ್ನೆ, ಎಂತಹ ಉತ್ತರ! "ಅಹಂ ಬ್ರಹ್ಮಾಸ್ಮಿ" ಎಂಬುದು ಬ್ರಹ್ಮನು ತನ್ನ ಬಗ್ಗೆ ಹೇಳಿಕೊಂಡ ಮಾತು. ಜೀವರ ಪ್ರಶ್ನೆಯೇ ಈ ವಾಕ್ಯದಲ್ಲಿ ಹುಟ್ಟುವುದಿಲ್ಲ. ಹೀಗಿರುವಾಗ ಇದು ಎಲ್ಲಾ ಜೀವರು ಹೇಳಿಕೊಳ್ಳುವ ವಾಕ್ಯವೆಂದು ಶಂಕರಾಚಾರ್ಯರು ಇದನ್ನು "ಮಹಾವಾಕ್ಯ" ಎಂಬುದು ಶುದ್ಧ ತಪ್ಪು. ಎಲ್ಲಾ "ಮಹಾವಾಕ್ಯ" ಗಳೂ ಈ ದೋಷಕ್ಕೇ ಒಳಪಟ್ಟಿವೆ. ಹೀಗಿರುವಾಗ "ಮಹಾವಾಕ್ಯ" ಗಳ ಮೇಲೆ ಜನರ ವಿಶ್ವಾಸವಿರುವುದು ಶಂಕರಾಚಾರ್ಯರ ಮೇಲಿನ ನಂಬಿಕೆಯೇ ಕಾರಣ. ಬುದ್ಧಿ ಕುಶಲತೆಯಿಂದಲೂ, ಭಾಷಾ ಪ್ರವೀಣತೆಯಿಂದಲೂ ಇದನ್ನು ಮನೋರಂಜಕವಾಗಿ ಮಾಡಬಹುದು. ಆದರೆ ಕಲ್ಪನೆ, ಕಲ್ಪನೆಯಾಗಿಯೇ ಉಳಿಯುತ್ತದೆ, ನಂಬಿಕೆ ಜ್ಞಾನದ ಮಾತಾಗುವುದಿಲ್ಲ.

ಇದರ ದೋಷವನ್ನು ಮಳಖೇಡದಲ್ಲಿ ವೃಂದಾವನಸ್ಥರಾದ ಶ್ರೀ ಜಯತೀರ್ಥರು ಬಹಳ ಸುಂದರವಾಗಿ ಎತ್ತಿ ತೋರಿಸಿದ್ದಾರೆ. ಶ್ರೀ ಮಧ್ವಾಚಾರ್ಯರು ಬ್ರಹ್ಮಸೂತ್ರಗಳಿಗೆ ಮಾಡಿದ "ಅನುವ್ಯಾಖ್ಯಾನ" ಎಂಬ ಗ್ರಂಥಕ್ಕೆ "ಶ್ರೀಮನ್ನ್ಯಾಯಸುಧಾ" ಎಂಬ ಟೀಕೆಯನ್ನು ಜಯ ತೀರ್ಥರು ಬರೆದಿದ್ದಾರೆ. ಅದರಲ್ಲಿ ಈ ವಿಷಯ ಬರುತ್ತದೆ. ಶಂಕರಾಚಾರ್ಯರ ರೀತ್ಯಾ ಬ್ರಹ್ಮ ಅವಿದ್ಯೆಯಿಂದ ಆವೃತನಾಗಿ (ಮುಚ್ಚಲ್ಪಟ್ಟ) ಜೀವನಾಗಿ ಕಾಣಿಸಿಕೊಳ್ಳುತ್ತಾನೆ ಎಂದು. ಟೀಕಾಚಾರ್ಯರು ಕೇಳುತ್ತಾರೆ: ಬ್ರಹ್ಮನು ಸಂಪೂರ್ಣವಾಗಿ ಅವಿದ್ಯೆಯಿಂದ ಆವೃತನಾಗಿದ್ದಾನೋ? ಅಥವಾ ಸ್ವಲ್ಪ ಭಾಗ ಮಾತ್ರ ಆವೃತನಾಗಿದ್ದಾನೋ? ಎಂದು, ಸಂಪೂರ್ಣವಾಗಿ ಆಗಿದ್ದರೆ ಬ್ರಹ್ಮನೇ ಇಲ್ಲವೆಂದಾಯಿತು. ಇನ್ನು ಬ್ರಹ್ಮನ ವಿಚಾರವೇ ಇಲ್ಲ, ಹಾಗಲ್ಲ, ಸ್ವಲ್ಪ ಭಾಗ ಮಾತ್ರ ಆವೃತವಾಗಿದೆ ಎಂದರೆ 2 ದೋಷಗಳು ಬರುತ್ತವೆ. ಮೊದಲನೆಯದಾಗಿ ಬ್ರಹ್ಮನಲ್ಲಿ ಭಾಗಗಳನ್ನು ಕಲ್ಪಿಸಿದಂತಾಗುತ್ತದೆ. ಇದು ಬ್ರಹ್ಮ ಅಖಂಡ ಚೈತನ್ಯ ಎಂಬುದಕ್ಕೆ ವಿರುದ್ಧ. ಎರಡನೆಯದಾಗಿ, ಜ್ಞಾನಸ್ವರೂಪನಾಗಿ ಉಳಿದ ಬ್ರಹ್ಮನ ಭಾಗಕ್ಕೆ ತನ್ನ ಸಲ್ಪ ಭಾಗ ಅಜ್ಞಾನ, ದುಃಖಗಳನ್ನು ಅನುಭವಿಸುತ್ತದೆ ಎಂಬ ಜ್ಞಾನವಿದೆಯೇ? ಹೀಗಿದ್ದರೆ ತನ್ನ ಅಜ್ಞಾನದ ನಿವೃತ್ತಿ ಜ್ಞಾನ ಭಾಗವಾಗಿ

ಉಳಿದ ಬ್ರಹ್ಮನ ಕಾರ್ಯವಾಗಬೇಕು ಜೀವನ ಸಾಧನೆಗೆ ಅವಕಾಶವೇ ಇಲ್ಲ. ಜೀವ-ಬ್ರಹ್ಮೈಕ್ಯ ಕಲ್ಪನೆಯ ಪ್ರಭಾವವಿದು. "ಮಹಾವಾಕ್ಯ"ಗಳ ಪರಮಾವಧಿ.

ಇಲ್ಲಿ ಒಂದು ಗಮನದಲ್ಲಿಡುವ ವಿಷಯ. ಶಂಕರಾಚಾರ್ಯರು ವಂಚಕರಲ್ಲ. ಅವರಿಗೆ ಜಗತ್ತನ್ನು ವಂಚನೆ ಮಾಡುವ ಉದ್ದೇಶವೂ ಇರಲಿಲ್ಲ. ಇದರಿಂದ ಅವರಿಗೆ ಆಗ ಬೇಕಾಗಿದ್ದೇನಿತ್ತು? ಆದರೂ ಜೀವ-ಬ್ರಹ್ಮರ ಐಕ್ಯವನ್ನು ಹೇಳಲು ಕಾರಣವೇನು? ಎಂಬ ಪ್ರಶ್ನೆ. ವೇದ ಹೇಳುತ್ತದೆ: ಪ್ರತಿ ದೇಹದಲ್ಲಿಯೂ ಜೀವ, ಬ್ರಹ್ಮರೆಂಬ ಎರಡು ಚೇತನರಿದ್ದಾರೆ ಎಂದು. ಇದೇ ಮುಂಡಕೋಪನಿಷತ್ತಿನಲ್ಲಿ ಬರುವ "ದ್ವಾಸುಪರ್ಣಾ" ಎಂಬ ವಾಕ್ಯ. ನಮಗೆ ಒಂದು ಚೇತನವೇ ದೇಹದಲ್ಲಿ ಎಲ್ಲಿದೆ ಎಂದು ತಿಳಿಯುವುದೇ ಕಷ್ಟವಾಗಿದೆ. ಹೀಗಿರುವಾಗ ಎರಡು ಚೇತನರ ಪ್ರಶ್ನೆಯೇ ಹುಟ್ಟುವುದಿಲ್ಲ. ಕಾಲಿಗೆ ಮುಳ್ಳು ಬಲವಾಗಿ ಚುಚ್ಚಿದರೆ ಜೀವ ಹೋಯಿತು ಎಂದು ಗೋಳಾಡುತ್ತೇವೆ. ಬಹಳ ತಲೆ ನೋವಾದರೆ, ಬಹಳ ಹೊಟ್ಟೆ ನೋವಾದರೆ ಅಥವಾ ತಡೆಯಲಾರದ ಹಸಿವಾದರೆ ಜೀವ ಹೋಯಿತೆಂದು ಹೇಳಿಕೊಳ್ಳುವ ವಾಡಿಕೆ. ಈ ರೀತಿ ಅನುಭವವನ್ನು ನೋಡಿ ಜೈನರು ಜೀವನ ದೇಹದ ಪ್ರಮಾಣವಲ್ಲಿದ್ದಾನೆಂದು ಹೇಳುತ್ತಾರೆ. ಆನೆಯ ಜೀವ ಆನೆಯ ಗಾತ್ರ, ಇರುವೆಯ ಜೀವ ಇರುವೆಯ ಗಾತ್ರ ಎಂದು. ಇದು ವೇದಾಂತಿಗಳಿಗೆ ಸರಿಕಾಣುವುದಿಲ್ಲ. ಜೀವ ಅಣು ಪ್ರಮಾಣವೆಂದು ವೇದ ಹೇಳುವಾಗ ಸ್ಥೂಲ ಪ್ರಮಾಣವನ್ನು ಕಲ್ಪಿಸುವುದೂ, ಅಂಗಗಳನ್ನು ಕಲ್ಪಿಸುವುದೂ ಸರಿಯಲ್ಲ. ಒಂದು ಅಂಗ ಹೋದರೆ ಜೀವನು ಬಾಕಿ ಅಂಗಗಳಷ್ಟು ಉಳಿಯುತ್ತಾನೆ ಎಂಬುವುದು ಸ್ಪಷ್ಟ. ಹಾಗಾದರೆ ಜೀವನು ದೇಹದಲ್ಲಿ ಎಲ್ಲಿದ್ದಾನೆ? ಎಂಬ ಪ್ರಶ್ನೆ. ಜೀವನನ್ನು "ನಾನು" ಎಂಬ ಶಬ್ದದಲ್ಲಿ ಬಳಸುವ ವಾಡಿಕೆ. ಪ್ರತಿಯೊಬ್ಬರೂ "ನಾನು" ಎಂದು ಹೇಳಿ ಎದೆಯನ್ನು ಮುಟ್ಟಿಕೊಳ್ಳುತ್ತಾರೆ. ಈ ಕಾರಣದಿಂದ "ನಾನು" ಎಂಬ ಜೀವ ಹೃದಯದಲ್ಲಿದ್ದಾನೆಂದ ಹಾಗಾಯಿತು. ಭಗವದ್ಗೀತೆಯಲ್ಲಿ "ಈಶ್ವರಃ ಸರ್ವ ಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ" ಎಂದು ಹೇಳಿದೆ: "ಎಲೇ ಅರ್ಜುನ, ಎಲ್ಲಾ ದೇಹದಲ್ಲಿಯೂ ಈಶ್ವರನು ಹೃದಯದಲ್ಲಿರುತ್ತಾನೆ" ಎಂದು ಇದರ ಅರ್ಥ. ಅಂದರೆ ಬ್ರಹ್ಮ ಹೃದಯದಲ್ಲಿದ್ದಾನೆ ಎಂದಾಯಿತು. ಜೀವ ಹೃದಯದಲ್ಲಿದ್ದಾನೆಂಬುದು ಲೋಕದ ಅನುಭವ. ಇದರಿಂದ ಜೀವನೇ ಬ್ರಹ್ಮನೆಂದಂತಾಯಿತು. ಇದೇ ಶಂಕರಾಚಾರ್ಯರ ಜೀವ-ಬ್ರಹ್ಮರ ಐಕ್ಯ ಸಿದ್ಧಾಂತ. ಇದನ್ನು ಈ ಶ್ರೀ ವಾದಿರಾಜರು ಪರೀಕ್ಷಿಸುವಾಗ ಹೇಳುತ್ತಾರೆ: ಹೃದಯದಲ್ಲಿ 50 ಇಡಾ ನಾಡಿಗಳೂ, 50 ಪಿಂಗಳ ನಾಡಿಗಳೂ 1 ಬ್ರಹ್ಮನಾಡಿಯೂ ಸೇರಿ 101 ನಾಡಿಗಳಿವೆ. ಜೀವ ಈ ನಾಡಿಗಳಲ್ಲಿರುತ್ತಾನೆ. ಬ್ರಹ್ಮ ಹೃದಯದಲ್ಲಿರುತ್ತಾನೆ. ಈ ಕಾರಣದಿಂದ

ಜೀವ ದೇಹ ಬಿಟ್ಟು ಹೋಗುವ ಕಾಲದಲ್ಲಿ "ನಾಡಿ ಸರಿಯಿತು" ಎಂದು ಹೇಳುವ ವಾಡಿಕೆ. ಬ್ರಹ್ಮನಾಡಿಯಿಂದ ಹೊರಬಿದ್ದ ಜೀವನಿಗೆ ಮುಕ್ತಿ ಆಗುತ್ತದೆ. ಬಾಕಿ ನಾಡಿಗಳಿಂದ ಹೊರಬಿದ್ದ ಜೀವನಿಗೆ ಪುನರ್ಜನ್ಮ ಉಂಟು. ಜೀವನ ಜೊತೆಯಲ್ಲಿಯೇ ಬ್ರಹ್ಮನಿರುತ್ತಾನೆ. ಇದೇ "ದ್ವಾ ಸುಪರ್ಣ" ಶ್ರುತಿಯ ಅರ್ಥ. ಈ ಕಾರಣದಿಂದ ಜೀವನೇ ಬ್ರಹ್ಮನೆಂದು ಹೇಳುವುದು ತಪ್ಪು. ಭಗವದ್ಗೀತೆ ಶಂಕರಾಚಾರ್ಯರ ಸಿದ್ಧಾಂತಕ್ಕೆ ಬಲಕೊಡುವುದಿಲ್ಲ. ಇದನ್ನು ಅದರ ಮುಂದಿನ ಶ್ಲೋಕವೇ ಸ್ಪಷ್ಟ ಪಡಿಸುತ್ತಿದೆ. "ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ" ಎಂದು. ಹೃದಯ ದಲ್ಲಿರುವ ಪರಮಾತ್ಮನಿಗೆ ಹೃದಯದ ನಾಡಿಗಳಲ್ಲಿರುವ ಜೀವ ಎಲ್ಲಾ ವಿಧದಿಂದಲೂ ಶರಣಾಗಬೇಕು, ಎಂದು. ಇದನ್ನೇ ವೇದಾಂತ ಭಾಷೆಯಲ್ಲಿ "ಬಿಂಬಾಪರೋಕ್ಷ" ಎಂದೂ ಕರೆಯುತ್ತಾರೆ. ದಾಸರು "ಕಣ್ಣಿನೊಳಗೆ ನೋಡೊ ಹರಿಯ" ಎಂಬುದಾಗಿ ಸಾರಿದ್ದಾರೆ.

ಈ "ನಿರ್ಗುಣ ಬ್ರಹ್ಮ", "ಸಗುಣ ಬ್ರಹ್ಮ" ಎಂಬುದರ ಬಗ್ಗೆ ಸ್ವಲ್ಪ ತಿಳಿಯೋಣ. ಈ ರೀತಿ ಬ್ರಹ್ಮನು ಎರಡು ರೀತಿ ಇದ್ದಾನೆಂದು ಹೇಳಿದವರು ಶಂಕರಾ ಚಾರ್ಯರೊಬ್ಬರೇ. ಇದು ಬಹಳ ಪ್ರಚಾರದಲ್ಲಿ ಬಂದಿರುವುದರಿಂದ ಜನರು ಶಂಕರಾ ಚಾರ್ಯರು "ನಿರ್ಗುಣ" ಬ್ರಹ್ಮ 'ಪಾರಮಾರ್ಥಿಕ ಸತ್ಯ' ವೆಂದು ಹೇಳಿದರು, ಮಧ್ವಾ ಚಾರ್ಯರು "ಸಗುಣ ಬ್ರಹ್ಮ"ನೇ ಪಾರಮಾರ್ಥಿಕ ಸತ್ಯವೆಂದು ಹೇಳಿದರು ಎಂದು ಹೇಳುವ ವಾಡಿಕೆಯಾಗಿದೆ. ಕೆಲ ಮಾಧ್ವವಿದ್ವಾಂಸರೂ ಈ ರೀತಿ ಭಾವಿಸಿರುವುದೂ ವಿಮರ್ಶೆಮಾಡದೆ ನುಡಿಯುವ ಮಾತು. ಇದು ಶುದ್ಧ ತಪ್ಪು. ಶಂಕರಾಚಾರ್ಯರು ಹೇಳುವ "ಸಗುಣ" ಬ್ರಹ್ಮನಿಗೂ ಮಧ್ವಾಚಾರ್ಯರು ಹೇಳುವ "ಗುಣ ಪೂರ್ಣ ಬ್ರಹ್ಮ ನಿಗೂ ರಾತ್ರಿ–ಹಗಲಿನಷ್ಟು ಅಂತರ. ಶಂಕರಾಚಾರ್ಯರ ರೀತ್ಯಾ "ನಿರ್ಗುಣ" ಬ್ರಹ್ಮ "ಮಾಯೆ" ಯಿಂದ ಆವೃತನಾಗಿ "ಸಗುಣ ಬ್ರಹ್ಮ"ನಾಗಿ ಕರೆಸಿಕೊಳ್ಳುತ್ತಾನೆ. ಇವನನ್ನು ಶಿವ, ನಾರಾಯಣ, ಲಕ್ಷ್ಮಿ, ಪಾರ್ವತಿ, ಮುಂತಾದ ಹೆಸರುಗಳಿಂದ ಕರೆ ಯುತ್ತಾರೆ. ಎಂದು. ಮಾಯೆ ಇರುವವರೆಗೆ ಈ "ಸಗುಣ" ಬ್ರಹ್ಮರು ಇರೋದು. ಮಾಯೆ ಹೋಯಿತೆಂದರೆ "ಸಗುಣ ಬ್ರಹ್ಮ" Close. ಇದೇ ಶಂಕರಾಚಾರ್ಯರ ಕರೆದ ಶಿವ, ವಿಷ್ಣು ಮುಂತಾದ ಸಗುಣ ಬ್ರಹ್ಮರ ಗತಿ. ಸಗುಣ ಬ್ರಹ್ಮ ಮಾಯಾ ಧೀನ. ಆದರೆ ಮಧ್ವಾಚಾರ್ಯರ ಗುಣಪೂರ್ಣ ಬ್ರಹ್ಮ ಸರ್ವಸ್ವತಂತ್ರ. ಮಾಯಾ ಧೀನನಲ್ಲ. ಗುಣಪೂರ್ಣ, ಬ್ರಹ್ಮನು "ನಿರ್ಗುಣನೇ" ಅಂದರೆ ಪ್ರಕೃತಿಯಿಂದ ಹುಟ್ಟಿದ ಸತ್ವ, ರಜಸ್, ತಮಸ್ ಎಂಬ ಗುಣಗಳ ಲೇಪವಿಲ್ಲದವನು, ಇದನ್ನೇ ಮಧ್ವಾಚಾರ್ಯರು "ನಿರ್ದೋಷ"ನೆಂದು ಕರೆದಿರುವರು. ಬ್ರಹ್ಮನ ಗುಣಗಳು ಅಪ್ರಾಕೃತಗಳು. ಪ್ರಕೃತಿ ಗುಣಗಳೆಲ್ಲ ದೋಷಯುಳ್ಳವು. ಅವುಗಳ ದೋಷ

"ಅಸ್ವಾತಂತ್ರ" ಕೆಲವರಲ್ಲಿ ರಾಮಾನುಜಾಚಾರ್ಯರು ಹೇಳುವ ವಿಷ್ಣುವೂ ಮಧ್ವಾಚಾರ್ಯರು ಹೇಳುವ ವಿಷ್ಣುವೂ ಒಂದೇ ಎಂಬ ಭಾವನೆ ಇದೆ. ಇದೂ ಶುದ್ಧ ತಪ್ಪು. ರಾಮಾನುಜಾಚಾರ್ಯರ ವಿಷ್ಣು ಚಿದಚಿತ್ತುಗಳಿಂದ ಅಭಿನ್ನವಾಗಿ ಅವುಗಳಿಂದ ಕೂಡಿದ ದೇಹವುಳ್ಳವನು. ಅವುಗಳಿಲ್ಲದಿದ್ದರೆ ಅವರ ವಿಷ್ಣು ಇರಲಿಕ್ಕೆ ಸಾಧ್ಯವಿಲ್ಲ. ಆದರೆ ಮಧ್ವಾಚಾರ್ಯರ ವಿಷ್ಣು ಚಿದಚಿತ್ ವಸ್ತುಗಳ ಸಂಬಂಧವಿಲ್ಲದವನು. ಇದನ್ನೇ ಭಗವದ್ಗೀತೆಯು "ಅವಜಾನಂತಿ ಮಾಂ ಮೂಢಾ ಮಾನುಷೀಂ ತನುಮಾಶ್ರಿತಂ। ಪರಂ ಭಾವಮಜಾನಂತೋ ಮಮ ಭೂತ ಮಹೇಶ್ವರಂ", ಎಂದು ಹೇಳಿದೆ. ಜಗತ್ಸೃಷ್ಟಿಗೆ ವಿಷ್ಣುವಿಗೆ ಚಿದಚಿತ್ ವಸ್ತುಗಳ ಸಹಾಯ ಬೇಕಾಗಿಲ್ಲ. "ಇಚ್ಛಾಮಾತ್ರಂ ಪ್ರಭೋಃ ಸೃಷ್ಟಿಃ" ಎಂದು ವೇದ ಹೇಳುತ್ತದೆ. ಇದೇ ಬ್ರಹ್ಮನ ಅಂಚಿತ್ಯ ಮಹಿಮೆ.

ಈಗ ಮಾಧ್ವರ ಮೇಲೆ ಹಾಕುವ ಅಪವಾದ, ಮಾಧ್ವರು ಅದ್ವೈತಿಗಳ ಮೇಲೆ ಹಾಕುವ ಅಪವಾದ ಮಧ್ವಾಚಾರ್ಯರ ಮೇಲೆ ಹೊರಿಸುವ ಅಪವಾದಗಳ ಬಗ್ಗೆ ಸ್ವಲ್ಪ ವಿಚಾರಿಸೋಣ. ನಮ್ಮ ಮೇಲೆ ಹಾಕುವ ದೂರು ಹೀಗಿದೆ: ಮಾಧ್ವರೆಲ್ಲಾ ತಮ್ಮ ಸಿದ್ಧಾಂತವನ್ನು ಮಾತ್ರ ಹೇಳುವುದನ್ನು ಬಿಟ್ಟು, ಇತರ ಸಿದ್ಧಾಂತಗಳನ್ನೆ ಬಹಳವಾಗಿ ನಿಂದಿಸುತ್ತಾರೆ ಎಂದು. ಅದ್ವೈತಿಯು "ಬ್ರಹ್ಮ ಸತ್ಯಂ ಜಗನ್ಮಿಥ್ಯೆ" ಎಂದು ಹೇಳುವಾಗ ಮಧ್ವಾಚಾರ್ಯರು ಜಗತ್ತು ಸತ್ಯವೆಂದು ಹೇಳುವುದು ತಪ್ಪು ಎಂದು ಹೇಳುವುದಿಲ್ಲ. ಶ್ರೀ ವೈಷ್ಣವರು ಪರಮಾತ್ಮನನ್ನು ಭಕ್ತಿಯಿಂದಾಗಲೀ ದ್ವೇಷದಿಂದಾಗಲೀ ಸದಾ ನೆನೆಸುತ್ತಿದ್ದರೆ ಸಾಕು ಮುಕ್ತಿ ದೊರೆಯುತ್ತಿದೆ ಎಂದು ಹೇಳುವಾಗ ಮಧ್ವಾಚಾರ್ಯರು ಭಕ್ತಿಯೊಂದೇ ಮುಕ್ತಿಗೆ ಸಾಧನವೆಂದು ಹೇಳಿದ್ದು ತಪ್ಪು ಎಂದು ಹೇಳುವುದಿಲ್ಲ. ಹೀಗಿರುವಾಗ ಮಾಧ್ವರು ಮಾತ್ರ ತಮ್ಮ ಸಿದ್ಧಾಂತವನ್ನು ಮಂಡಿಸುವಾಗ ಇತರ ಸಿದ್ಧಾಂತಗಳನ್ನು, ಅದರಲ್ಲಿ ಹೆಚ್ಚಾಗಿ ಅದ್ವೈತ ಸಿದ್ಧಾಂತವನ್ನು ಏಕೆ ಖಂಡಿಸಬೇಕು ಎಂಬುದೇ ಆಕ್ಷೇಪ. ಇದಕ್ಕೆ ಸಮಾಧಾನ ಹೀಗಿದೆ. ಈಶಾವಾಕ್ಯ ಉಪನಿಷತ್ತು ಹೇಳುತ್ತದೆ: ಪರತತ್ತ್ವ ವಿಚಾರದಲ್ಲಿ "ವಿದ್ಯೆ" ಮತ್ತು "ಅವಿದ್ಯೆ" ಎಂಬ ಎರಡು ಅಂಶಗಳಿವೆ. ಯಾರು ಅವಿದ್ಯೆಯನ್ನೇ ಉಪಾಸನೆ ಮಾಡುತ್ತಾರೋ ಅವರು ಘೋರವಾದ ಅಂಧಃ ತಮಸ್ಸಿಗೆ ಹೋಗುತ್ತಾರೆ ಎಂದು. ಇದರಿಂದ ನಮಗೆ ಅವಿದ್ಯೆಯೂ ಬೇಡ ವಿದ್ಯೆಯೂ ಬೇಡ ಎಂದು ಹೇಳಲಾಗುತ್ತದೋ? ಇಲ್ಲ. ಏಕೆಂದರೆ ಮುಂದಿನ ವಾಕ್ಯ ಹೀಗಿದೆ "ಅವಿದ್ಯಯಾ ಮೃತ್ಯುಂ ತೀರ್ತ್ವಾ, ವಿದ್ಯಯಾ ಅಮೃತಮಶ್ನುತೇ" ಎಂದು. ಅಂದರೆ ಅವಿದ್ಯೆಯಿಂದ ಮೃತ್ಯುಭಯವುಳ್ಳ ಸಂಸಾರವನ್ನು ದಾಟಿ, ವಿದ್ಯೆಯಿಂದ ಮೋಕ್ಷವೆಂಬ ಶಾಶ್ವತ ಸುಖವನ್ನು ಹೊಂದುತ್ತಾನೆ ಎಂದು ಇದರ ಅರ್ಥ. ಹಾಗಾದರೆ 'ಅವಿದ್ಯೆ', 'ವಿದ್ಯೆ' ಎಂದರೇನು? ಎಂಬ ಪ್ರಶ್ನೆ ಬರುತ್ತದೆ. ಶ್ರೀ ರಾಘವೇಂದ್ರ ಸ್ವಾಮಿಗಳು ತಮ್ಮ "ಉಪನಿಷತ್ ಖಂಡಾರ್ಥ"

ಎಂಬ ಗ್ರಂಥದಲ್ಲಿ "ಅವಿದ್ಯೆ" ಎಂದರೆ ಪೂರ್ವಪಕ್ಷ ಅಥವಾ ಇತರ ಸಿದ್ಧಾಂತಗಳು, "ವಿದ್ಯೆ" ಎಂದರೆ ಸ್ವಸಿದ್ಧಾಂತ ಎಂದು ತಿಳಿಸಿದ್ದಾರೆ. ಮೇಲೆ ಹೇಳಿದ ಉಪನಿಷತ್ತಿನ ಸಂದೇಶ ಹೀಗಿದೆ : ಇತರ ಸಿದ್ಧಾಂತಗಳನ್ನು ಪರಿಶೀಲಿಸಿ ಅವುಗಳಲ್ಲಿನ ದೋಷಗಳನ್ನು ಕಂಡುಹಿಡಿದು, ಆ ಸಿದ್ಧಾಂತಗಳನ್ನು ನಿರಾಕರಿಸಿ, ಸ್ವಸಿದ್ಧಾಂತಗಳನ್ನು ಸರಿಯಾಗಿ ತಿಳಿದರೇನೇ ಮುಕ್ತಿ, ಇಲ್ಲವಾದರೆ ವಿಪರೀತ ಫಲ ದೊರೆಯುತ್ತದೆ. ಇದೇ ಎರಡು ಬಗೆಯಲ್ಲಿ ಮುಕ್ತಿಗೆ ಸಾಧನವೆಂದು ವೇದದ ಅರ್ಥ. ತತ್ತ್ವಜ್ಞಾನಕ್ಕೆ ಇದೇ ಸರಿಯಾದ ಮಾರ್ಗ ಎಂದು ಬೇರೆ ಹೇಳಬೇಕಾಗಿಲ್ಲ. ಈ ಪದ್ಧತಿಯನ್ನು ಎಲ್ಲಾ ಆಚಾರ್ಯರೂ ಅನುಸರಿಸಿದ್ದಾರೆ. ಬೇರೆ ಮತಸ್ಥರು ಇದನ್ನು ಗಮನದಲ್ಲಿ ಇಟ್ಟಂತೆ ಕಾಣುವುದಿಲ್ಲ. ಆದರೆ ಮಾಧ್ವರು ಇದಕ್ಕೆ ಹೆಚ್ಚು ಪ್ರಶಸ್ತಿಕೊಟ್ಟಿದ್ದಾರೆ. ಇತರ ಸಿದ್ಧಾಂತಗಳು ಬಹಳ ಪ್ರಚಾರದಲ್ಲಿರುವುದೇ ಇದಕ್ಕೆ ಕಾರಣ. ತತ್ತ್ವವಿಚಾರದಲ್ಲಿ ಅಪಪ್ರಚಾರವನ್ನು ಎದುರಿಸುವುದು ಬಹಳ ಶ್ರಮದ ಕಾರ್ಯ. ಆದರೆ ಈ ರೀತಿಯ ವೇದದ ಸಂಪ್ರದಾಯವನ್ನು ಅನುಸರಿಸುವುದು ದೋಷವಲ್ಲ ಎಂಬುದು ಸ್ಪಷ್ಟ.

ಇಲ್ಲಿ ಒಂದು ಮಾತು. ಇತರ ಸಿದ್ಧಾಂತಗಳನ್ನು ಖಂಡಿಸುವಾಗ, ಇತರಮತ ಅನುಯಾಯಿಗಳನ್ನು ನಿಂದಿಸುವ ಪದ್ಧತಿಯನ್ನು ಬಹಳ ಮಂದಿ ಮಾಧ್ವರು ಬೆಳೆಸಿಕೊಂಡು ಬಂದಿದ್ದಾರೆ. ಅವರಲ್ಲಿಯೂ ಅದ್ವೈತಿಗಳನ್ನು ದೈತ್ಯರೆಂದು ಬಯ್ಯುವ ಅಭ್ಯಾಸ ಬೇರೂರಿದೆ. ತಾವು ದೇವತೆಗಳು, ಅದ್ವೈತಿಗಳು ದೈತ್ಯರು ಎಂದು ಹೇಳುವ ವಾಡಿಕೆ ಬಂದಿದೆ. ಇದು ಶುದ್ಧ ಅಪದ್ಧ. ಮಾಧ್ವರು ಈ ಭಾವನೆಯನ್ನು ತ್ಯಜಿಸಬೇಕು. ಶ್ರೀ ಮಧ್ವಾಚಾರ್ಯರು ಅದ್ವೈತ ಸಿದ್ಧಾಂತವನ್ನು ಖಂಡಿಸುವಾಗ ವ್ಯಕ್ತಿಗಳನ್ನು ಹೀನವಾಗಿ ಕರೆದಿಲ್ಲ. ಹಾಗ ಕರೆದಿದ್ದರೆ ಅವರಿಗೆ ಅದ್ವೈತ ಪಂಡಿತರು ಗಮನವನ್ನೇ ಕೊಡುತ್ತಿರಲಿಲ್ಲ. ಮಧ್ವಾಚಾರ್ಯರು ದೇವತೆಯ ಅವತಾರವಾದರೆ ಮಾಧ್ವರೆಲ್ಲಾ ದೇವತೆಗಳಾಗಬೇಕೆಂಬ ನಿಯಮವಿಲ್ಲ. ಇನ್ನೊಬ್ಬರ ವಿಚಾರ ಹಾಗಿರಲಿ, ನಾನಂತೂ ದೇವತೆಯಲ್ಲ, ಮತ್ತು ನನಗೆ ಯಾವ ಅದ್ವೈತಿಯೂ ದೈತ್ಯನಂತೆ ಕಂಡಿಲ್ಲ. ಇದನ್ನು ಸ್ವಲ್ಪ ವಿಚಾರಿಸೋಣ. ಶ್ರೀ ವಾದಿರಾಜರಿಗೆ ವಿಷಹಾಕಿ ಕೊಲ್ಲಲಿಕ್ಕೆ ಪ್ರಯತ್ನ ಮಾಡಿದವರು ಮಾಧ್ವರೇ. ವಾದಿರಾಜರು ಸಾಮಾನ್ಯರಲ್ಲ. ಪ್ರತಿ ದಿವಸ ಮಾಡಿದ ಅಡಿಗೆಯನ್ನು ಬಂಗಾರದ ತಟ್ಟೆಯಲ್ಲಿ ಬಡಿಸಿಟ್ಟು ತಲೆಯ ಮೇಲೆ ಇಟ್ಟುಕೊಳ್ಳುತ್ತಿದ್ದರು. ಪರಮಾತ್ಮನು ಕುದುರೆಯ ರೂಪದಲ್ಲಿ ಹಿಂದಿನಿಂದ ಬಂದು ಸ್ವಾಮಿಗಳ ಹೆಗಲುಗಳ ಮೇಲೆ ಕಾಲುಗಳನ್ನಿಟ್ಟು ಸಾಕ್ಷಾತ್ತಾಗಿ ತಿಂದು ಸ್ವಾಮಿಗಳಿಗೆ ಬೇಕಾಗುವಷ್ಟು ಉಳಿಸುತ್ತಿದ್ದನು. ಇದೇ ಪ್ರಸಾದವನ್ನು ಸ್ವಾಮಿಗಳು ತಿನ್ನುತ್ತಿದ್ದರು. ಈ ರೀತಿ ನೈವೇದ್ಯ ಅರ್ಪಿಸುವ ಮತ್ತು ಪ್ರಸಾದವನ್ನು ಸ್ವೀಕರಿಸುವ ಭಾಗ್ಯ ಇನ್ನಾವ ಯತಿಗಳಿಗೂ ಇದ್ದಂತೆ ಕಾಣುವುದಿಲ್ಲ.

ವಿಷಹಾಕಿದ್ದು ಮಂಗಳಾರತಿ ಮಾಡುವ ಕಾಲದಲ್ಲಿ ದೇವರ ಪ್ರತಿಮೆಯ ಕೊರಳಲ್ಲಿ ನೀಲಿಬಣ್ಣ ಹರಿದಾಡಿದಂತೆ ಕಾಣಿಸಿಕೊಂಡಿತು. ಈ ಪರಿಯ ಪೂಜೆ ಇತರರು ಮಾಡಿದ್ದು ವಿರಳ. ಹಾಕಿದ ವಿಷ ಪರಿಣಾಮಕಾರಿ ಆಗಲಿಲ್ಲವೆಂಬುದು ಅವರ ಮಹಿಮೆಯನ್ನು ತೋರಿಸುತ್ತಿದೆ. ಈ ವಿಷ ಹಾಕುವ ಪ್ರಯತ್ನ ಬರೀ ಗುರು ಹತ್ಯೆ, ಬ್ರಾಹ್ಮಣ ಹತ್ಯೆ ಮಾತ್ರವಲ್ಲ. ಸಾಕ್ಷಾತ್ತಾಗಿ ಪರಮಾತ್ಮನೇ ಬಂದು ತಿನ್ನುತ್ತಿದ್ದುದರಿಂದ ಪರಮಾತ್ಮನನ್ನೇ ಕೊಲ್ಲುವ ಪ್ರಯತ್ನವಾಗಿತ್ತು. ಇದು ದೇವತೆಗಳ ಲಕ್ಷಣವಲ್ಲವೆಂದು ಬೇರೆ ಹೇಳಬೇಕಾಗಿಲ್ಲ. ಈ ಪ್ರಯತ್ನ ಮಾಡಿದ್ದು ಅದ್ವೈತಿಯೂ ಅಲ್ಲ, ಸಿದ್ಧಾಂತದ ಮತ್ತು ಆಚಾರದ ಜ್ಞಾನವಿಲ್ಲದ ನನ್ನಂತಹ ಲೌಕಿಕನೂ ಅಲ್ಲ. ಸಿದ್ಧಾಂತದಲ್ಲಿ ಪ್ರವೀಣರಾಗಿ ಆಚಾರಶೀಲರೆನಿಸಿಕೊಂಡವರೇ ಮಾಡಿದ ಪ್ರಯತ್ನ. ಇದೇ ರೀತಿಯಲ್ಲಿ ಸವಣೂರಿನಲ್ಲಿ ಬೃಂದಾವನಸ್ಥರಾದ ಸತ್ಯಬೋಧ ತೀರ್ಥರಿಗೂ ವಿಷ ಹಾಕಿದರು. ಸತ್ಯಬೋಧರೆಂದರೆ ನಡುರಾತ್ರಿಯಲ್ಲಿ ಸೂರ್ಯನನ್ನು ತೋರಿಸಿದ ಮಹಾತಪಸ್ವಿಗಳು. ಅಲ್ಲದೆ ಬಂಗಾರದ ಕೊಡಗಳಲ್ಲಿ ನವರತ್ನಗಳನ್ನು ತುಂಬಿ ಶ್ರೀ ರಾಮ ದೇವರಿಗೆ ರತ್ನಾಭಿಷೇಕ ಮಾಡುತ್ತಿದ್ದವರು. ಬಂಗಾರದ ಕೊಡವೆಂದರೇನು, ನವರತ್ನಗಳೆಂದರೇನು ಎಂದು ಅರ್ಥವಾಗದ ಈ ಕಾಲದಲ್ಲಿ ಸತ್ಯಬೋಧರ ಯೋಗ್ಯತೆಯನ್ನು ಊಹಿಸುವುದೂ ಕಷ್ಟವಾಗಿದೆ. ಇಂತಹವರಿಗೆಲ್ಲಾ ವಿಷ ಹಾಕಿ ಕೊಲ್ಲುವ ಪ್ರಯತ್ನಗಳನ್ನು ತಿಳಿದೋ ಏನೊ ಎಂಬಂತೆ ಕೆಲ ಮಾಧ್ವರು ಮದ್ದು ಎಂಬ ವಿಷ ಹಾಕಿ ಮಾಧ್ವರನ್ನೇ ಕೊಲ್ಲುತಿರುವವರು ಈಗಲೂ ಇದ್ದಾರೆ. ನಿರಪರಾಧಿಗಳನ್ನು ಕೊಲ್ಲುವ ಪ್ರಯತ್ನ ಎಲ್ಲಾ ಅಪಚಾರಗಳಿಗಿಂತಲೂ ಅತಿ ಹೀನ. ಇದು ದೇವತೆಗಳ ಲಕ್ಷಣವಲ್ಲವೆಂಬುದು ಸ್ಪಷ್ಟ. ಅದ್ವೈತಿಗಳನ್ನು ದೈತ್ಯರೆಂದು ಕರೆಯುವುದು ಮಹಾ ತಪ್ಪು.

ಇನ್ನು ಶಂಕರಾಚಾರ್ಯರ ಮತ್ತು ಅದ್ವೈತಿಗಳ ಬಗ್ಗೆ ವಿಚಾರ ಮಾಡೋಣ. ಬದರಿಯಲ್ಲಿ ನಾರಾಯಣ ದೇವರ ಪ್ರತಿಮೆಯನ್ನು ಬೌದ್ಧರು ಕಿತ್ತು ಅಲಕನಂದಾ ನದಿಯಲ್ಲಿ ಬಿಸಾಡಿದ್ದರು. ಶಂಕರಾಚಾರ್ಯರು ಅದನ್ನು ತೆಗೆಸಿ ಜೀರ್ಣೋದ್ಧಾರ ಮಾಡಿ ಪ್ರತಿಷ್ಠಾಪಿಸಿ ನಿತ್ಯವೂ ಬ್ರಹ್ಮಚಾರಿಗಳಿಂದಲೇ ವೇದೋಕ್ತ ರೀತಿಯಲ್ಲಿ ಪೂಜೆ ನೈವೇದ್ಯಗಳಾಗುವಂತೆ ಏರ್ಪಾಟು ಮಾಡಿದ್ದು ಇಂದಿಗೂ ಏಕೋ ಪ್ರಕಾರವಾಗಿ ನಡೆದು ಬಂದಿದೆ. ಇದು ದೈತ್ಯ ಲಕ್ಷಣವನ್ನಾಗಲೀ ವಿಷ್ಣು ದ್ವೇಷವನ್ನಾಗಲಿ ಸೂಚಿಸುವುದಿಲ್ಲ. ಎಲ್ಲ ಮಾಧ್ವರೂ ಜನ್ಮಸಾಫಲ್ಯಕ್ಕಾಗಿ ಇದೇ ನಾರಾಯಣನ ದರ್ಶನ, ಪೂಜೆ ಮಾಡಲು ಹಾತೊರೆಯುತ್ತಾರೆ. ಇದೇ ರೀತಿಯಲ್ಲಿ ಪುರಿ, ಜೋಷಿಮಠ, ದ್ವಾರಕಾ ಕ್ಷೇತ್ರಗಳಲ್ಲಿಯೂ ತಮ್ಮ ಮಠಗಳನ್ನು ಸ್ಥಾಪಿಸಿ ಶಂಕರಾಚಾರ್ಯರು ಅಲ್ಲಲ್ಲಿರುವ ವಿಷ್ಣು ದೇವಾಲಯಗಳಲ್ಲಿ ಪೂಜೆಗೆ ಏರ್ಪಾಟು ಮಾಡಿದು

ದ್ವೈತ ಸ್ವಭಾವವನ್ನಾಗಲೀ, ವಿಷ್ಣು ದ್ವೇಷವನ್ನಾಗಲೀ ಸೂಚಿಸುವುದಿಲ್ಲ. ಅವರನ್ನು ಹಾಗೆ ಕರೆಯುವುದು ಶುದ್ಧ ತಪ್ಪು. ಇನ್ನು ಅದ್ವೈತಿಗಳ ಬಗ್ಗೆ ನನ್ನ ಅನುಭವವನ್ನು ಹೇಳುವುದಾದರೆ, ನಾನು ತೂತುಕುಡಿಯಲ್ಲಿದ್ದಾಗ ನನ್ನ ಅಕ್ಕಪಕ್ಕದಲ್ಲಿದ್ದ ಅದ್ವೈತಿಗಳ ಮನೆಗಳಲ್ಲಿ ನಿತ್ಯವೂ ಸಾಯಂಕಾಲ ವಾದ್ಯಾರುಗಳು ಬಂದು ವಿಷ್ಣು ಸಹಸ್ರನಾಮವನ್ನು ಪಠನಮಾಡ ಹೋಗುತ್ತಿದ್ದರು. ಇದಕ್ಕೆ ಅವರಿಗೆ ತಿಂಗಳಿಗೆ ಸ್ವಲ್ಪ ಹಣ ಸಿಗುತಿತ್ತು. ನಮ್ಮ ಬೀದಿಯಲ್ಲಿದ್ದ ವಿಷ್ಣು ದೇವಾಲಯದಲ್ಲಿ ಅದ್ವೈತಿಗಳಿಂದ ಪ್ರತಿ ಭಾನುವಾರ ತೈತ್ತರೇಯ ಉಪನಿಷತ್ತಿನ ಪಾರಾಯಣ ನಡೆಯುತ್ತಿತ್ತು. ಬಹಳ ಮಂದಿ ಭಾಗವಹಿಸುತ್ತಿದ್ದರು. ಇದು ದ್ವೈತ ಲಕ್ಷಣವನ್ನಾಗಲೀ ವಿಷ್ಣು ದ್ವೇಷವನ್ನಾಗಲೀ ಸೂಚಿಸುವುದಿಲ್ಲವೆಂಬುದು ಸ್ಪಷ್ಟ. ಈ ಊರಿನಲ್ಲಿ ಎಷ್ಟುಮಂದಿ ಮಾಧ್ವರ ಮನೆಯಲ್ಲಿ ನಿತ್ಯ ವಿಷ್ಣು ಸಹಸ್ರನಾಮ ಆಗುತ್ತದೋ ಎಷ್ಟುಮಂದಿ ಆಚಾರ್ಯರಿಗೆ ವಿಷ್ಣು ಸಹಸ್ರನಾಮ ಕಂಠಸ್ಥವಾಗಿದೆಯೋ ನಾನು ಹೇಳಲಾರೆ. ಮಾಧ್ವರಿಂದ ದೇವಸ್ಥಾನಗಳಲ್ಲಿ ವಾರಕ್ಕೊಂದು ಸಲ ಉಪನಿಷತ್ತಿನ ಪಾರಾಯಣ ವಾಗುತ್ತಿದ್ದುದೂ ನಾನು ಯಾವ ಊರಿನಲ್ಲಿಯೂ ಕಂಡಿಲ್ಲ. ಇದರಿಂದ ಯಾವ ಮತಸ್ಥರಾಗಲೀ ತಾವು ದೇವತೆಗಳೆಂದೂ ಇತರರನ್ನು ದೈತ್ಯರೆಂದೂ ಕರೆಯುವುದು ಮಹಾ ಅಪದ್ಧವೆಂದು ಗೊತ್ತಾಗುತ್ತದೆ. ಎಲ್ಲಾ ಪಂಗಡದಲ್ಲಿಯೂ ಒಳ್ಳೆಯವರೂ ದುಷ್ಟರೂ ಇದ್ದೇ ಇರುತ್ತಾರೆ. ಇದು ಪ್ರಾಕೃತ ಶರೀರವಿರುವ ಮನುಷ್ಯರ ಸ್ವಭಾವ.

ಇಲ್ಲಿ ಒಂದು ಮಾತು ಗಮನಿಸಬೇಕಾಗಿದೆ. ಮಾಧ್ವರ ಭಾವನೆ ವಿಪರೀತ ಪರಿಣಾಮಕ್ಕೆ ಅಸ್ಪದ ಕೊಟ್ಟಿದೆ. Hatred like charity begins at home. ಅದ್ವೈತಿಗಳ ಮೇಲೆ ಮಾಡುವ ದ್ವೇಷ ಮಾಧ್ವರಲ್ಲಿ ಪರಸ್ಪರ ದ್ವೇಷವಾಗಿ ಪರಿಣಮಿಸಿದೆ. ಮಠಗಳಲ್ಲಿ ನಮ್ಮ ಮಠ ಹೆಚ್ಚು, ಇತರ ಮಠಗಳು ಕಡಿಮೆ ಎಂದು ಹೇಳಿಕೊಳ್ಳುವುದಲ್ಲದೆ, ನಮ್ಮ ಮಠದಲ್ಲಿರುವ ದೇವರು ಹೆಚ್ಚು, ಅನ್ಯ ಮಠಗಳಲ್ಲಿರುವ ದೇವರು ಕಡಿಮೆ ಎಂಬ ಭಾವನೆಯೂ ಮೂಡಿ ಬಂದಿದೆ. ಇದು ಸಾತ್ವಿಕ ಸ್ವಭಾವವಲ್ಲ ಮತ್ತು ಅಸುರ ಸ್ವಭಾವವೆಂದೇ ಹೇಳಬಹುದಾಗಿದೆ. ವಿದ್ವಾಂಸರಲ್ಲಿಯೂ ಈ ಭಾವನೆ ಇರುವುದು ವಿಷಾದನೀಯ. ಭಗವದ್ಗೀತೆಯ 14, 16 ಮತ್ತು 17ನೆಯ ಅಧ್ಯಾಯಗಳಲ್ಲಿ ಇಂತಹ ಸ್ವಭಾವವನ್ನು ಕಟುವಾಗಿ ನಿಂದಿಸಲಾಗಿದೆ. ಕಾರಣ ಮಾಧ್ವರು ಈ ಭಾವನೆಯನ್ನು ತ್ಯಜಿಸಬೇಕು.

ಮಾಧ್ವರು ಅದ್ವೈತ ಸಿದ್ಧಾಂತವನ್ನೇ ಏಕೆ ಬಹಳವಾಗಿ ಖಂಡಿಸುವುದೆಂದರೆ, ಅದರ ಪ್ರಮೇಯಗಳೇ ಬಹಳವಾಗಿ ಜನರನ್ನು ಭ್ರಾಂತಿಗೊಳಿಸುತ್ತಿವೆ. ಈಗ ಹರಡಿಕೊಂಡಿರುವ ರಾಮಕೃಷ್ಣ ಮಿಷನ್, ಚಿನ್ಮಯ ಮಿಷನ್, ರಮಣಮಿಷನ್

Divine Life Society ಮುಂತಾದುವುಗಳೆಲ್ಲಕ್ಕೂ ಶಂಕರಾಚಾರ್ಯರ ಅದ್ವೈತ ಸಿದ್ಧಾಂತವೇ ಮೂಲ. ಇವು ಎಷ್ಟು ಆಕರ್ಷಕವಾದರೂ ಪರಮಾರ್ಥ ಸಾಧನೆ ಯಾಗುವುದಿಲ್ಲ. ಇವುಗಳ ಸಮಾಜ ಸೇವೆ, ಸಮಾಜ ಸುಧಾರಣೆ ಬಹಳ ಪ್ರಶಂಸನೀಯ. ಆದರೆ ತತ್ತ್ವ ವಿಚಾರ ತಪ್ಪು. ಜೀವ ಅತೀಂದ್ರಿಯ ವಸ್ತು ಆದ್ದರಿಂದ ಅದು ಸರ್ವವ್ಯಾಪಕ, ಸರ್ವಶಕ್ತವೆಂಬ ತಪ್ಪು ಭಾವನೆ ಇದೆ. ಉದಾಹರಣೆಗೆ ದೆವ್ವ, ಪಿಶಾಚಿ ಮುಂತಾದವುಗಳು ಇಂದ್ರಿಯಗಳಿಗೆ ಗೋಚರವಲ್ಲ. ಆದರೂ ಅವು ಸರ್ವ ವ್ಯಾಪಕವೂ ಅಲ್ಲ, ಸರ್ವ ಶಕ್ತವೂ ಅಲ್ಲ ಎಂಬುದು ಅನುಭವ ಸಿದ್ಧ. ಇವರುಗಳು ಹೇಳುವ Universal Consciousness Higher self ಎಂಬುದು ಒಂದು ಕಲ್ಪನೆ ಮಾತ್ರ. ಭಗದ್ಗೀತೆಯಲ್ಲಿ 'ಆತ್ಮ'ಶಬ್ದವನ್ನು ವಿವಿಧ ಅರ್ಥಗಳಲ್ಲಿ ಉಪಯೋಗಿಸಿದುದೂ, ಶಂಕರಾಚಾರ್ಯರು ತೆಗೆದ "ಅಹಂ ಬ್ರಹ್ಮಾಸ್ಮಿ" ಮೊದಲಾದ ಮಹಾ ವಾಕ್ಯಗಳೂ ಇವುಗಳನ್ನು ತಪ್ಪುದಾರಿಗೆ ಎಳದಿದೆ. ಇವು ಬಹಳ ಆಕರ್ಷಕವಾಗಿರುವುದರಿಂದ ಜನರನ್ನು ಮೋಹಗೊಳಿಸುತ್ತಿವೆ. ಜೀವನ ಸ್ವರೂಪ, ಬ್ರಹ್ಮನ ಸ್ವರೂಪ, ಅವರ ಪರಸ್ಪರ ಸಂಬಂಧ ತಿಳಿಯಲು ವೇದವೇ ಪ್ರಮಾಣ. ಜೀವ ಅಣು ಪ್ರಮಾಣವೆಂದು ವೇದವೇ ಹೇಳುತ್ತದೆ. ಅವನು ಬ್ರಹ್ಮನ ಪ್ರತಿಬಿಂಬ. ಈ ಬಿಂಬಕ್ಕೂ, ಪ್ರತಿಬಿಂಬಕ್ಕೂ, ಪರಸ್ಪರ ಸಂಬಂಧಕ್ಕೂ ನಾಶವಿಲ್ಲ. ಆದ್ದರಿಂದಲೇ ಜೀವನು ನಿತ್ಯ. ಬಿಂಬ ಸ್ವರೂಪಿಯಾದ ಬ್ರಹ್ಮನನ್ನು ತಿಳಿಯುವುದೇ ಸದ್ಗತಿಗೆ ದಾರಿ. ಬ್ರಹ್ಮ ಜ್ಞಾನ ವಾಗುವ ತನಕ ಪರತಂತ್ರನಾದ ಜೀವನ ಸರಿಯಾದ ಅರಿವು ಆಗುವುದಿಲ್ಲ. ಜೀವ ಪರಮಾತ್ಮನ ಸದಾ ದಾಸನೆಂಬುದೇ ಸರಿಯಾದ ಜ್ಞಾನ. ಇದನ್ನು ತೋರಿಸಿ ಕೊಟ್ಟದ್ದೇ ಮಧ್ವಾಚಾರ್ಯರ ವೈಶಿಷ್ಟ್ಯ.

ಇನ್ನು ನಾವು ಅದ್ವೈತಿಗಳ ಮೇಲೆ ಹೊರಿಸುವ ಅಪವಾದದ ಬಗ್ಗೆ ವಿಚಾರಿಸೋಣ. ಅವರು "ನಾನೇ ದೇವರು" ಎನ್ನುತ್ತಾರೆ ಎಂಬುದೇ ಅಪವಾದ. ಇದು ತಪ್ಪು. ಅವರು ನಾನೇ ದೇವರು ಎನ್ನುವುದಿಲ್ಲ. ತಿರುಪತಿಗೆ ಹೋದಾಗ ಶ್ರೀ ವೆಂಕಟೇಶ್ವರನಿಗೆ ನಮಸ್ಕಾರ ಮಾಡುತ್ತಾನೆ. ಪ್ರಪತ್ತಿ, ಪ್ರಪತ್ತಿ ಎಂದು ಹೇಳುವ ಅಲ್ಲಿರುವ ಶ್ರೀ ವೈಷ್ಣವರ ಗುಂಪಿಗೆ ಹೆದರಿ ನಮಸ್ಕರಿಸುವುದಿಲ್ಲ. ಉಡುಪಿಗೆ ಹೋದಾಗ ಶ್ರೀಕೃಷ್ಣನಿಗೆ ನಮಸ್ಕರಿಸುತ್ತಾನೆ. ಸದಾ, ದಾಸನೆಂದು ಹೇಳಿಕೊಳ್ಳುವ ಮಾಧ್ವರ ಗುಂಪಿಗೆ ಹೆದರಿ ನಮಸ್ಕರಿಸುವುದಿಲ್ಲ. ಕೇದಾರಕ್ಕೆ ಹೋದಾಗ ಅಲ್ಲಿ ಯಾವ ವೈಷ್ಣವರ ಹಾವಳಿಯೂ ಇಲ್ಲದರಿಂದ ಅಲ್ಲಿರುವ ಶಿವನಿಗೆ ನಮಸ್ಕಾರ ಮಾಡದೇ ಇರುವುದಿಲ್ಲ. ಎಲ್ಲಾ ಕಡೆಯಲ್ಲಿಯೂ ತಾನು ಅಲ್ಪ, ದೇವರು ಸರ್ವ ಶಕ್ತ ಮತ್ತು ಬೇರೆ, ಅವನ ಅನುಗ್ರಹ ಬೇಕೆಂದು ತಿಳಿದು ಅದ್ವೈತಿಯು ನಮಸ್ಕರಿಸುತ್ತಾನೆ. ಏಕೆಂದರೆ ಅದ್ವೈತಮತದಲ್ಲಿ ದೇವರು

ಬ್ರಹ್ಮನಲ್ಲ. ಬ್ರಹ್ಮ ಪಾರಮಾರ್ಥಿಕ ಸತ್ಯ. ದೇವರು ವ್ಯಾವಹಾರಿಕ ಸತ್ಯ. ವ್ಯಾವಹಾರಿಕ ಸತ್ಯದಲ್ಲಿ ಜೀವ ಬೇರೆ, ದೇವರು ಬೇರೆ, ಜಗತ್ತು ಸತ್ಯ ಮುಂತಾದ ಪ್ರಮೇಯಗಳು. ಆದ ಕಾರಣ ಅವರು "ನಾನೇ ದೇವರು" ಎನ್ನುವುದಿಲ್ಲ. ಅವರು "ಅಹಂ ಬ್ರಹಾಸ್ಮಿ"ಎನ್ನುತ್ತಾರಲ್ಲ ಎಂದರೆ ಆದರೂ ಮಾಧ್ವರು ದ್ವೇಷಿಸುವ ಕಾರಣ ವಿಲ್ಲ. ಬ್ರಹ್ಮ ಶಬ್ದಕ್ಕೆ ಅನೇಕಾರ್ಥಗಳಿವೆ. ಅದರಲ್ಲಿ ಜೀವ ವೆಂಬುದೂ ಒಂದು. ಈ ವಾಕ್ಯ ಪಾರಮಾರ್ಥಿಕ ಸತ್ಯವೆಂದು ಹೇಳುವುದರಿಂದ ಇದರಲ್ಲಿ ಬರುವ 'ಬ್ರಹ್ಮ' ನಿರ್ಗುಣ. ಅಂದರೆ ಯಾವ ಗುಣವೂ ಇಲ್ಲದವನು. 'ಅಹಂ' ಎಂಬ ಜೀವ ಇಂತಹ ಬ್ರಹ್ಮ. ಶ್ರೀ ವಿಜಯೀಂದ್ರ ಸ್ವಾಮಿಗಳು ಒಂದು ಸಂದರ್ಭದಲ್ಲಿ ಹೇಳಿದ್ದಾರೆ: 'ಲಕ್ಷ್ಮೀದೇವಿಗೆ ಪರಮಾತ್ಮನ ಗುಣಗಳನ್ನೂ, ನನ್ನ ಗುಣಗಳನ್ನೂ ಎಣಿಸಲು ಸಾಧ್ಯವಿಲ್ಲ' ಎಂದು. ಇದು ವಿಪರೀತದಲ್ಲಿ ಅದ್ವೈತ. ಪರಮಾತ್ಮನ ಗುಣಗಳು ಅನಂತವಾದ್ದರಿಂದ ಸಂಪೂರ್ಣ ಎಣಿಸಲು ಸಾಧ್ಯವಿಲ್ಲ. ಜೀವ ನಿರ್ಗುಣ ಅಂದರೆ ಯಾವ ಗುಣಗಳೂ ಇಲ್ಲದ್ದರಿಂದ ಎಣಿಕೆಯ ಪ್ರಶ್ನೆಯೇ ಇಲ್ಲ. ಈ ರೀತಿ ಜೀವ ನಿರ್ಗುಣನಾದ ಬ್ರಹ್ಮನೆಂದರೆ ಆಕ್ಷೇಪ ಮಾಡಲು ಕಾರಣವಿಲ್ಲ.

ಆದರೆ "ಮಾಯಾವಾದಿ" ಗಳೆಂದರೆ ಅದ್ವೈತಿಗಳು ಸಿಟ್ಟಾಗಬಾರದು. ಏಕೆಂದರೆ, "ಪಾರಮಾರ್ಥಿಕ ಸತ್ಯ"ವೆಂದು ಕರೆಸಿಕೊಂಡ "ನಿರ್ಗುಣ ಬ್ರಹ್ಮ" ಅನಿರ್ವಚನೀಯ ಎಂದರೆ, ಅದು ಎಂದು ನಪುಂಸಕಲಿಂಗದಲ್ಲಾಗಲಿ, ಅವನು ಎಂದ ಪುಲ್ಲಿಂಗದಲ್ಲಾಗಲೀ, ಅವಳು ಎಂದು ಸ್ತ್ರೀಲಿಂಗದಲ್ಲಾಗಲಿ, ನಿರ್ಗುಣ ಬ್ರಹ್ಮನನ್ನು ಹೇಳಲಾಗುವುದಿಲ್ಲ. ಈ ಮೂರು ಲಿಂಗಗಳನ್ನು ಬಿಟ್ಟರೆ ಮಾತೇ ಇಲ್ಲ. ಇವು ಬಿಟ್ಟರೆ ಉಳಿದಿರುವುದು ಮಾಯ ಮಾತ್ರ. ವಚನಕ್ಕೆ ಬರುವುದೆಲ್ಲವೂ ಮಾಯವೇ. ಇದರಿಂದ ಅವರ ಎಲ್ಲಾ ವಾದವು ಮಾಯಾವಾದವೇ ಆಗಿದೆ. ಪಾರಮಾರ್ಥಿಕ ಸತ್ಯವೆನಿಸಿಕೊಂಡ ತತ್ತ್ವದ ಬಗ್ಗೆ ಏನನ್ನೂ ಹೇಳಲಾಗುವುದಿಲ್ಲ. ಅದು ನಿರ್ವಿಶೇಷ. ವಾದವೆಲ್ಲವೂ ವ್ಯಾವಹಾರಿಕ ಸತ್ಯದ ಬಗ್ಗೆ. ವ್ಯಾವಹಾರಿಕ ಸತ್ಯವೆಂದರೂ ಮಾಯವೆಂದರೂ ಒಂದೇ. ಇಲ್ಲಿ ಒಂದು ವಿಷಯ. ಶಂಕರಾಚಾರ್ಯರು ಬರೇ ಪಾರಮಾರ್ಥಿಕ ಸತ್ಯ ನಿರ್ಗುಣ ಬ್ರಹ್ಮನೆಂದು. ಎಲ್ಲಾ ಜಗತ್ತು ಮಿಥ್ಯೆ ಅಥವಾ ಸುಳ್ಳೆಂದು ಹೇಳಿ ಸುಮ್ಮನಿದ್ದರೆ ಭಾರತದಲ್ಲಿ ಅವರನ್ನು ಯಾರೂ ಗಮನಿಸುತ್ತಿರಲಿಲ್ಲ. ದೇವರಿಲ್ಲದ ಬುದ್ಧನ ಗತಿಯೇ ಅವರಿಗಾಗುತ್ತಿತ್ತು. ಅದ್ವೈತದಲ್ಲಿ, ಮಾಯೆ, ಅವಿದ್ಯೆ, ಮಿಥ್ಯೆ, ವ್ಯಾವಹಾರಿಕ ಸತ್ಯ ಎಂಬ ಪದಗಳು ಸಮಾನಾರ್ಥ ಉಳ್ಳವುಗಳು. ಮಾಯೆ ಎಂದಾಗಲಿ, ವ್ಯಾವಹಾರಿಕ ಸತ್ಯವೆಂದಾಗಲೀ, ಶಿವ, ವಿಷ್ಣು, ಗಣಪತಿ, ಪಾರ್ವತಿ, ಲಕ್ಷ್ಮಿ, ಮುಂತಾದ ದೇವತೆಗಳು. ಪ್ರತಿ ಒಬ್ಬ ಜೀವರಿಗೆ ಸಾಧನೆಗಾಗಿ ಈ ಜಗತ್ತಿನಲ್ಲಿ

ವಿವಿಧ ಕರ್ಮಗಳು. ಇದರ ಫಲವಾಗಿ ಇದರಲ್ಲಿಯೂ, ಪರದಲ್ಲಿಯೂ ಅನೇಕ ಗತಿಗಳು. ಇವುಗಳನ್ನು ಹೇಳಿ ಶಿವನೇ ಸರ್ವೋತ್ತಮನೆಂಬ ಸಿದ್ಧಾಂತವನ್ನು ಮಾಡಿದ್ದರಿಂದಲೇ ಅವರಿಗೆ ಮನ್ನಣೆ. ನಿರ್ಗುಣ ಬ್ರಹ್ಮ ಎಂಬುದು ಹೆಸರಿಗೆ ಮಾತ್ರ. ವಿದ್ವಾಂಸರ ವಿನೋದಕ್ಕೋ, ವಿದ್ವತ್ಪ್ರದರ್ಶನಕ್ಕೊ ಎಂಬಂತಿದೆ. ಶೈವ ಪ್ರಧಾನವಾದ ಮತಸ್ಥಾಪಕರಲ್ಲಿ ವಿಷ್ಣುವಿಗೆ ಸ್ಥಾನ ಮಾನಗಳನ್ನು ಕೊಟ್ಟವರು ಶಂಕರಾಚಾರ್ಯರೊಬ್ಬರೇ. ಇದೇ ರೀತಿಯಲ್ಲಿ ವಿಷ್ಣು ಸರ್ವೋತ್ತಮತ್ವವನ್ನು ಸಾರುವ ವೈಷ್ಣವಾಚಾರ್ಯರಲ್ಲಿ ಶಿವನಿಗೆ ಸ್ಥಾನ ಮಾನಗಳನ್ನು ಕೊಟ್ಟು, ಅವನಲ್ಲಿ ಭಕ್ತಿ ಆವಶ್ಯಕವೆಂದು ಹೇಳಿದವರು ಮಧ್ವಾಚಾರ್ಯರೊಬ್ಬರೇ.

ಈಗ ಒಂದು ಮಾತು. ಮಣಿಮಂಜರಿ, ಮಧ್ವವಿಜಯ, ವಾಯುಸ್ತುತಿ ಮುಂತಾದವುಗಳಲ್ಲಿ ಶಂಕರಾಚಾರ್ಯರನ್ನೂ, ಅವರ ಅನುಯಾಯಿಗಳನ್ನೂ ದೈತ್ಯರೆಂದು ಕರೆದಿದ್ದಾರೆಲ್ಲಾ ಎಂದರೆ ಅದು ಕಾಲದ ಬಲ. ಕುಮಾರಿಲ ಭಟ್ಟರನ್ನು ವೇಷ ಬದಲಾಯಿಸಿದ ಬ್ರಾಹ್ಮಣನೆಂದು ತಿಳಿದ ಕೂಡಲೆ ಬೌದ್ಧರು ಅವನನ್ನು ಕೊಲ್ಲಲು ಮಹಡಿ ಮೇಲಿನಿಂದ ಕೆಳಗೆ ತಳ್ಳಿದ ಕಾಲ.ರಾಮಾನುಜಾಚಾರ್ಯರು ವೈಷ್ಣವಾಚಾರ್ಯರೆಂದು ತಿಳಿದ ಶೈವರು ಅವರ ಕಣ್ಣುಗಳನ್ನು ಕಿತ್ತಲು ಪ್ರಯತ್ನಿಸಿದ ಕಾಲ. ಸೋದೆಯಲ್ಲಿ ಬ್ರಾಹ್ಮಣರ ಹೆಸರೇ ಇಲ್ಲದಂತೆ ಮಾಡುವ ಲಿಂಗಾಯಿತರು ಪ್ರಯತ್ನಿಸಿದ ಕಾಲ. ಹೀಗೆ ಇತರರನ್ನು ದೈತ್ಯರೆಂದು ಕರೆಯದೆ ತಮ್ಮ ಸಿದ್ಧಾಂತವನ್ನು ಮುಂದುವರಿಸುವಂತೆ ಆಗುತ್ತಿಲ್ಲದ ಕಾಲ ಅದು. ಆದರೂ ಮಧ್ವಾಚಾರ್ಯರಾಗಲೀ, ಜಯತೀರ್ಥರಾಗಲೀ ಈ ಶಬ್ದವನ್ನು ಉಪಯೋಗಿಸಿದಂತೆ ಕಾಣುವುದಿಲ್ಲ. ತಮ್ಮ ಉಳಿವುಗೋಸ್ಕರ ಕೆಲ ಮಾಧ್ವರು ಬಳಸಿದ ಶಬ್ದ. ಈ ಮಾತ್ರದಿಂದ ಆ ಶಬ್ದಗಳನ್ನು ಪ್ರಮಾಣವೆಂದು ಹೇಳಲಾಗುವುದಿಲ್ಲ. ಅದರಲ್ಲೂ ಬಹಳ ಬದಲಾವಣೆ ಹೊಂದಿದ ಈ ಕಾಲದಲ್ಲಿ ಆ ಶಬ್ದಗಳನ್ನು ಬಳಸುವುದು ಶುದ್ಧ ಅವಿವೇಕದ ಮಾತು. ಇದನ್ನು ಮಾಧ್ವರು ತ್ಯಜಿಸಬೇಕು. ಇತರ ಸಿದ್ಧಾಂತಗಳು ದೋಷ ಉಳ್ಳವು, ಪರಗತಿಗೆ ಸಾಧನವಾಗುವುದಿಲ್ಲ ಎಂದು ತಿಳಿದರೆ ಸಾಕು. ವ್ಯಕ್ತಿಗಳ ದ್ವೇಷ ಬಹಳ ಅನರ್ಥಕಾರಿ.

ಇನ್ನು ಮಧ್ವಾಚಾರ್ಯರ ಮೇಲೆ ಮಾಡುವ ಅಪವಾದವನ್ನು ವಿಚಾರಿಸೋಣ. ಮಧ್ವಾಚಾರ್ಯರು ಸಾಮಾನ್ಯ ಜನರಿಗೆ ಅನುಭವದಲ್ಲಿ ಬರುವ ತತ್ತ್ವಗಳನ್ನೇ ಹೇಳಿದ್ದಾರೆ. ಜೀವ ಬೇರೆ, ದೇವರು ಬೇರೆ, ಜಗತ್ತು ಸತ್ಯವಾಗಿದೆ ಮೊದಲಾದ ವಿಷಯಗಳು ಎಲ್ಲರಿಗೂ ತಿಳಿದ ವಿಷಯಗಳೇ; ಇದಕ್ಕೆ ಶಾಸ್ತ್ರದ ಅವಶ್ಯಕತೆ ಇಲ್ಲ. ಶಾಸ್ತ್ರವು

ಅನುಭವದಲ್ಲಿ ಬಾರದದುದನ್ನು ತಿಳಿಸಿಕೊಡಬೇಕು. ಇದು ಆಕ್ಷೇಪದ ತಿರುಳು. ಈ ರೀತಿ ಹೇಳಿ ಪ್ರಪಂಚದ ಎಲ್ಲರೂ ಮಾಧ್ವರೇ ಎಂದು ಹೇಳುವ ವಾಡಿಕೆ ಮೂಡಿ ಬಂದಿದೆ. ಇದರ ಸಾರ ಹೀಗಿದೆ. ಮಧ್ವಸಿದ್ಧಾಂತದಲ್ಲಿ ಜ್ಞಾನ ಭಾಗ ಬಹಳ ಕೆಳಮಟ್ಟದ್ದು, ಶಂಕರಾಚಾರ್ಯರ, ರಾಮಾನುಜಾಚಾರ್ಯರ ಸಿದ್ಧಾಂತಗಳು ಜ್ಞಾನದ ಪರಮಾವಧಿ ಎಂದು. ಇದು ಅಸೂಯೆಯಿಂದ ಕೂಡಿದ ಅವಹೇಳನದ ಮಾತು. ಮಧ್ವಾಚಾರ್ಯರ ಜ್ಞಾನ ಯಾವ ಮಟ್ಟದಲ್ಲಿತ್ತು ಎಂಬುದನ್ನು ಶ್ರೀ ಜಯತೀರ್ಥರು, ಶ್ರೀ ವ್ಯಾಸರಾಯರು ಮುಂತಾದ ಜ್ಞಾನಿವರ್ಯರು ತೋರಿಸಿದ್ದಾರೆ. ಪರರಸಿದ್ಧಾಂತಗಳನ್ನು ಪರರ ನ್ಯಾಯದಿಂದಲೇ ಖಂಡಿಸಿ ಅವುಗಳಲ್ಲಿ ಜ್ಞಾನದ ಮಾತಂತಿರಲಿ, ಏಕವಾಕ್ಯತೆಯೂ (Consistency) ಇಲ್ಲವೆಂದು ಇವರುಗಳು ತೋರಿಸಿ ಮಧ್ವಾಚಾರ್ಯರ ವ್ಯಾಖ್ಯಾನಗಳ ಶ್ರೇಷ್ಠತೆಯನ್ನು ಎತ್ತಿ ತೋರಿಸಿದ್ದಾರೆ. ಈಗ ಈ ಆಕ್ಷೇಪವನ್ನು ನಮ್ಮ ಮಟ್ಟದಲ್ಲಿ ಪರಿಶೀಲಿಸಿ ಎಷ್ಟರಮಟ್ಟಿಗೆ ಹೊಂದುತ್ತದೆಂಬುದನ್ನು ನೋಡೋಣ. ನಾವೇನು ಜೀವನದಲ್ಲಿ ತಿಳಿದವರಂತೆ ಶಬ್ದಗಳನ್ನು ಬಳಸುತ್ತೇವೋ ಅವುಗಳೆಲ್ಲವೂ ವೇದದಿಂದಲೇ ಬಂದವುಗಳೇ. ವೇದದಿಂದಲೇ ಅವುಗಳ ಅರ್ಥ ಸ್ಪಷ್ಟವೆಂದು ಮಧ್ವಾಚಾರ್ಯರು ತೋರಿಸಿದ್ದಾರೆ. ಉದಾಹರಣೆಗೆ: "ಪ್ರಪಂಚ" ಎಂಬ ಶಬ್ದ ತೊಗೊಳ್ಳೋಣ. ಇದು ಎಲ್ಲರೂ ಬಳಸುವ ಪದ. ಆದರೆ, ಇದರ ಸರಿಯಾದ ಅರ್ಥ ವೇದದಿಂದಲೇ ಆಗಬೇಕು. "ಪಂಚ" ಎಂದರೆ ಐದು. 'ಪ್ರ' ಎಂದರೆ ಪ್ರಕೃಷ್ಟವಾದ ಅಥವಾ ಶ್ರೇಷ್ಠವಾದ ಎಂದು. "ಪ್ರಪಂಚ" ಎಂದರೆ ಶ್ರೇಷ್ಠವಾದ 5 ಎಂದಾಯಿತು. ಇವು ಯಾವು? ಪಂಚಭೂತಗಳೆನಿಸಿದ, ಪೃಥ್ವಿ, ನೀರು, ಅಗ್ನಿ, ವಾಯು ಮತ್ತು ಆಕಾಶಗಳಾಗುವುದಿಲ್ಲ. ಯಾಕೆಂದರೆ ಇವೆಲ್ಲ ಜಡ. "ಪ್ರಪಂಚ" ವೆಂಬಲ್ಲಿ ಚೇತನವೂ ಸೇರಿದೆ. "ಪ್ರಪಂಚ" ಎಂದರೆ "ಪಂಚಭೇದ". ತತ್ವಗಳು ಮೂರು: 1) ಜೀವ, 2) ಜಡ, 3) ಈಶ. ಅವುಗಳ ಪರಸ್ಪರ ಸಂಬಂಧ 5 ವಿಧ. 1) ಜೀವ-ಜೀವ, 2) ಜೀವ-ಈಶ, 3) ಜೀವ-ಜಡ, 4) ಜಡ-ಜಡ 5) ಜಡ-ಈಶ. ಈ ಐದು ಸಂಬಂಧಗಳು ಅನಾದಿ ನಿತ್ಯವೆಂದು ವೇದ ಹೇಳುತ್ತದೆ. ಮುಂಡಕ ಉಪನಿಷತ್ತಿನ ವಾಕ್ಯ ಹೀಗಿದೆ: "ಪ್ರಪಂಚೋ ಯದಿ ವಿದ್ಯೇತ ನಿವರ್ತೇತ ನ ಸಂಶಯಃ" ಪ್ರಕೃಷ್ಟವಾದ ಪಂಚಕವು ಹುಟ್ಟಿದ್ದೇ ಆಗಿದ್ದರೆ ಸಂಶಯವಿಲ್ಲದೆ ನಾಶಹೊಂದುತಿತ್ತು ಎಂದು ಇದರ ಅರ್ಥ. ಇಲ್ಲಿ ಮುಖ್ಯವಾದ ಪದ "ವಿದ್ಯೇತ" ಎಂಬುದು. ಸಾಮಾನ್ಯವಾಗಿ ಇದರ ಅರ್ಥ "ಜ್ಞಾನಕ್ಕೆ ವಿಷಯವಾದುದು" ಎಂದಾಗುತ್ತದೆ. ಇದು ಶಂಕರಾಚಾರ್ಯರು ಮಾಡಿದ ಅರ್ಥ ಇದು ಸರಿಯಾಗಿದ್ದರೆ ಜ್ಞಾನಕ್ಕೆ ವಿಷಯನಾದ ಬ್ರಹ್ಮನೂ ನಾಶ ಹೊಂದಬೇಕಾಗುವುದು. ಇದು ಅಬದ್ಧ. ಕಾರಣ ಮಧ್ವಾಚಾರ್ಯರು ಪ್ರಮಾಣದ ಆಧಾರದ ಮೇಲೆ "ವಿದ್ಯೇತ" ಎಂದರೆ "ಹುಟ್ಟಿದ್ದು ಆಗಿದ್ದರೆ" ಎಂದು ಅರ್ಥ ಮಾಡಿದ್ದಾರೆ.

ಯಾವುದಕ್ಕೆ ಆದಿಯುದೋ ಅವಕ್ಕೆ ಅಂತ್ಯವೂ ಅದೆ. "ಪ್ರಪಂಚ" ಅಂದರೆ "ಪಂಚಭೇದ" ಹುಟ್ಟಿದಲ್ಲ, ಆದಕಾರಣ ಅನಾದಿ, ನಿತ್ಯ ಎಂದೇ ವೇದವಾಕ್ಯ. ಮೂರು ಮೂಲ ತತ್ತ್ವಗಳ ಪರಸ್ಪರ ಸಂಬಂಧ ಮಾಧ್ವರಲ್ಲಿ "ಪಂಚಭೇದ" ವೆಂದು ಪ್ರಸಿದ್ಧಿಯಾಗಿದೆ. ಈಗ, "ಭೇದ" ಎಂಬ ಶಬ್ದವು ಸ್ವಲ್ಪ ಗೊಂದಲಕ್ಕೆ ಆಸ್ಪದ ಕೊಟ್ಟು, ಮಧ್ವಾಚಾರ್ಯರ ಸಿದ್ಧಾಂತವು "ಭೇಧ"ವನ್ನು ಸಾಧಿಸುವುದರಿಂದ ಜನರ ಒಗ್ಗಟ್ಟಿಗೆ ತಡೆಯುಂಟುಮಾಡಿದೆ. ಎಂಬ ಆರೋಪ ಸಾಮಾನ್ಯವಾಗಿ ಮಾಡುತ್ತಾರೆ. ಕಾರಣ "ಭೇದ" ಎಂಬ ಶಬ್ದದ ಅರ್ಥಗ್ರಹಣ ಮಾಡಬೇಕಾಗಿದೆ. ಉಪಾಯಗಳು ನಾಲ್ಕು: ಸಾಮ, ದಾನ, ಭೇದ, ದಂಡ, ಎಂದು. ಇಲ್ಲಿ "ಭೇದ" ಎಂದರೆ ಶತ್ರುಗಳಲ್ಲಿ ಪರಸ್ಪರ ಕಲಹ ಹುಟ್ಟಿಸುವಿಕೆ. ಆದರೆ "ಪಂಚಭೇದ" ಎಂಬಲ್ಲಿ "ಭೇದ" ಈ ಅರ್ಥ ಕೊಡುವುದಿಲ್ಲ. ಉದಾಹರಣೆಗೆ "ಭೇದ" ಎಂದರೆ ಭಿನ್ನ ಎಂದು. ಭಿನ್ನವಾದುದು ವಿರುದ್ಧವಾಗಿರಬೇಕಾಗಿಲ್ಲ. ಘಟ, ಪಟಗಳು ಭಿನ್ನ. ಆದರೆ ಅವುಗಳಿಗೆ ವಿರೋಧವಿಲ್ಲ. ಘಟವಿದ್ದಲ್ಲಿ ಪಟ (ವಸ್ತ್ರ) ಇರಬಹುದು. "ಭಿನ್ನ" ಮತ್ತು "ವಿರುದ್ಧ" ಎಂಬ ಶಬ್ದಗಳ ಅರ್ಥ ಸರಿಯಾಗಿ ಗಮನದಲ್ಲಿದ್ದರೆ "ಪಂಚಭೇದ" ಎಂಬುದನ್ನು ತಪ್ಪಾಗಿ ಗ್ರಹಿಸಲು ಅವಕಾಶವಿಲ್ಲ. ಯಾರಾದರೂ ಡಾಕ್ಟರು ಎಂದರೂ ಇಂಜಿನಿಯರ್ ಎಂದರೂ ಒಂದೇ ಎಂದು ಹೇಳಿದರೆ, ಹಾಗಲ್ಲ ಇವರಲ್ಲಿ ಭೇದವಿದೆ ಎಂದು ಹೇಳಿದರೆ ಅವರಿಬ್ಬರೂ ಜಗಳವಾಡುತ್ತಾರೆಂದಾಗುವುದಿಲ್ಲ. ಡಾಕ್ಟರು ಹತ್ತಿರ ಹೋಗಿ ಸೇತುವೆ ಮುರಿದಿದೆ ಸರಿ ಮಾಡುವಿರಾ ಎಂದರೆ ಅವನು ಹೇಳುತ್ತಾನೆ: ನನಗೆ ಕಾಲು ಮುರಿದರೆ ಸರಿ ಮಾಡಲು ಬರುತ್ತದೆ ಸೇತುವೆ ಸರಿಮಾಡುವುದು ಇಂಜಿನಿಯರ್‌ರವರ ಕೆಲಸ ಎಂದು. ಇದೇರೀತಿ ಇಂಜಿನಿಯರ ಹತ್ತಿರ ಹಲ್ಲು ಕಟ್ಟುತ್ತೀರಾ ಎಂದು ಕೇಳಿದರೆ, ಅದು ಡಾಕ್ಟರರ ಕೆಲಸ. ನಾನು ಮನೆ ಕಟ್ಟಬಲ್ಲೆ ಎಂದು. ಹೀಗೆ "ಭೇದ" ಎಂದರೆ ಪ್ರತ್ಯೇಕ" ಎಂದಾಗುತ್ತದೆ. ಹೀಗೆ ಪಂಚಭೇದ" ಎಂದರೆ ಮೂರು ಮೂಲ ತತ್ತ್ವಗಳ ಪರಸ್ಪರ ಬೇರೆ ಬೇರೆ ಸಂಬಂಧ ಆಗಿವೆ ಎಂದು. ಬೇರೆ ಅರ್ಥಮಾಡುವುದು ತಪ್ಪು. ಜನರ ಒಗ್ಗಟ್ಟಿನ ಸಂಬಂಧದ ಪ್ರಶ್ನೆಯೇ ಇಲ್ಲ. ಜಡಕ್ಕೂ ಈಶನಿಗೂ ಭೇದವೆಂದರೆ ಜಡವು ಈಶನಿಂದ ಜಗಳವಾಡುತ್ತದೆಂದಾಗುವುದಿಲ್ಲ. ಈ 5 ವಿಧವಾದ ಸಂಬಂಧದಿಂದಲೇ ಜಗತ್ತು ನಡೆಯುತ್ತದೆ ಎಂಬುದೇ ಮಧ್ವ ಸಿದ್ಧಾಂತ. ಈ ಜ್ಞಾನವೇ ಬಹಳ ಮುಖ್ಯವೆಂದು ಮಧ್ವಾಚಾರ್ಯರು ಹೇಳಿದ ಕಾರಣವೇನೆಂದರೆ ಈ ಮೂಲ ತತ್ತ್ವಗಳಲ್ಲಿ ಯಾವುದಾದರೂ ಒಂದು ತತ್ತ್ವವನ್ನು ಅಲ್ಲಗಳೆದರೆ ಐದು ವಿಧ ಸಂಬಂಧ ಕಡಿಮೆ ಹೋಗುತ್ತದೆ. ಇದೇ ಇತರ ಸಿದ್ಧಾಂತಗಳ ಮುಖ್ಯ ದೋಷ. ಇದು ಸರಿಯಾದ ಜ್ಞಾನವಲ್ಲ ವೆಂದು ತೋರಿಸಿದುದೇ ಮಧ್ವಾಚಾರ್ಯರ ವೈಶಿಷ್ಟ್ಯ. "ಜೀವ-ಜೀವ ಭೇದ" ವೆಂಬುದು ಒಂದು ಸಾರವಾದ ತತ್ತ್ವವನ್ನು ತಿಳಿಸಿಕೊಡುತ್ತದೆ. Each one has to work out his own or her own destiny.

"ಯಾರಿಗೆ ಯಾರಿಲ್ಲ ಯಾರವಿನ ಸಂಸಾರ" ಎಂದು ದಾಸರು ಸಾರಿದ್ದಾರೆ. ಇದೇ "ವೈರಾಗ್ಯ" "ಏಕಾಂತ" "ಸಂಘ ರಾಹಿತ್ಯ" ಎಂಬುದರ ಅರ್ಥ. ಇದೇ ಸದ್ಗತಿಗೆ ದಾರಿ.

ಸಾಮಾನ್ಯವಾಗಿ ಬಳಸುವ ಇನ್ನೊಂದು ಶಬ್ದ ತೊಗೊಳ್ಳೋಣ. "ಕಾಲಹರಣ ಮಾಡ ಬೇಡ" ಎಂದು ಹೇಳುವ ವಾಡಿಕೆ. ಇದಕ್ಕೂ ವೇದವೇ ಮೂಲ. "ಹರಣ" ಎಂದರೆ ಕದಿಯೋಣ. ಕಾಲವನ್ನು ಕದಿಯೋಣ. ನಾವೆಲ್ಲರೂ ಕಾಲದ ಕಳ್ಳರೇ. ಹೀಗೆ ಮಾಡಬಾರದೆಂದು ನಾಣ್ಣುಡಿ. "ಕಾಲ" ವೆಂದರೆ ನಾವು ತಿಳಿದಿರೋದು, ನಿನ್ನೆ, ಇವತ್ತು, ನಾಳೆ ಎಂಬ ರೀತಿಯಲ್ಲಿ. "ನಿನ್ನೆ" "ನಾಳೆ" ಎಂಬುವುವು ಇಲ್ಲವೇ ಇಲ್ಲವಲ್ಲ. ಇಲ್ಲದಿದ್ದನ್ನು ಹೇಗೆ ಕದಿಯೋದು. ಈ ರೀತಿ ಭಾಗಮಾಡುವುದು ಪ್ರಕೃತಿಯ ಗುಣದ ಕೆಲಸ. ವೇದದಲ್ಲಿ ಬರುವ "ಕಾಲ" ನಿರಂತರ ಪ್ರವಾಹ. ಇದೇ ಕಾಲ ನಾಮಕ ಪರಮಾತ್ಮ. ನಾವೆಲ್ಲರೂ ಈ "ಕಾಲ" ನನ್ನು ಕದಿಯುತ್ತೇವೆ. ಕದಿಯೋಣವೆಂದರೆ ಇನ್ನೊಬ್ಬರಿಗೆ ಸೇರಿದ ವಸ್ತುವನ್ನು ಸ್ವಂತವಾಗಿ ಬಳಸುವುದು. ಸ್ವಾತಂತ್ಯ ಕಾಲನಾಮಕ ಪರಮಾತ್ಮನದು. ಜೀವರೆಲ್ಲರೂ ಅಸ್ವತಂತ್ರರು. ಹೀಗಿರುವಾಗ "ನಾನು ಮಾಡಿದೆ, ನನ್ನದು" ಎಂದು ಜೀವರು ಹೇಳಿಕೊಳ್ಳುವುದೇ ಸ್ವಾತಂತ್ರ್ಯದ ಕಳ್ಳತನ. ಇದೇ "ಕಾಲ ಹರಣ". ನಮಗೂ ಕೆಲ ವೇಳೆ ಅನಿಸುತ್ತದೆ "ನಮಗೆ ಸ್ವತಂತ್ರವೆಲ್ಲಿದೆ, ನಾವೇನು ಮಾಡುವುದು" ಎಂದು. ಆದರೆ ಇದು "ಕಳ್ಳನ ಮನಸ್ಸು ಹುಳ್ಳ ಹುಳ್ಳಗೆ" ಎಂಬಂತಾಗಿ ಕಳ್ಳತನ ಅಭ್ಯಾಸದ ಬಲದಿಂದ "ನಾನು ಮಾಡಿದೆ" ಮುಂತಾಗಿ ಹೇಳಿಕೊಳ್ಳುತ್ತೇವೆ. "ಕಾಲ ಕಳೆಯಬೇಡ" ಎಂಬಲ್ಲಿಯೂ ವೇದಾರ್ಥವಿದೆ. ಕಾಲನ್ನ ಹೇಗೆ ಕಳಿಯುವುದು? ಕಳೆಯುವುದರಲ್ಲಿ ಇರುವ ಮುಖ್ಯ ಅಂಶ "ಮರೆವು". "ಕಾಲಕಳೆಯಬೇಡ" ಎಂದರೆ ಪರಮಾತ್ಮನನ್ನು ಮರೆಯಬೇಡ ವೆಂದು. "ಸ್ಮರಿಸು ಸಂತತ ಹರಿಯ" ಎಂಬುದೇ ಮಧ್ವಾಚಾರ್ಯರ ಸಂದೇಶ. ಹೀಗೆಲ್ಲಾ ನಮ್ಮ ಅನುಭವದಲ್ಲಿ ಬರುವ ವಿಷಯಗಳೂ ವೇದದಿಂದಲೇ ತಿಳಿಯ ಬೇಕೆಂದು ತೋರಿಸುವುದು ಮಧ್ವಾಚಾರ್ಯರ ವೈಶಿಷ್ಟ್ಯ. ಅದಲ್ಲದೆ, ತತ್ತ್ವವಿಚಾರ ಅನುಭವದಿಂದ ದೂರವಾಗಬಾರದೆಂದು ಮಧ್ವಾಚಾರ್ಯರು ಸಾರಿ ಸಾರಿ ಹೇಳಿರುವರು. ವೇದದ ಅರ್ಥವನ್ನು ತಿಳಿಯುವಾಗ ಅನುಭವವನ್ನು ಅಲ್ಲಗಳೆಯುವುದು ಶ್ರೇಯಸ್ಕರ ವಲ್ಲ. ಹೀಗೆ ಮಾಡಿರುವುದೇ ಇತರ ಸಿದ್ಧಾಂತಗಳ, ಅದರಲ್ಲಿಯೂ ಅದ್ವೈತ ಸಿದ್ಧಾಂತದ ಮುಖ್ಯ ದೋಷ.

ಶ್ರೀ ಮಧ್ವಾಚಾರ್ಯರು 21 ಭಾಷ್ಯಗಳನ್ನು ದೂಷಿಸಿ 22ನೇದಾದ ಭಾಷ್ಯಬರೆದ ರೆಂದು ಹೇಳಿಕೆ. ಇದರಬಗ್ಗೆ ವಿಚಾರಿಸುವ ಮುನ್ನ ಭಾಷ್ಯ ಎಂದರೇನು? ಎಂಬುದನ್ನು

ತಿಳಿಯುವುದು ಅಗತ್ಯ. ಭಾಷ್ಯವೆಂದರೆ ವೇದವ್ಯಾಸರು ರಚಿಸಿರುವ ಬ್ರಹ್ಮ ಸೂತ್ರಗಳಿಗೆ ವ್ಯಾಖ್ಯಾನ. ಬ್ರಹ್ಮ ಸೂತ್ರಗಳೆಂದರೆ ವೇದಗಳಲ್ಲಿ ಬರುವ ವಿಷಯಗಳನ್ನು ಸರಿಯಾಗಿ ತಿಳಿಯಲು ಮಾಡಿದ ಯುಕ್ತಿಬದ್ಧವಾದ ಮಾರ್ಗ ಸೂಚಕ ನಿಯಮಗಳು. ವೇದಗಳಲ್ಲಿ ಬರುವ ವಿಷಯಗಳು 223. ಇವುಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು 564 ಸೂತ್ರಗಳನ್ನು (Theorems) ವೇದವ್ಯಾಸರು ರಚಿಸಿದ್ದಾರೆ. ಯಾವ, ಯಾವ ಸೂತ್ರಗಳು ವೇದದಲ್ಲಿ ಬರುವ ಯಾವ ವಾಕ್ಯಗಳಿಂದ ವಿಷಯಗಳನ್ನು ತಿಳಿಸುತ್ತೇವೆಂಬುದನ್ನು ಭಾಷ್ಯವು ವಿವರಿಸುತ್ತದೆ. ಪರಂಪರೆಯಿಂದ 21ರೀತಿಯ ಭಾಷ್ಯಗಳಿದ್ದರೂ ಈಗ ಪ್ರಚಾರದಲ್ಲಿರುವುವು ಮೂರೇ. ಶಂಕರಭಾಷ್ಯ, ರಾಮಾನುಜ ಭಾಷ್ಯ, ಮಧ್ವ ಭಾಷ್ಯ, ಶಂಕರಚಾರ್ಯರು ತಮ್ಮ ಪರಮ ಗುರುಗಳಾದ ಗೌಡಪಾದರ ಮಾಂಡೂಕ್ಯೋಪನಿಷತ್ತಿನ ಕಾರಿಕಾ ಎಂಬ ಗ್ರಂಥದಿಂದ ಪ್ರಭಾವಿತರಾಗಿ ಜೀವ-ಬ್ರಹ್ಮರ ಐಕ್ಯ, ಜಗನ್ಮಿಥ್ಯತ್ವ ಮೊದಲಾದ ಕಲ್ಪನೆಯನ್ನು ಮೊದಲೇ ಮಾಡಿಕೊಂಡು ತಮ್ಮ ಭಾಷ್ಯ ಬರೆದರು. ಇದರಿಂದ ಅವರ ಭಾಷ್ಯ ದೋಷಯುಕ್ತವಾಯಿತು. ಅವರ ಜೀವನ ಚರಿತ್ರೆಯಲ್ಲಿ ಹೇಳಿಕೊಂಡಂತೆ ಶಂಕರಾಚಾರ್ಯರು ಕಾಶಿಯಲ್ಲಿ ತಮ್ಮ ಭಾಷ್ಯ ಪ್ರವಚನ ಮಾಡುತ್ತಿದ್ದಾಗ ವೇದವ್ಯಾಸರು ಒಬ್ಬ ವೃದ್ಧ ವೇಷದಿಂದ ಕೇಳುತ್ತಿದ್ದುದನ್ನು ಅವರಿಗೆ ಗೊತ್ತಾಗಿ ಆ ಮುದುಕನನ್ನು ತಮ್ಮ ಭಾಷ್ಯದ ಬಗ್ಗೆ ವಿಚಾರಿಸಿದರು. ಅದು ಸರಿಯಲ್ಲವೆಂದು ವೇದವ್ಯಾಸರು ಹೇಳಿದರೆಂದು ಅದ್ವೈತಿಗಳೇ ಬರೆದುಕೊಂಡಿದ್ದಾರೆ. ಇದನ್ನೇ ಮಧ್ವಾಚಾರ್ಯರು ವಿವರವಾಗಿ ತೋರಿಸಿರುವರು. ರಾಮಾನುಜಚಾರ್ಯರು ಬೋಧಾಯನನ ಭಾಷ್ಯದಿಂದಲೂ ಆಳ್ವಾರರ ತಮಿಳು ಪದ್ಯಗಳಿಂದಲೂ ಪ್ರಭಾವಿತರಾಗಿ ತಮ್ಮ ಭಾಷ್ಯವನ್ನು ಬರೆದರೆಂದು ಶ್ರೀ ವೈಷ್ಣವರೇ ಹೇಳಿಕೊಂಡಿದ್ದಾರೆ, ಬೋಧಾಯನ ಪರಿಣಾಮವಾದಿ ಅಂದರೆ ಬ್ರಹ್ಮನೇ ಜಗತ್ತಾಗಿ ಪರಿಣಮಿಸಿದ್ದಾನೆ ಎಂದು. ಆಳ್ವಾರರ ಪದ್ಯಗಳಲ್ಲಿ ಅಭಿಮಾನಿ ದೇವತೆಗಳಿಗೆ ಸ್ಥಾನವಿಲ್ಲ. ಕೇವಲ ಲಕ್ಷ್ಮೀನಾರಾಯಣರ ಅವತಾರಗಳಲ್ಲಿ ಭಕ್ತಿ, ಮತ್ತು ಪ್ರಪತ್ತಿ ತೋರಿಸುವುದೇ ಈ ಆಳ್ವಾರರ ವಾಕ್ಯಗಳ ಸಾರಾಂಶ. ಈ ಕಾರಣದಿಂದ ರಾಮಾನುಜಾಚಾರ್ಯರ ಭಾಷ್ಯ ತಾವು ಮೊದಲೇ ಮಾಡಿಕೊಂಡ ಕಲ್ಪನೆಯನ್ನೇ ಸಾಧಿಸುವಂತಾಯಿತು. ಮಧ್ವಾಚಾರ್ಯರಾದರೋ ವೇದವ್ಯಾಸರಿಂದಲೇ ಸಾಕ್ಷಾತ್ತಾಗಿ ಸೂತ್ರಗಳ ಅಭಿಪ್ರಾಯವನ್ನು ತಿಳಿದು ತಮ್ಮ ಭಾಷ್ಯವನ್ನು ಅವರ ಅಜ್ಞೆಯಿಂದಲೇ ಬರೆದರು. ಇದೇ ಇವರ ವೈಶಿಷ್ಟ್ಯ. ಈ ಭಾಷ್ಯ ಮಾತ್ರವೇ ದೋಷದೂರ.

ಉದಾಹರಣೆಗೆ ಒಂದು ಸೂತ್ರಕ್ಕೆ ಈ ಮೂವರು ಮಾಡಿರುವ ಭಾಷ್ಯವನ್ನು ತಿಳಿಯೋಣ. ಎರಡನೇ ಸೂತ್ರ ಹೀಗಿದೆ "ಓಂ ಜನ್ಮಾದ್ಯಸ್ಯಯತಃ ಓಂ॥" ಎಂದು.

ಇದು ಮೊದಲನೇ ಸೂತ್ರದಲ್ಲಿ ಬ್ರಹ್ಮನ ಕುರಿತು ವಿಚಾರಮಾಡು ಹೇಳಿದ ಬ್ರಹ್ಮನ ಲಕ್ಷಣ ತೋರಿಸುವ ಈ ಎರಡನೇ ಸೂತ್ರ ಎಂದು ಹೇಳುತ್ತದೆಂದು ಎಲ್ಲಾ ಭಾಷ್ಯಕಾರರೂ ಒಪ್ಪಿದ್ದಾರೆ. ಇದರಲ್ಲಿ ಜನ್ಮ, ಆದಿ, ಅಸ್ಯ, ಯತಃ ಎಂದು ನಾಲ್ಕು ಪದಗಳಿವೆ. ಅಸ್ಯ ಎಂದರೆ ನಮ್ಮ ಅನುಭವದಲ್ಲಿರುವ ಜಗತ್ತಿಗೆ, ಜನ್ಮ ಎಂದರೆ ಸೃಷ್ಟಿ, ಆದಿ ಎಂದರೆ ಮೊದಲಾದದು, ಯತಃ ಎಂದರೆ ಯಾರಿಂದಲೋ ಎಂದರ್ಥ. ಈ ಲಕ್ಷಣವುಳ್ಳವನೇ ಬ್ರಹ್ಮ ಎಂದು ಈ ಸೂತ್ರದ ಅರ್ಥ. "ಲಕ್ಷಣ" ವೆಂದರೆ ಈ ಗುಣಗಳು ಬ್ರಹ್ಮನಲ್ಲಿಯೇ ಇರಬೇಕು. ಬೇರೆ ಯಾರಲ್ಲಿಯೂ ಇರಬಾರದು ಎಂದು. ಈ ಸೂತ್ರದ "ಆದಿ" ಎಂದರೆ ಮೊದಲಾದುದು ಎಂಬ ಪದ ಸ್ಪಷ್ಟವಾಗಿಲ್ಲ. ಶಂಕರಾಚಾರ್ಯರೂ, ರಾಮಾನುಜಾಚಾರ್ಯರೂ "ಆದಿ" ಪದದಿಂದ ಸ್ಥಿತಿ, ಲಯಗಳನ್ನು ತೆಗೆದುಕೊಳ್ಳಬೇಕು ಎಂದು ತಮ್ಮ ಭಾಷ್ಯದಲ್ಲಿ ಬರೆದಿದ್ದಾರೆ. ಶಂಕರಾಚಾರ್ಯರಾದರೋ ಇದು ಸಗುಣ ಬ್ರಹ್ಮನ ಲಕ್ಷಣವೆಂದಿದ್ದಾರೆ. ಅಂದರೆ, ಈ ಬ್ರಹ್ಮ ವ್ಯಾವಹಾರಿಕ ಸತ್ಯ ಮಾತ್ರ. ಆದರೆ ರಾಮಾನುಜಾಚಾರ್ಯರು ಇದು ಪರಬ್ರಹ್ಮನ ಲಕ್ಷಣವೆಂದಿದ್ದಾರೆ, ಇಷ್ಟೇ ಅವರಿಬ್ಬರಿಗೂ ವ್ಯತ್ಯಾಸ. ಮಧ್ವಾಚಾರ್ಯರಾದರೋ "ಆದಿ" ಪದದಿಂದ ಸ್ಥಿತಿ, ಲಯ, ನಿಯಮನ, ಜ್ಞಾನ, ಅಜ್ಞಾನ, ಬಂಧ, ಮೋಕ್ಷ ಎಂದು ಏಳನ್ನು ತೆಗೆದುಕೊಳ್ಳಬೇಕೆಂದು ತಮ್ಮ ಭಾಷ್ಯದಲ್ಲಿ ಬರೆದಿದ್ದಾರೆ. ಬ್ರಹ್ಮ ಸರ್ವದರ, ಸರ್ವ ಅವಸ್ಥೆಗೂ ಸ್ವತಂತ್ರ ಕರ್ತೃ ಎಂದು ವೇದ ಹೇಳುತ್ತದೆ. "ತೇನಾ ವಿನಾ ತೃಣಮಪಿನ ಚಲತೆ" ಎಂದು ವೇದ ವಾಕ್ಯ. ಇತರರ ಭಾಷ್ಯದಂತೆ ಬ್ರಹ್ಮ ಕೇವಲ ಸೃಷ್ಟಿ, ಸ್ಥಿತಿ, ಲಯಗಳಿಗೆ ಮಾತ್ರ ಕಾರಣನಾದರೆ, ನಿಯಮನ, ಜ್ಞಾನ, ಅಜ್ಞಾನ, ಬಂಧ, ಮೋಕ್ಷಗಳೆಂಬ ಅವಸ್ಥೆಗಳಿಗೆ ಬೇರೆ ಒಬ್ಬ ಕರ್ತೃ ಇರಬೇಕು ಅಥವಾ ಈ ಅವಸ್ಥೆಗಳು ಸ್ವತಂತ್ರಗಳಾಗಿರಬೇಕು. ಇದು ವೇದ ವಿರುದ್ಧ. ಸಂಕ್ಷೇಪ ರೀತಿಯಲ್ಲಿ ಇದು ಮಧ್ವಾಚಾರ್ಯರ ಭಾಷ್ಯದ ವೈಶಿಷ್ಟ್ಯ. ಲೌಕಿಕ ಖ್ಯಾತಿಗೆ ಮರುಳಾಗದೆ ಆತ್ಮೋದ್ಧಾರವನ್ನು ನಿಜವಾಗಿ ಬಯಸುವವರಿಗೆ ಇವರೇ ಮಾರ್ಗದರ್ಶಕರು.

ಪ್ರಸ್ಥಾನತ್ರಯವೆನಿಸಿಕೊಂಡ ಉಪನಿಷತ್ತು, ಸೂತ್ರ, ಭಗವದ್ಗೀತೆ, ಇವುಗಳಲ್ಲಿ ಸೂತ್ರದ ಬಗ್ಗೆ ಸ್ವಲ್ಪ ತೋರಿಸಿದ್ದಾಯಿತು. ಉಪನಿಷತ್ತುಗಳಿಗೆ ರಾಮಾನುಜಾಚಾರ್ಯರು ಭಾಷ್ಯ ಬರೆದಿಲ್ಲ. ಶಂಕರಾಚಾರ್ಯರ ಭಾಷ್ಯಕ್ಕೂ ಮಧ್ವಾಚಾರ್ಯರ ಭಾಷ್ಯಕ್ಕೂ ಇರುವ ವ್ಯತ್ಯಾಸವನ್ನು ಈಗಾಗಲೇ ಸ್ವಲ್ಪ ಪರಿಚಯ ಮಾಡಿಕೊಟ್ಟಿದೆ. ಇನ್ನು ಭಗದ್ಗೀತೆಯ ಒಂದು ಶ್ಲೋಕವನ್ನು ತೆಗೆದು ಮೂವರು ಮಾಡಿದ ವ್ಯಾಖ್ಯಾನದ ಬಗ್ಗೆ ಸ್ವಲ್ಪ ಪರಿಚಯ ಮಾಡಿಕೊಳ್ಳೋಣ. ಈಗ ಸಾಮಾನ್ಯವಾಗಿ ಪರಿಚಯವಿರುವ ಶ್ಲೋಕವೊಂದನ್ನು ತೆಗೆದುಕೊಳ್ಳೋಣ. "ವಿದ್ಯಾ ವಿನಯ ಸಂಪನ್ನೇ ಬ್ರಾಹ್ಮಣೇ ಗವಿ

ಹಸ್ತಿನಿ| ಶುನಿಚೈವ ಶ್ವಪಾಕೇಚ ಪಂಡಿತಾ ಸಮ ದರ್ಶಿನಃ|| ಇದಕ್ಕೆ ಶಂಕರಾಚಾರ್ಯರು "ಪಂಡಿತನಾದವನು ವಿದ್ಯೆ, ವಿನಯಗಳಿಂದ ಸಂಪನ್ನನಾದ ಬ್ರಾಹ್ಮಣನನ್ನೂ, ಹಸುವನ್ನೂ, ಆನೆಯನ್ನೂ, ನಾಯಿಯನ್ನೂ, ಚಂಡಾಲನನ್ನೂ ಒಂದೇ ರೀತಿಯಾಗಿ ತಿಳಿಯುತ್ತಾನೆ" ಎಂದು ಅರ್ಥ ಮಾಡಿದ್ದಾರೆ. ಅಂದರೆ ವ್ಯತ್ಯಾಸವಾಗಿ ಕಾಣುವವರು ದಡ್ಡರೇ ಹೊರತು ಪಂಡಿತರಲ್ಲ. ಇದು ಈಗಿನ ವಾತಾವರಣಕ್ಕೆ ಸರಿಯಾಗಿದೆ. ಇದು ಅಪಾರ್ಥವೆಂದು ಮಧ್ವಾಚಾರ್ಯರು ತೋರಿಸಿದ್ದಾರೆ. ಉದಾಹರಣೆಗೆ : ರಾಜರ ಮೆರವಣಿಗೆಗೆ ಪಟ್ಟದ ಆನೆ ಆಟೋಪದಲಿಲ್ಲ ಏನು ಮಾಡಬೇಕೆಂದು ಪಂಡಿತನನ್ನು ವಿಚಾರಿಸಿದರೆ, ಅವನು ನಾಯಿಯ ಮೇಲೆ ಮೆರವಣಿಗೆ ಮಾಡಬಹುದೆಂದು ಗೀತೆಯ ವಾಕ್ಯದ ಆಧಾರದ ಮೇಲೆ ಹೇಳಿದರೆ ಎಷ್ಟು ಅಪದ್ಧವಿರುತ್ತದೆ! ಇದೇ ರೀತಿಯಲ್ಲಿ ಪಿತೃ ಶ್ರಾದ್ಧಕ್ಕೆ ಬ್ರಾಹ್ಮಣ ಸಿಗಲಿಲ್ಲದಿದ್ದರೆ ಚಂಡಾಲನು ಆಗಬಹುದು ಎಂದು ಗೀತೆಯ ವಾಕ್ಯ ಉದಾಹರಿಸಿದರೆ ಎಷ್ಟು ಅಪದ್ಧವೆಂಬುದು ಬೇರೆ ಹೇಳಬೇಕಾಗಿಲ್ಲ. ರಾಮಾನುಜಾಚಾರ್ಯರು ಈ ವಿಷಮ ಪ್ರಾಣಿಗಳಲ್ಲಿರುವ ಜೀವನನ್ನು ನೋಡುತ್ತಾನೆ ಎಂದು ಹೇಳಿದ್ದಾರೆ. ಪಂಡಿತರಿಗೆ ಇತರರ ಜೀವನನ್ನು ನೋಡುವುದರಿಂದ ಪ್ರಯೋಜನವೇನೂ ಇಲ್ಲ. ಮಧ್ವಾಚಾರ್ಯರ ರೀತ್ಯಾ ಪಂಡಿತನೆಂದರೆ ಬ್ರಹ್ಮಜ್ಞಾನಿಯು ಈ ವಿಷಮ ಪ್ರಾಣಿಗಳಲ್ಲಿ ದೋಷದೂರನಾದ ಸಮ ನಾಮಕನಾದ ಬ್ರಹ್ಮನನ್ನು ಕಾಣುತ್ತಾನೆ ಎಂದು ಅರ್ಥ. ಈ ರೀತಿ "ನಿರ್ದೋಷಂಹಿ ಸಮಂ ಬ್ರಹ್ಮ" ನನ್ನು ಕಾಣುವವನು ಜೀವನ್ಮುಕ್ತನೆಂದು ಮುಂದಿನ ಶ್ಲೋಕದಲ್ಲಿ ಶ್ರೀ ಕೃಷ್ಣನೇ ಹೇಳಿದ್ದಾನೆ. ಮಧ್ವಾಚಾರ್ಯರ ವ್ಯಾಖ್ಯಾನ ಶ್ರೀಕೃಷ್ಣನ ವಾಕ್ಯಗಳಿಗೆ ಸರಿಯಾಗಿದೆ. ಈ ರೀತಿಯಲ್ಲಿ ಶ್ರೇಯಸ್ಸಾಧನೆಗೆ ಉಪಯುಕ್ತವಾಗುವ ರೀತಿಯಲ್ಲಿ ಪ್ರಸ್ಥಾನ ತ್ರಯಗಳಿಗೆ ವ್ಯಾಖ್ಯಾನ ಮಾಡಿರುವುದು ಮಧ್ವಾಚಾರ್ಯರ ವೈಶಿಷ್ಟ್ಯ.

ಒಂದು ವಿಷಯ. ದೃಷ್ಟಾಂತಗಳನ್ನು ಕೊಡುವುದರಲ್ಲಿ ಅದ್ವೈತಿಗಳು ಬಹಳ ನಿಪುಣರು. ಜಗತ್ತಿನ ಬಗ್ಗೆ ಹೇಳುವಾಗ ಶುಕ್ತಿ-ರಜತ, ಹಗ್ಗ-ಹಾವು ಮೊದಲಾದುವನ್ನು ಕೊಟ್ಟು ಅವಿದ್ಯೆಯಿಂದ ಜಗತ್ತು ಸತ್ಯವಾಗಿ ತೋರುತ್ತದೆ ಎಂದು ಹೇಳುತ್ತಾರೆ. ಗಂಭೀರವಾದ ಶಬ್ದಗಳನ್ನು ಉಪಯೋಗಿಸುವುದರಲ್ಲಿ ಶ್ರೀ ವೈಷ್ಣವರು ನಿಪುಣರು. ಉದಾಹರಣೆಗೆ : ರಾಮಾನುಜರ ಭಾಷ್ಯ "ಶ್ರೀಭಾಷ್ಯ", ಎಂದು. ಬೇರೆ ಬೇರೆ ಜಾತಿಗೆ ಸೇರಿದ 12 ಮಂದಿ ವಿಷ್ಣು ಭಕ್ತರಿಗೆ ಆಳ್ವಾರರೆಂದು ಹೆಸರು. ಅವರು ಮಾಡಿದ ಭಕ್ತಿ ಸಾಹಿತ್ಯಕ್ಕೆ "ದಿವ್ಯ ಪ್ರಬಂಧ" ಗಳೆಂದು "ದ್ರಾವಿಡ ವೇದ" ವೆಂದೂ ಹೆಸರು. ಇವೇ 4,000 ಸಾವಿರ ಸಂಖ್ಯೆಯಲ್ಲಿರುವ ಭಕ್ತರ ವಚನಗಳು. ಇವನ್ನು ಅಪೌರುಷೇಯವಾದ ವೇದಕ್ಕೆ ಹೋಲಿಸುವುದು ವೇದಕ್ಕೆ ಮಾಡಿದ

ಸಂಪುಟಿಸಿದ. ಬಹುಶಃ ಈ ಪ್ರಬಂಧಗಳಲ್ಲಿ ನಾಯಕ–ನಾಯಕಿ ಭಾವದ ಭಕ್ತಿಯನ್ನು ಆಳ್ವಾರರು ವಿಷ್ಣುವಿನಲ್ಲಿ ಇಟ್ಟಂತೆ ತೋರಿಸುತ್ತದೆ. ಇವುಗಳಲ್ಲಿ ತತ್ತ್ವ ವಿಚಾರಗಳೇನೂ ಇಲ್ಲ. ಇಂತಹ ಭಕ್ತಿ ಭಾವವನ್ನು ತೋರಿಸುವ ಇವುಗಳಿಗಿಂತ ನೂರ್ಪಾಲು ಹೆಚ್ಚು ಕೃತಿಗಳನ್ನು ಪುರಂದರದಾಸರೊಬ್ಬರೇ ರಚಿಸಿದ್ದಾರೆ. ದೇವರ ಪ್ರತಿಮೆಗಳ ಪೂಜೆಯನ್ನು ಮನೆಗಳಲ್ಲಾಗಲಿ, ದೇವಸ್ಥಾನಗಳಲ್ಲಾಗಲಿ ಮಾಡುವುದನ್ನು "ಕೈಂಕರ್ಯ" ಎಂಬ ಗಂಭೀರವಾದ ಶಬ್ದದಿಂದ ಕರೆಯುತ್ತಾರೆ. ಭಕ್ತಿಗೆ "ಶರಣಾಗತಿ" "ಪ್ರಪತ್ತಿ" ಎಂದು ಕರೆಯುವ ವಾಡಿಕೆ. ಆದರೆ ಅದ್ವೈತಿಗಳಲ್ಲಿಯೂ, ಶ್ರೀ ವೈಷ್ಣವರಲ್ಲಿಯೂ ಇರುವ ಸಂಸ್ಕೃತ ಪಾಂಡಿತ್ಯ, ಜ್ಞಾನಕ್ಕೆ ಪ್ರಾಧಾನ್ಯ, ಮಧ್ವರಲ್ಲಿ ಕಂಡು ಬಾರದಿರುವುದು ಶೋಚನೀಯ. ಇದಕ್ಕೆ 2 ಮುಖ್ಯ ಕಾರಣಗಳುಂಟು. 1) ತೀರ್ಥ ಪ್ರಸಾದ ದೊರಕಿದರೆ ಮುಕ್ತಿಯ ಮಾರ್ಗ ದೊರೆಯಿತೆಂಬುವ ತಪ್ಪು ತಿಳುವಳಿಕೆ, 2) ಎರಡನೆಯದಾಗಿ ಜ್ಞಾನವಿಲ್ಲದೆ ಭಕ್ತಿ ಹುಟ್ಟುತ್ತದೆಂಬ ಭಾವನೆ. ಜ್ಞಾನ ಸ್ವರೂಪನಾದ ಪರಮಾತ್ಮ ಮೂಢ ನಂಬಿಕೆಗೆ ಪ್ರಸನ್ನನಾಗಲಾರ ಎಂಬ ಅಂಶವನ್ನು ಮಾಧ್ವರು ಮರೆಯಬಾರದು. ಹೇಗೆ ಇಹ ಲೋಕದಲ್ಲಿ ಜ್ಞಾನವೇ ಜೀವನದ ಸುಖಾನುಭವಕ್ಕೆ ಕಾರಣವೋ ಹಾಗೆಯೇ ಪರಗತಿಗೂ ಜ್ಞಾನವೇ ಕಾರಣ. ಜ್ಞಾನವಿಲ್ಲದೇ ಭಕ್ತಿ ಅಸಂಭವ.

ಈಗ ಮಧ್ವಾಚಾರ್ಯರು ಆಧುನಿಕರಿಗೆ ಹೇಳುವುದೇನೆಂಬುದನ್ನು ಸ್ವಲ್ಪ ವಿಚಾರಿಸೋಣ: ಈಗಿನವರು ಹೇಳುವುದು: Religion is like a glow-worm which requires darkness to rhine on. ಮತ್ತು ಎಂಬುವುದು ಮಿಂಚಿನ ಹುಳದಂತೆ, ಕತ್ತಲಿದ್ದರೇ ಅದರ ಬೆಳಕು. ದೇವರು, ಶಾಸ್ತ್ರ ಮೊದಲಾದವೆಲ್ಲ ಮೂರ್ಖರ ನಂಬಿಕೆ ಮಾತ್ರ. ನಮ್ಮಂತಹ Scientific Minded ಅಂದರೆ ವಿಚಾರಪರರಿಗೆ ಇಂತಹ ನಂಬಿಕೆ ಸರಿಯಲ್ಲ ಎಂಬುದೇ ಆಧುನಿಕರ ವಾದ, ಇಂತಹವರಿಗೆ ಮಧ್ವಾಚಾರ್ಯರ ಉಪದೇಶವೇನು? ಎಂಬುದೇ ಈ ಕಾಲದ ಸಮಸ್ಯೆ ಆಗಿದೆ. ಮಧ್ವಾಚಾರ್ಯರು ಹೇಳುತ್ತಾರೆ: ನಂಬಬೇಡ, ನಂಬಿಕೆ ಬಹಳ ಕೆಟ್ಟದು ವಿಚಾರಮಾಡು, ಎಂದು. ಇದೇ ಶ್ರೀ ವೇದವ್ಯಾಸರ ಬೋಧ ಸಹ, ಎಂದು. ವೇದಗಳ ಅರ್ಥಗಳನ್ನು ಗ್ರಹಿಸುವುದಕ್ಕಾಗಿ ಬ್ರಹ್ಮ ಸೂತ್ರಗಳನ್ನು ಯುಕ್ತಿ ರೂಪದಲ್ಲಿ ವ್ಯಾಸರು ರಚಿಸಿದರು. 564 ಬ್ರಹ್ಮಸೂತ್ರಗಳಲ್ಲಿ ಮೊದಲನೆಯ ಸೂತ್ರ: "ಓಂ ಅಥಾತೋ ಬ್ರಹ್ಮ ಜಿಜ್ಞಾಸಾಓಂ", ಎಂದಿದೆ. ಮುಮುಕ್ಷು ಆದವನು ಬ್ರಹ್ಮನ ಪ್ರಸಾದಕ್ಕಾಗಿ ಅವನ ಬಗ್ಗೆ ವಿಚಾರಮಾಡು ಎಂದು ಇದರ ಅರ್ಥ. ಬರೇ ನಂಬಿಕೆ ಬೇಡ, ವಿಚಾರಮಾಡಿ ತಿಳಿದುಕೊ ಎಂದು ಅವರ ಆದೇಶ. ಇದು

ಅಧುನಿಕರಿಗಾಗಿ ಹೇಳಿದ್ದಲ್ಲ. ಎಲ್ಲಾ ಕಾಲಕ್ಕೂ ಜ್ಞಾನಾಪೇಕ್ಷೆ ಇದ್ದವರಿಗೆ ಮಾಡಿದ ಉಪದೇಶ. "ವಿಚಾರ" ಎಂಬಲ್ಲಿ 6 ಅಂಶಗಳಿವೆ : 1) ವಿಷಯ 2) ಸಂದೇಹ, 3) ಪೂರ್ವಪಕ್ಷ, 4) ಪೂರ್ವಪಕ್ಷ ನಿರಾಕರಣ 5) ಸಿದ್ಧಾಂತ 6) ಪ್ರಯೋಜನ ಅಥವಾ ಫಲ ಉದಾಹರಣೆಗೆ: ದೇವರು ಎಂಬುದು ವಿಷಯ, ಇದ್ದಾನೋ ಇಲ್ಲವೋ ಎಂಬುದು ಸಂದೇಹ. ಇಲ್ಲವೆಂಬುದು ಪೂರ್ವಪಕ್ಷ. ಇದರಲ್ಲಿ ದೋಷವನ್ನು ಕಂಡು ಅದು ತಪ್ಪು ಎಂಬುದೇ ಪೂರ್ವಪಕ್ಷ ನಿರಾಕರಣ. ದೇವರು ಇದ್ದಾನೆ ಎಂಬುದು ಸಿದ್ಧಾಂತ. ಅವನ ಪ್ರಸಾದದಿಂದ ಮುಕ್ತಿ ಎಂಬುದೇ ಫಲ. ಈ ರೀತಿ ವಿಚಾರಮಾಡುವುದು ಅಷ್ಟು ಸುಲಭವಲ್ಲ. ಅನಂತ ಸಂದೇಹ, ಅನಂತರೀತಿಯ ಪೂರ್ವಪಕ್ಷಗಳು. ಇವುಗಳನ್ನು ನಿರಾಕರಿಸಲು ಅನಂತ ಯುಕ್ತಿಗಳ ಪ್ರಯೋಗ. ತರುವಾಯವೇ ಸ್ಥಿರವಾದ ಸಿದ್ಧಾಂತ. ಇದೇ ವೇದದ ಭಾಷೆ. ಇದಕ್ಕೆ ಬೇಕಾಗುವ ಮನೋಕಾಯಗಳ ಶ್ರಮ ಬಹಳ ಕಠಿಣ. ಇದೇ ಮಧ್ವಸಿದ್ಧಾಂತದ ವೈಶಿಷ್ಟ್ಯ. ದ್ವೈತ ವೇದಾಂತವಲ್ಲದ ಎಲ್ಲಾ ಸಿದ್ಧಾಂತಗಳಿಗೂ ಆ ಆ ಮೂಲ ಪುರುಷನಲ್ಲಿರುವ ನಂಬಿಕೆಯೇ ಮೂಲ. ಉದಾಹರಣೆಗೆ ಬುದ್ಧ ಸರ್ವಜ್ಞ ಎಂಬ ನಂಬಿಕೆಯೇ ಬೌದ್ಧ ಸಿದ್ಧಾಂತದ ಮೂಲ. ಇಂತಹವುಗಳು ಎಷ್ಟು ರಮ್ಯವಾಗಿ ಕಂಡರೂ ಬುದ್ಧಿಕುಶಲತೆಯಿಂದ ಇವುಗಳನ್ನು ಎಷ್ಟು ಸುಂದರವಾಗಿ ಸಮರ್ಥಿಸಿದರೂ ಅವು ಕಲ್ಪನೆಯ ಪರಂಪರೆಗಳೇ ಆಗಿವೆ. ಇದನ್ನರಿತೇ ದಾಸರು ಸಾರುತ್ತಾರೆ. "ಮಧ್ವಮತದ ಸಿದ್ಧಾಂತದ ಪದ್ಧತಿ ಬಿಡಬೇಡಿ, ಬಿಟ್ಟು ಕೆಡಬೇಡಿ" ಎಂದು. ಇದರ ಮಹತ್ವವನ್ನು ಎತ್ತಿ ತೋರಿಸಿದುದೇ ಶ್ರೀ ಜಯತೀರ್ಥರ ವೈಶಿಷ್ಟ್ಯ.

ಈಗ ಸಾಧನೆಯ ವಿಷಯ ಸ್ವಲ್ಪ ಹೇಳೋಣ. ಅದ್ವೈತದಲ್ಲಿ ಸಾಧನ ಚತುಷ್ಟಯ ಪೈಕಿ ಸನ್ಯಾಸಕ್ಕೆ ಪ್ರಾಮುಖ್ಯತೆ ಕೊಟ್ಟಿದೆ. ಈ ಕಾರಣದಿಂದಲೇ ಋಷೀಕೇಶ ಮುಂತಾದ ಸ್ಥಳಗಳಲ್ಲಿ ಕಾಣುವ ಸಾವಿರಾರು ಸಾಧುಗಳೆಲ್ಲರೂ ಅದ್ವೈತಿಗಳೇ. ಶಂಕರಾಚಾರ್ಯರು "ಸೋಽಹಂ" ಎಂಬ ಜ್ಞಾನವೇ ಪುರುಷಾರ್ಥವೆಂದು ಕರ್ಮ ದೋಷಯುಕ್ತವೆಂದು ಹೇಳಿದುದೇ ಇದಕ್ಕೆ ಕಾರಣ. ತತ್ತ್ವ ಹೇಗಾದರೂ ಇರಲಿ, ಸಮಾಜ ಜೀವನಕ್ಕೆ ಇದು ಎಷ್ಟು ಹಾನಿಕರವೆಂಬುದು ಈ ಸಾಧುಗಳ ವರ್ತನೆಯಿಂದ ತಿಳಿಯುತ್ತದೆ. It is both a loss of man-power in developmental activity and needless burden of feeding numerous lazy persons.. ರಾಮಾನುಜಾಚಾರ್ಯರ ಸಿದ್ಧಾಂತದಲ್ಲಿ ಸಾಧನ ಚತುಷ್ಟಯ ಹೀಗಿದೆ : ಕರ್ಮ, ಜ್ಞಾನ, ಭಕ್ತಿ. ಪ್ರಪತ್ತಿ. ಇಲ್ಲಿ ವೈರಾಗ್ಯ ಅಥವಾ ಸನ್ಯಾಸಕ್ಕೆ ಸ್ಥಾನವಿಲ್ಲ. ಪ್ರಪತ್ತಿಯನ್ನು ಕೈಂಕರ್ಯ ಎಂಬ ಹೆಸರಿನಲ್ಲಿ ದೇವರ ಪೂಜೆಯೇ ಆಗಿದೆ. ಇದರಿಂದಲೇ ದೇಶದ ಮುಖ್ಯ ದೇವಸ್ಥಾನಗಳಲ್ಲಿ

ಶ್ರೀ ವೈಷ್ಣವರ ಪೂಜೆಯೇ ಆಗಿದೆ. ಇದು ಧನಾರ್ಜನೆಗೆ ಒಂದು ಮಾರ್ಗವೆಂಬುದು ಅನುಭವ ಬರುತ್ತದೆ. ಮಧ್ವಾಚಾರ್ಯರ ರೀತಿ, ಕರ್ಮ, ಜ್ಞಾನ, ಭಕ್ತಿ ಮತ್ತು ವೈರಾಗ್ಯ, ಇವೆಲ್ಲವೂ ಸೇರಿಯೇ ಸಾಧನ ಚತುಷ್ಟಯ. ಆದರೆ ಅನುಭವದಲ್ಲಿ ಜ್ಞಾನಕ್ಕೆ ಪ್ರಾಧಾನ್ಯತೆ ಕಂಡುಬರುವುದಿಲ್ಲ. ವೈರಾಗ್ಯವಂತೂ ಹೆಸರಿಗೆ ಮಾತ್ರ. ಆದರೆ ಸಾಧನೆ ಯಾವುದೂ ಮಾಡದ ನನ್ನಂತಹವರಿಗೆ ಮುಕ್ತಿ ಬೇಕೆಂಬಾಸೆ ಮಾತ್ರ ಇದೆ. ಇದು ಈಡೇರುವುದು ಹೇಗೆ. ನನ್ನಂತಹವರ ಏಳಿಗೆಯನ್ನೂ ಕೋರುವ ಶ್ರೀ ವಾದಿರಾಜರು ಬಹಳ ಸುಂದರವಾಗಿ ಬಯಸಿದ್ದಾರೆ. "ದಶಾವತಾರ ಸ್ತುತಿ" ಎಂಬ ಸ್ತೋತ್ರವನ್ನು ಅಶ್ವಲಾಯನ ಧಾಟಿಯಲ್ಲಿ ರಚಿಸಿದ್ದಾರೆ. ಅರ್ಥವಾಗದಿದ್ದರೂ ಕೇಳುವುದಕ್ಕೆ ಬಹಳ ರಮ್ಯವಾಗಿದೆ, ರಾಮಾವತಾರ ವರ್ಣಿಸುವಾಗ ಜಟಾಯು ಮೋಕ್ಷವನ್ನು ಹೇಳುತ್ತಾ "ರಾಮ, ನೀನು ಹೆಣಗಳನ್ನು ತಿನ್ನುವ ಒಂದು ಹದ್ದಿಗೆ ಮೋಕ್ಷವನ್ನು ಕೊಟ್ಟೆ. ನಾನು, ಅಂತಹ ಹದ್ದಿಗಿಂತಲೂ ಕಡೆಯೇ? ಎಂದು ನಮ್ಮ ಪರವಾಗಿ ಪರಮಾತ್ಮನನ್ನು ಕೇಳುತ್ತಾರೆ. ಈಗಿನ ಕಾಲದ ಹೆಂಗಸರಿಗೆ ತುಳಸಿ ಪೂಜೆ, ಅತಿಥಿ ಸತ್ಕಾರ ಮುಂತಾದುವೆಲ್ಲಾ ಹಳೆಯ ಪದ್ಧತಿಗಳಂತಿವೆ. ಆದರೆ, ಮುಕ್ತಿ ಬೇಕು. ಹೇಗೆ? ಇವರನ್ನೂ ಶ್ರೀ ವಾದಿರಾಜರು ಕೈ ಬಿಟ್ಟಿಲ್ಲ. ಶಬರಿ ಮೋಕ್ಷ ಸಂದರ್ಭದಲ್ಲಿ ಹೇಳುತ್ತಾರೆ, "ಕುಲವೇ, ಗೋತ್ರವೇ, ಮಡಿಯೇ ಮೈಲಿಗೆಯೇ, ಕೊನೆಗೆ ಎಂಜಲು ಮುಸುರೆಯ ಪರಿಚಯವೂ ಇಲ್ಲದ ಒಬ್ಬ ಬೇಡರ ಮುದುಕಿಗೆ ಮೋಕ್ಷ ಕೊಟ್ಟೆ. ನಾನು ಅವಳಿಗಿಂತಲೂ ಕಡೆಯೇ "ಎಂದು ಇದೇ ರಾಮ ನಾಮದ ಮಹಿಮೆ. ಇದರಿಂದಲೇ ದಾಸರು "ರಾಮ ನಾಮ ಭಜಿಸಿದವಗೆ ಉಂಟೇ ಭವದ ಬಂಧನಾ", ಎಂದಿದ್ದಾರೆ.

ಇನ್ನು ನನ್ನ ಬಗ್ಗೆ ಎರಡು ಮಾತು ಹೇಳಿಕೊಂಡರೆ ತಪ್ಪಾಗಲಾರದು. ನಾನು ಒಂದುಸಲ ಒಬ್ಬ ವಿದ್ವಾಂಸರ ಹತ್ತಿರ ಒಂದು ವೇದದ ವಾಕ್ಯದ ಅರ್ಥದಬಗ್ಗೆ ವಿಚಾರಿಸಿದೆ. ಆಗ ಅವರು ನನ್ನನ್ನು "ನಿಮಗೇನಾಗಿದೆ"? ಎಂದು ಕೇಳಿದರು. ಹೀಗೆ ಕೇಳುವ ಅಭ್ಯಾಸ ವಿದ್ವಾಂಸರಲ್ಲಿ ಇರುತ್ತದೆಂದು ನನಗೆ ಗೊತ್ತಿರಲಿಲ್ಲ. ಆದ್ದರಿಂದ ಯೋಚಿಸುತ್ತಾ ನಿಂತೆ. ನನ್ನ ಯೋಗ್ಯತೆಯನ್ನು ಚೆನ್ನಾಗಿ ಬಲ್ಲ ನನ್ನ ಪಕ್ಕದಲ್ಲಿದ್ದ ಸ್ನೇಹಿತ ಹೇಳಿದ : "ಮುಂಜಿ ಆಗಿದೆ, ಮದುವೆ ಆಗಿದೆ, ಮಕ್ಕಳಾಗಿವೆ, ಇನ್ನೇನು

ಆಗಬೇಕು." ಎಂದು. ಇದೇ ನನ್ನ qualification. ನನ್ನಂತಹವರೇ ಬಹಳ ಇರುವುದರಿಂದ ನನ್ನ ಮೇಲಿನ ವಾಕ್ಯಗಳನ್ನು ಆದರದಿಂದ ಕೇಳುತ್ತೀರೆಂದು ನನ್ನ ನಂಬಿಕೆ. ಇದರಲ್ಲಿ ಯಾರನ್ನೂ ನಿಂದಿಸುವ ಉದ್ದೇಶವಿಲ್ಲ. ಕಾರಣ ಅದ್ವೈತಿಗಳಾಗಲಿ, ವಿಶಿಷ್ಟಾದ್ವೈತಿಗಳಾಗಲಿ, ದ್ವೈತಿಗಳಾಗಲಿ, ಆಧುನಿಕರಾಗಲಿ ಕೋಪಿಸಬಾರದು.

ಕಾಯೇನ ವಾಚಾ ಮನಸ್ಸೇಂದ್ರಿಯೈರ್ವಾ ಬುಧ್ಯಾತ್ಮನಾವಾನು ಸೃತ್ಸ್ವ
ಭಾವಾತ್। ಕರೋಮಿ ಯದ್ಯತ್ಸಕಲಂ ನಾರಾಯಣೇತಿ ಸಮರ್ಪಯಾಮಿ.

ವೇದಾಂತ

ಶ್ರೀ ಮಧ್ವಾಚಾರ್ಯರ ಸಿದ್ಧಾಂತದ ಬಗ್ಗೆ ತಿಳಿಯುವ ಮುನ್ನ ವೇದಾಂತದ ಬಗ್ಗೆ ಸ್ವಲ್ಪ ಪರಿಚಯ ಮಾಡಿಕೊಳ್ಳೋಣ. ವೇದಾಂತ ಎಂಬ ಹೆಸರು ಕೇಳಿದಾಗಲೇ ಸಾಮಾನ್ಯರಿಗೆ ಭಯ ಮತ್ತು ಬೇಸರ ಉಂಟಾಗುವುದು ಸಹಜವಾಗಿದೆ. ಇದು ತಿಳಿಯಲಾರದ ವಿಷಯ ಮತ್ತು ಕೆಲಸಕ್ಕೆ ಬಾರದ ಮಾತುಗಳ ಕೋಲಾಹಲವೆಂದು ಸಾಮಾನ್ಯರಲ್ಲಿ ಭಾವನೆ ಬೆಳೆದುಬಂದಿದೆ. ಇದಕ್ಕೆ ವಿದ್ವಾಂಸರೆಂದು ಕರೆಸಿಕೊಳ್ಳುವವರೇ ಕಾರಣ. ಅವರಿಗಿರುವ ಸಂಕುಚಿತ ಸ್ವಭಾವ ಮತ್ತು ಸಂಕುಚಿತ ಜ್ಞಾನವೇ ಇದಕ್ಕೆ ಕಾರಣ. ಸರಿಯಾಗಿ ತಿಳಿದುಕೊಂಡು ಎಲ್ಲರಿಗೂ ಸರಿಯಾಗಿ ತಿಳಿಯುವಂತೆ ಪ್ರಚಾರ ಮಾಡಿದರೆ ವೇದಾಂತ ಎಷ್ಟು ಮುಖ್ಯವಾದ ವಿಷಯ ಮತ್ತು ಇದರ ಜ್ಞಾನ ಇಹದಲ್ಲಿಯೂ ಪರದಲ್ಲಿಯೂ ಸದ್ಗತಿ ಕೊಡುವುದೆಂಬುದು ಮನದಟ್ಟಾಗುತ್ತದೆ. ಕಾರಣ ಇದರ ಕಡೆಗೆ ಸ್ವಲ್ಪ ಗಮನ ಕೊಡೋಣ.

I

ಎಲ್ಲದಕ್ಕೂ "ಕಾರಣ" ಹುಡುಕುವುದು ಮಾನವನ ಲಕ್ಷಣ. ಆದರೆ ಏನಾದರೂ ತೊಂದರೆ ಆದರೆ ಮಾತ್ರ ಸಾಮಾನ್ಯ ಮನುಷ್ಯರು ಕಾರಣ ಹುಡುಕುವುದಕ್ಕೆ ಪ್ರಯತ್ನ ಮಾಡುತ್ತಾರೆ. ಕಾಯಿಲೆಗೆ ಕಾರಣ ಹುಡುಕುವುದು ವೈದ್ಯಕೀಯದಲ್ಲಿ Diagnosis ಎಂದು ಕರೆಯುತ್ತಾರೆ. ಎಲ್ಲರಿಗೂ ಅನುಭವದಲ್ಲಿರುವುದು: ಸುಖ–ದುಃಖ. ಇವೆರಡು ಯಾರನ್ನೂ ಬಿಟ್ಟಿದ್ದಲ್ಲ. ಇವುಗಳಿಗೆ ಕಾರಣ ಹುಡುಕುವ ಪ್ರಯತ್ನದಲ್ಲಿ ಮಾನವನು ತನ್ನ ಸ್ವಂತ ಬುದ್ಧಿ ಸಾಲದೆಂದೂ ಇತರರ ಹೇಳಿಕೆಗಳೂ ಸಾಲದೆಂದೂ ತಿಳಿದು ಕೊನೆಗೆ ವೇದಕ್ಕೆ ಶರಣು ಹೋಗಬೇಕಾಗುತ್ತದೆ. ಇದಕ್ಕೆ ವೇದಾಂತವೆಂದು ಹೆಸರು. ಮೊದಲು ಗಮನಿಸಬೇಕಾದ್ದು, ಶಂಕರಾಚಾರ್ಯರು, ರಾಮಾನುಜಾಚಾರ್ಯರು ಮಧ್ವಾಚಾರ್ಯರು ಇವರೆಲ್ಲರೂ ವೇದದ ಮಹತ್ವವನ್ನು ಎತ್ತಿ ಹಿಡಿದವರು. ಇದರಿಂದ ಎಲ್ಲರೂ ವೇದಾಂತಿಗಳೇ. ವೇದಾಂತವೆಂದರೆ ವೇದದ ತಾತ್ಪರ್ಯ ಅಥವಾ ಸಾರ. ಇವರುಗಳು ಮಾಡಿರುವ ನಿರ್ಣಯಗಳಲ್ಲಿ ಭಿನ್ನಾಭಿಪ್ರಾಯ ಇರುವುದರಿಂದಲೇ ಭಿನ್ನ, ಭಿನ್ನ, ಸಿದ್ಧಾಂತಗಳಾಗಿವೆ. ಮಧ್ವಸಿದ್ಧಾಂತದ ವಿಶಿಷ್ಟತೆಯನ್ನು ತಿಳಿಯಬೇಕಾದರೆ, ಅದ್ವೈತ ಸಿದ್ಧಾಂತದ ಬಗ್ಗೆ ಸ್ವಲ್ಪ ಪರಿಚಯ

ಅವಶ್ಯಕ. ಈ ವೇದಾಂತ ಈ ರೀತಿ ಇದೆ. ಮಾನವರು ಜಗತ್ತಿನಲ್ಲಿ ಅನುಭ ಸುಖ, ದುಃಖಗಳಿಗೆ ಅವಿದ್ಯೆಯೇ ಕಾರಣ. ಅವಿದ್ಯೆ ಎಂದರೇನು ಎಂಬುದನ್ನು ಕಾರ್ಯದಿಂದಲೇ ತಿಳಿಯಬೇಕು. ಅವಿದ್ಯೆ ಅನಿರ್ವಚನೀಯ – indefinable ಲೌಕಿಕ ಉದಾಹರಣೆ ಬೇಕಾದರೆ Electricity ಎನ್ನು ತೆಗೆದುಕೊಳ್ಳಬಹುದು. Elect icity is what is does. Frij ನೊಳಗೆ ತಣ್ಣಗೆ ಮಾಡುತ್ತದೆ, heater ನಲ್ಲಿ ಬಿಸಿಮಾಡುತ್ತದೆ, bulb ನಲ್ಲಿ ಬೆಳಕುಕೊಡುತ್ತದೆ, fan ನಲ್ಲಿ ಗಾಳಿ ಹಾಕುತ್ತದೆ, Radio ನಲ್ಲಿ ಧ್ವನಿ ಕೊಡುತ್ತದೆ. ಇತ್ಯಾದಿ. ಈಗ ಅವಿದ್ಯೆಯ ಕೆಲಸವೆಂದರೆ ಮಾನವರಲ್ಲಿ ದೇಹಾತ್ಮ ಭಾವ ಹುಟ್ಟಿಸುವಿಕೆ. ದೇಹವೇ ಆತ್ಮ ಎಂಬ ಭಾವನೆ ಅವಿದ್ಯೆಯಿಂದ ಉಂಟಾಗುತ್ತದೆ. ಇದರಿಂದ ದೇಹಕ್ಕೆ ಆಗುವ ಹಾನಿ, ವೃದ್ಧಿಗಳನ್ನು ತಮಗಾಯಿತೆಂದು (ಆತ್ಮಕ್ಕೆ ಆಯಿತೆಂದು) ತಿಳಿದು ಮಾನವರು ಸುಖ, ದುಃಖಗಳನ್ನು ಅನುಭವಿಸುತ್ತಾರೆ. ಉದಾಹರಣೆಗೆ, ಕಾಲಿಗೆ ಮುಳ್ಳು ಚುಚ್ಚಿದರೆ ನನಗೆ (ಆತ್ಮಕ್ಕೆ) ಮುಳ್ಳು ಚುಚ್ಚಿತೆಂದು ತಿಳಿದು ದುಃಖಪಡುತ್ತಾನೆ. ನಾನು ಎಂಬುವ ಚೈತನ್ಯ ಕಾಲೇನು? ಅಲ್ಲ. ಕಾಲಿಗೆ ಒಳ್ಳೆಯ ಜೋಡುಗಳನ್ನು ಹಾಕಿಕೊಂಡರೆ "ನಾನು" ಒಳ್ಳೆಯ ಜೋಡನ್ನು ಹಾಕಿದ್ದೇನೆಂದುಕೊಂಡು ಸುಖಪಡುತ್ತಾನೆ. ಕಾಲು ನಾನಲ್ಲ "ನಾನಲ್ಲ" ಎಂಬುದು ಸ್ಪಷ್ಟ. ಹೀಗೆಯೇ ಕೈಗೆ ಏನಾದರೂ ತಗಲಿದರೆ "ನನಗೆ" ಏಟು ಬಿದ್ದಿತೆಂದು ತಿಳಿದು ದುಃಖ ಪಡುತ್ತಾನೆ. ಕೈ "ನಾನಲ್ಲ" ಅದೇ ಕೈಗೆ ಒಳ್ಳೆಯ ಗಡಿಯಾರವನ್ನೊ, ಒಳ್ಳೆಯ ಬಳೆಯನ್ನೋ ಹಾಕಿಕೊಂಡರೆ, "ನಾನು" ಹಾಕಿಕೊಂಡೆನೆಂದು ತಿಳಿದು ಸುಖ ಪಡುತ್ತಾನೆ. ಕೈ ನಾನಲ್ಲ ಎಂಬುದು ಸ್ಪಷ್ಟ, ಇದೇ ರೀತಿ ದೇಹದ ಒಂದೊಂದು ಅವಯವವೂ, ಅಥವಾ ಇಡೀ ದೇಹವು "ನಾನು" ಎಂಬ ಚೈತನ್ಯವಲ್ಲದಿದ್ದರೂ, ಅವಿದ್ಯೆಯಿಂದ ದೇಹವೇ ನಾನು ಅಥವಾ ದೇಹಾತ್ಮ ಭಾವ ಉಂಟಾಗಿ ಸುಖ, ದುಃಖಗಳು ಉಂಟಾಗುತ್ತವೆ. "ನಾನು" ಎಂಬ 'ಆತ್ಮ'ನನ್ನು ತಿಳಿದರೆ ದೇಹಕ್ಕೆ ಆಗುವ ಹಾನಿ, ವೃದ್ಧಿಗಳಿಂದ ಮಾನವ ವಿಕಾರ ಹೊಂದಲು ಕಾರಣವಿಲ್ಲ. ಅವಿದ್ಯೆಯು ಹೋಗಬೇಕಾದರೆ "ನಾನು" ಎಂಬ ಆತ್ಮನ ಜ್ಞಾನಬೇಕು. ಹಾಗಾದರೆ "ನಾನು" ಯಾರು? ಆತ್ಮ ಕಣ್ಣಿಗೆ ಕಾಣಿಸುವುದಿಲ್ಲ, ಕಿವಿಗೆ ಕೇಳಿಸುವುದಿಲ್ಲ, ಮೂಗಿಗೆ ವಾಸನೆ ಬರುವುದಿಲ್ಲ, ನಾಲಗೆಗೆ ರುಚಿಸುವುದಿಲ್ಲ, ಕೈಗಳಿಂದ ಮುಟ್ಟಲಿಕ್ಕೆ ಬರುವುದಿಲ್ಲ. ಹೀಗಿರುವಾಗ ಆತ್ಮನನ್ನು (ನನ್ನನ್ನು); ತಿಳಿಯುವ ಬಗೆ ಹೇಗೆ? ಯಾರಾದರೂ ಬರೆದ ಗ್ರಂಥಗಳಿಂದಲೂ ಇದರ ಪರಿಚಯ ವಾಗುವುದಿಲ್ಲ. ಆತ್ಮನ (ನನ್ನ) ತಿಳುವಳಿಕೆ ಅಪೌರುಷೇಯವಾದ ವೇದದಿಂದಲೇ ಆಗಬೇಕು. ಇದೇ ವೇದಾಂತ, ವೇದದಿಂದ ತಿಳಿಯಬೇಕೆಂದರೆ ವೇದವು ಅನಂತ. "ಅನಂತಾ ವೈವೇದಾಃ" ಎಂದು ವೇದವೇ ತನ್ನ ಬಗ್ಗೆ ಹೇಳಿಕೊಂಡಿದೆ. ಈಗ B.A., M.A., ಓದುವ ಬುದ್ಧಿವಂತ ಹುಡುಗರೇ ತಮಗೆ ನಿಯಮಿತವಾದ

ribed) ಪುಸ್ತಕಗಳನ್ನೇ ಓದಿ ಸರಿಯಾಗಿ ಅರ್ಥಮಾಡಿಕೊಳ್ಳುವುದೇ ...ಗಿರುವಾಗ, ಅನಂತವಾದ ವೇದವನ್ನು ಓದಿ ಆತ್ಮನ ಜ್ಞಾನವನ್ನು ಪಡೆಯುವುದು ಸಾಧ್ಯವೇ. ಇದನ್ನು ತಿಳಿದ ದಯಾಮಯನಾದ ಪಾರ್ವತೀ ಪತಿಯಾದ ಶಂಕರನು ಶಂಕರಾಚಾರ್ಯರಾಗಿ ಅವತರಿಸಿ ಸಕಲವೇದಗಳನ್ನು ಪರಿಶೀಲಿಸಿ ಸಾಮಾನ್ಯರ ಸೌಕರ್ಯಕ್ಕಾಗಿ ಕೆಲವೇ ವಾಕ್ಯಗಗಳನ್ನು ತೆಗೆದು ಅವುಗಳನ್ನು "ಮಹಾವಾಕ್ಯ" ಗಳೆಂದು ಕರೆದು, ಇವುಗಳ ಅರ್ಥವನ್ನು ಶಂಕರಾಚಾರ್ಯರು ಹೇಳಿದ ರೀತಿಯಲ್ಲಿ ತಿಳಿದರೆ, ಆತ್ಮನ ಜ್ಞಾನವಾಗಿ ದೇಹಾತ್ಮಭಾವವೆಂಬ ಅವಿದ್ಯೆಯ ಕಾರ್ಯದಿಂದ ಬಿಡುಗಡೆಯಾಗಿ ಮಾನವನು ಸುಖ, ದುಃಖಗಳಿಂದ ದೂರವಾಗುತ್ತಾನೆ. ಈ ಮಹಾವಾಕ್ಯಗಳನ್ನು ಬಿಟ್ಟು ಬಾಕಿಯುಳ್ಳ ವೇದವಾಕ್ಯಗಳು ಇಂದ್ರಿಯಕ್ಕೆ ಗೋಚರವಾಗುವ ವಿಷಯಗಳನ್ನೇ ಹೇಳುವುದರಿಂದ ಅವು ಆತ್ಮದ ಜ್ಞಾನಕ್ಕೆ ಸಾಧನವಲ್ಲ. ಸಂಕ್ಷೇಪವಾಗಿ ಇದು ಅದ್ವೈತ ವೇದಾಂತ.

ಇದಕ್ಕೆ ಮಧ್ವಾಚಾರ್ಯರ ಉತ್ತರ ಹೇಗಿದೆ ಎಂಬುದನ್ನು ಸ್ವಲ್ಪ ಗಮನಿಸೋಣ. ಮಧ್ವಾಚಾರ್ಯರ ವಾದ ಈ ರೀತಿ ಇದೆ. ಮಾನವನು ಸುಖ-ದುಃಖ ಮಿಶ್ರವಾದ ಸಂಸಾರಕ್ಕೆ ಅವಿದ್ಯೆಯೇ ಕಾರಣ ವೆಂಬುದೇನೋ ನಿಜ. ಅವಿದ್ಯೆಯ ಸ್ವರೂಪವನ್ನು ಅದರ ಕಾರ್ಯದಿಂದಲೇ ತಿಳಿಯಬೇಕೆಂಬುದೂ ನಿಜ. ಅವಿದ್ಯೆಯ ನಿವಾರಣೆಯು ವೇದ ಜ್ಞಾನದಿಂದಲೇ ಸಾಧ್ಯವೆಂಬುದೂ ನಿಜ. ಆದರೆ ಈ ಅವಿದ್ಯೆಯ ಕಾರ್ಯವು ಶಂಕರಾಚಾರ್ಯರು ಹೇಳಿದಂತೆ ದೇಹಾತ್ಮಭಾವ ಮಾತ್ರ ಹುಟ್ಟಿಸುವಷ್ಟು ಹಗುರವಲ್ಲ. ಇಷ್ಟು ಮಾತ್ರವಾಗಿದ್ದರೆ ದೇಹ ಬೇರೆ ಆತ್ಮ ಬೇರೆ ಎಂಬ ಜ್ಞಾನವನ್ನು ಹುಟ್ಟಿಸುವುದಕ್ಕೆ ವೇದದ ಅವಶ್ಯಕತೆಯೇ ಇಲ್ಲ. ಏಕೆಂದರೆ ವೇದಾಧ್ಯಯನದ ಮಾತದಂತಿರಲಿ, ವೇದವೆಂಬ ಹೆಸರನ್ನೇ ಕೇಳದವರಿಗೂ ನನ್ನ ಕೈ, ನನ್ನ ಕಾಲು, ನನ್ನ ದೇಹ, ಸಾಯುವವರನ್ನು ಕಂಡು ದೇಹದಿಂದ ಆತ್ಮ (ಜೀವ) ಹೊರಟು ಹೋದ ಎಂದು ಹೇಳುವಾಗ ದೇಹದಿಂದ ಆತ್ಮ ಬೇರೆ ಎಂದೇ ಅನುಭವ ಬರುತ್ತದೆ. ನನ್ನ ಮನೆ ಎಂದರೆ ನಾನು ಬೇರೆ ಮನೆ ಬೇರೆ ಎಂದು ತಿಳಿದಂತೆ. ದೇಹಕ್ಕೂ, ಜೀವನಿಗೂ ಬಹಳ ನಿಕಟ ಸಂಬಂಧವಿದ್ದುದರಿಂದ ಒಂದೇ ಎಂಬ ವಾಡಿಕೆ ಮಾತ್ರ. ಆದರೂ ಸುಖ, ದುಃಖಗಳನ್ನು ಅನುಭವಿಸುವವನು ಆತ್ಮನೇ, ದೇಹವಲ್ಲ. ಇದು ಎಲ್ಲರಿಗೂ ತಿಳಿದ ವಿಷಯ. ಹಾಗಾದರೆ, ಅವಿದ್ಯೆ ಮಾಡುವ ಕೆಲಸವೇನು? ಈ ಅವಿದ್ಯೆಯ ಮೂಲಕ ಜೀವನು (ಮಾನವನು) ಪರಮಾತ್ಮನನ್ನು(ಬ್ರಹ್ಮನನ್ನು)ಮರೆಯುತ್ತಾನೆ. ಆತ್ಮನಿಗೂ ಪರಮಾತ್ಮನಿಗೂ ಈ ಅವಿದ್ಯೆಯು ನಡುವೆ ಗೋಡೆಯಂತಾಗಿ, ತನ್ನ ಅಂತರ್ಯಾಮಿ ಆದ ಪರಮಾತ್ಮನನ್ನೂ, ಆತ್ಮನಿಗೆ ಪರಮಾತ್ಮನ ಸಂಬಂಧದ ಜ್ಞಾನವನ್ನೂ ಇಲ್ಲದಂತೆ ಮಾಡಿ, ಆತ್ಮನಿಗೆ ಸುಖ ದುಃಖಗಳನ್ನು ಉಂಟುಮಾಡುತ್ತದೆ. ಜೀವ ಪರತಂತ್ರ

ನೆಂಬ ಜ್ಞಾನವನ್ನು ಮರೆಮಾಡುವುದೇ ಅವಿದ್ಯೆಯ ಕೆಲಸ. ಈ ಅವಿದ್ಯೆ
ಪರಮಾತ್ಮನೇ ಇಲ್ಲವೆಂದೂ, ಇದ್ದಿದ್ದರೆ ಈ ರೀತಿಯಲ್ಲಿ ಮಾತ್ರ ಇದ್ದ
ಜೀವನೇ ಸ್ವತಂತ್ರನೆಂದೂ, ನಾನಾ ಪರಿಯ ಭಾವನೆಗಳು ಮಾನವರಲ್ಲಿ ಹುಟ್ಟಿ
ಮಾನವರು ಸುಖ, ದುಃಖಗಳನ್ನು ಅನುಭೋಗಿಸುತ್ತಾರೆ. ಪರಮಾತ್ಮನ ಮಹಾತ್ಮ್ಯ
ಜ್ಞಾನ, ಜೀವನಿಗೆ ಪರಮಾತ್ಮನಿಂದ ಇರುವ ಸಂಬಂಧದ ಬಗ್ಗೆ ತಿಳುವಳಿಕೆ ಉಂಟಾದರೆ
ಸುಖ, ದುಃಖ ಮಿಶ್ರವಾದ ಸಂಸಾರದಿಂದ ಬಿಡುಗಡೆ ಉಂಟಾಗುತ್ತದೆ. ಪರಮಾತ್ಮನು
ಇಂದ್ರಿಯಗಳಿಗೆ ಗೋಚರನಲ್ಲ. ಹಾಗೂ ಯಾವ ಪೌರುಷೇಯ ಗ್ರಂಥವೂ
ಪರಮಾತ್ಮನನ್ನು ತಿಳಿಸಿಕೊಡುವುದಿಲ್ಲ.ಅಪೌರುಷೇಯವಾದ ವೇದದಿಂದಲೇ ಈ ಜ್ಞಾನ
ಸಾಧ್ಯ. "ವೇದೈಕ ಗಮ್ಯ" ಎಂದು ವೇದಾಂತ ಭಾಷೆ. ಇದೇ ವೇದಾಂತ. ವೇದ
ಅನಂತ ಎಂಬುದೂ ನಿಜ. ಆದರೆ ಎಲ್ಲಾ ವೇದಗಳನ್ನು ತಿಳಿಯಬೇಕೆಂಬುದು
ಸಾಧ್ಯವಲ್ಲ ಎಂದು ಮಾತ್ರವಲ್ಲ, ಅಂತಹ ಪ್ರಯತ್ನ ಹಿತಕರವೂ ಅಲ್ಲ. ಸಮಾ
ರಾಧನೆಗೆ ಮಾಡಿದ ಅಡಿಗೆಯನ್ನೆಲ್ಲಾ ಒಬ್ಬನೇ ತಿನ್ನುವುದು ಸಾಧ್ಯವಮಾತ್ರವಲ್ಲ,
ಅಂತಹ ಪ್ರಯತ್ನ ಹಿತಕರವೂ ಅಲ್ಲ. ತನ್ನ ಯೋಗ್ಯತೆಗೆ ತಕ್ಕಷ್ಟು ತಿನ್ನುವುದೇ
ಹಿತಕರ. ಹಾಗಾದರೆ ವೇದದ ಕೆಲವು ವಾಕ್ಯಗಳಿಂದಲೇ ಪರಮಾತ್ಮನ ಜ್ಞಾನವಾಗು
ತ್ತದೋ ಎಂದರೆ, ಆಗುತ್ತದೆ ಎಂದು ಉತ್ತರ. ಏಕೆಂದರೆ : "ಸರ್ವೇ ವೇದಾಯತ್ಪದ
ಮಾಮನಂತಿ" ಎಂದು ವೇದವೇ ಹೇಳುತ್ತದೆ. ವೇದದ ಎಲ್ಲಾ ಭಾಗಗಳೂ ಪರ
ಮಾತ್ಮನ ಮಹಿಮೆಯನ್ನೇ ಹೇಳುತ್ತದೆಂದು ವೇದವೇ ಹೇಳುತ್ತದೆ. ಎಂದರೆ ವೇದ
ದಲ್ಲಿ ಬರುವ ಎಲ್ಲಾ ಮಂತ್ರಗಳು, ಪುರುಷ ಸೂಕ್ತ ಮುಂತಾದ ಸೂಕ್ತಗಳು,
"ತತ್ವಮಸಿ", "ಅಹಂ ಬ್ರಹ್ಮಾಸ್ಮಿ" ಮುಂತಾದ ಎಲ್ಲಾ ವಾಕ್ಯಗಳು, ಅ, ಓಂ
ಮುಂತಾದ ಎಲ್ಲಾ ವರ್ಣಗಳು, ಪರಮಾತ್ಮ ಸರ್ವದರ ಸರ್ವಾವಸ್ಥೆಯ ಸ್ವತಂತ್ರ
ಕರ್ತನೆಂದು ಹೇಳುತ್ತವೆ ಎಂಬುದು ಇದರ ಅರ್ಥ. ಆದುದರಿಂದ ಅವರವರ
ಯೋಗ್ಯತೆಗೆ ತಕ್ಕಂತೆ, "ಓಂ" ಎಂಬ ಒಂದು ಅಕ್ಷರವೋ, "ರಾಮ" ಎಂಬ ಎರಡು
ಅಕ್ಷರವೋ, "ಓಂ ನಮೋ ನಾರಾಯಣ" ಎಂಬ ಎಂಟು ಅಕ್ಷರಗಳನ್ನೋ ಗಾಯಿತ್ರಿ
ಮಂತ್ರವನ್ನೋ ತೆಗೆದುಕೊಂಡು ಅವುಗಳಿಂದ ಸೂಚಿತವಾದ ಪರಮಾತ್ಮನ ಮಹಿಮೆ
ಯನ್ನು ತಿಳಿದುಕೊಂಡು ಜಪಮಾಡಿದರೆ ಪರಮಾತ್ಮನ ಜ್ಞಾನ ಸ್ಥಿರವಾಗಿ ಅವಿದ್ಯೆ
ಯಿಂದ ದೂರಾಗುವುದು ಸಾಧ್ಯ. ಇದರಿಂದ ಜೀವನ ಸ್ವರೂಪದ ಜ್ಞಾನವಾಗುತ್ತದೆ.
"ಬಿಂಬಂ ಬಿಂಬಂ ಪ್ರತಿಬಿಂಬೋ ಬಭೂವ" ಎಂದು ಜೀವನು ಬ್ರಹ್ಮನ ಪ್ರತಿಬಿಂಬ
ನೆಂದು ಹೇಳುತ್ತದೆ. ಜೀವ ಪರಮಾತ್ಮನ ಪ್ರತಿಬಿಂಬನಾಗಲು ಅವಿದ್ಯೆಯಾಗಲೀ,
ಬೇರೆ ಯಾವ ಉಪಾಧಿಯಾಗಲಿ ಬೇಕಾಗಿಲ್ಲ, ಜೀವನೇ ಉಪಾಧಿಯೂ, ಪ್ರತಿ
ಬಿಂಬನೂ ಆಗಿದ್ದಾನೆ. "ಪ್ರತಿಬಿಂಬ" ನೆಂಬಪದವು ಜೀವನು ಸರ್ವಥಾ ಅಸ್ವತಂತ್ರ
ನೆಂಬುದನ್ನು ತೋರಿಸುತ್ತದೆ. ಈ ರೀತಿ ಜ್ಞಾನವು ವೇದದಿಂದ ಯಾವಾಗ ಹುಟ್ಟು

[illegible]ಗೆ ಪರಮಾತ್ಮನಲ್ಲಿ ಭಕ್ತಿ ಹುಟ್ಟಿ, ಅವನ ಅನುಗ್ರಹ ದ್ವಾರಾ ಸುಖ [illegible]ನಾದ ಸಂಸಾರದಿಂದ ಬಿಡುಗಡೆ ಹೊಂದುತ್ತಾನೆ. ಇದಕ್ಕೇ ಮುಕ್ತಿ ಎಂದು ಹೆಸರು. ಹೀಗೆ ತೋರಿಸಿದುದೇ ಮಧ್ವಾಚಾರ್ಯರ ವೈಶಿಷ್ಟ್ಯ. ವೇದದ ಎಲ್ಲಾ ಭಾಗಗಳೂ ಬ್ರಹ್ಮನ (ಪರಮಾತ್ಮನ) ಮಹಿಮೆಯನ್ನೇ ಹೇಳುವಾಗ ಕೆಲವು ವಾಕ್ಯಗಳು ಮಾತ್ರ ಆತ್ಮ (ಬ್ರಹ್ಮ) ನನ್ನೂ ತಿಳಿಸುತ್ತವೆಂದು ಹೇಳಿ ಅವುಗಳನ್ನು ಮಹಾವಾಕ್ಯಗಳೆಂದು ಕರೆಯುವುದು ಸರಿಯಲ್ಲ. ಇದು ಹೇಗಿದೆ ಎಂದರೆ ನನ್ನ ಎಲೆಯಲ್ಲಿ ಹಾಕಿದ ಸೌಟು ಪಾಯಸ ಮಾತ್ರ ಸಿಹಿ ಆಗಿದೆ. ಬಾಕಿ ಉಳಿದ ಪಾಯಸವೆಲ್ಲ ಖಾರವಾಗಿದೆ ಎಂದು ಹೇಳಿದ ಹಾಗೆ ಆಗುತ್ತದೆ. ಇದು ಜ್ಞಾನದ ಮಾತಲ್ಲವೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಮಹಾಕಾವ್ಯಗಳ ಕಲ್ಪನೆ ವೇದ ಪ್ರಾಮಾಣ್ಯದ ತಿರಸ್ಕಾರದ ಮಾತು. ಒಂದು ವೇಳೆ ಶಂಕರಾಚಾರ್ಯರು ಪಾರ್ವತೀಪತಿಯಾದ ಶಿವನ ಅವತಾರರಾಗಿದ್ದಾರೆ ಈ ರೀತಿ ವೇದದಲ್ಲಿ ಭಾಗ ಮಾಡುತ್ತಿರಲಿಲ್ಲ. ಏಕೆಂದರೆ, ರುದ್ರ ದೇವರು ಮಹಾಜ್ಞಾನಿಗಳು. ಅವರಿಗೆ ವೇದ ವಾಕ್ಯಗಳ ಮಹತ್ವ ಚೆನ್ನಾಗಿ ಗೊತ್ತು.

ಇನ್ನು ಶಂಕರಾಚಾರ್ಯರು ಹೇಳುವ ಪಾರಮಾರ್ಥಿಕ ಸತ್ಯ, ವ್ಯಾವಹಾರಿಕ ಸತ್ಯದ ಬಗ್ಗೆ ಸ್ವಲ್ಪ ಗಮನಕೊಡೋಣ. ವೇದಾಂತದ ಭಾಷೆಯಲ್ಲಿ "ಸತ್ಯ" ಎಂದರೆ "ಇರುವಿಕೆ" ಎಂದು ಅರ್ಥ. ಇದು ಸತ್ಯವೆಂದರೆ ಇದು ಇದೆ ಎಂದೇ ಅರ್ಥ. ಈ ಅರ್ಥವು ಎಲ್ಲಾ ಆಚಾರ್ಯರಿಗೂ ಸಮ್ಮತ. ಈಗ ಶಂಕರಾಚಾರ್ಯರು "ಸತ್ಯ"--ಇರುವಿಕೆ" ಬಗ್ಗೆ ಏನು ಹೇಳುತ್ತಾರೋ ನೋಡೋಣ. ಅದು ಈ ರೀತಿ: ಜಗತ್ತಿನಲ್ಲಿ ನಾವು ಎರಡು ಬಗೆಯ ಇರುವಿಕೆಯನ್ನು ಕಾಣುತ್ತೇವೆ. ಒಂದು ಬಗೆಯ ಇರುವಿಕೆಯನ್ನು ಪ್ರತ್ಯಕ್ಷ, (ಇಂದ್ರಿಯಗಳಿಂದ) ಮತ್ತು ಅನುಮಾನ (ಯುಕ್ತಿ) ದಿಂದ ತಿಳಿಯಬಹುದು. ಇದು ದೇಹ, ಮತ್ತು ಇತರ ಜಡಪದಾರ್ಥಗಳು. ಇನ್ನೊಂದರ ಇರುವಿಕೆಯನ್ನು ವೇದದಿಂದಲೇ ತಿಳಿಯಲು ಸಾಧ್ಯ. ಈ ಎರಡು ಇರುವಿಕೆಗಳು (ಸತ್ಯಗಳು) ಒಂದೇ ಮಟ್ಟದವುಗಳಾಗಲಾರವು. ಇಂದ್ರಿಯಕ್ಕೆ ಗೋಚರವಾಗುವ ವಸ್ತುಗಳು ಅನಿತ್ಯ ಮತ್ತು ವಿಕಾರವುಳ್ಳವುಗಳೆಂಬುದು ಅನುಭವ ಸಿದ್ಧ. ವೇದ ಹೇಳುವಂತೆ ಆತ್ಮ ನಿರ್ವಿಕಾರಿ ಮತ್ತು ನಿತ್ಯ. ಮೊದಲನೆಯದನ್ನು ವ್ಯಾವಹಾರಿಕ ಸತ್ಯವೆಂದೂ, ಎರಡನೆಯದು ಪಾರಮಾರ್ಥಿಕ ಸತ್ಯವೆಂದೂ ಕರೆಯುವುದು ಇರುವಿಕೆಯ ಗ್ರಹಣಗೆ ಸೌಕರ್ಯ. ಜಗತ್ತು ಇಂದ್ರಿಯಗಳಿಗೆ ಗೋಚರವಾಗುವುದರಿಂದ ಅದು ವ್ಯಾವಹಾರಿಕ ಸತ್ಯ. ವೇದವು ಆತ್ಮ ಮತ್ತು ಬ್ರಹ್ಮ ಶಬ್ದಗಳನ್ನು ಸಮಾನಾರ್ಥದಲ್ಲಿ, ಅಂದರೆ ಪರ್ಯಾಯ ಪದಗಳಾಗಿ, ಉಪಯೋಗಿಸುವುದರಿಂದ ಬ್ರಹ್ಮ ಪಾರಮಾರ್ಥಿಕ ಸತ್ಯವೆಂದು ಕರೆಯಬಹುದು. ಶಂಕರಾಚಾರ್ಯರ ರೀತ್ಯಾ

ಬ್ರಹ್ಮ ಪಾರಮಾರ್ಥಿಕ ಸತ್ಯ, ಜಗತ್ತು ವ್ಯಾವಹಾರಿಕ ಸತ್ಯ. "
ಪದವನ್ನು ಮಾತ್ರ ಪಾರಮಾರ್ಥಿಕ ಎಂಬುದನ್ನು ಬಿಟ್ಟು, ಬ್ರಹ್ಮ
ಉಪಯೋಗಿಸುವಾಗ ಜಗತ್ತಿನ ಇರುವಿಕೆಯನ್ನು ಮಿಥ್ಯೆ ಎಂದು ಕರೆಯಲಾಗುವುದು. ಅಂದರೆ, ಯಾವುದು ಇಂದ್ರಿಯಗಳಿಗೆ ಗೋಚರಿಸುವುದೋ ಅದು ವ್ಯಾವಹಾರಿಕ ಸತ್ಯ ಅಥವಾ ಮಿಥ್ಯೆ. ಯಾವುದು ಅತೀಂದ್ರಿಯವೋ, ವೇದದಿಂದಲೇ ತಿಳಿಯಲು ಸಾಧ್ಯವೋ ಅದು ಪಾರಮಾರ್ಥಿಕ ಸತ್ಯ ಅಥವಾ ಸತ್ಯ. ಇದನ್ನೇ ಸಂಕ್ಷೇಪವಾಗಿ "ಬ್ರಹ್ಮ ಸತ್ಯಂ ಜಗನ್ಮಿಥ್ಯ" ಎಂದು ಕರೆದಿದ್ದಾರೆ. ಇದನ್ನೇ ಯುಕ್ತಿಯಿಂದ ಸಾಧಿಸುವಾಗ "ಜಗನ್ಮಿಥ್ಯ ದೃಶ್ಯತ್ವಾತ್", ಎಂದಾಗುತ್ತದೆ. ಇಂದ್ರಿಯ ಗೋಚರವಾಗಿರುವುದರಿಂದ ಜಗತ್ತು ಮಿಥ್ಯೆ ಅಥವಾ ವ್ಯಾವಹಾರಿಕ ಸತ್ಯ ಎಂದು ಇದರ ಅರ್ಥ. ಇಂದ್ರಿಯಗಳಿಗೆ ಗೋಚರವಾದದ್ದೆಲ್ಲ ಅನಿತ್ಯ ಮತ್ತು ವಿಕಾರ ಹೊಂದುವುವು ಎಂದು ಇದರ ಅಭಿಪ್ರಾಯ.

ಈಗ ಇದಕ್ಕೆ ಮಧ್ವಾಚಾರ್ಯರ ಉತ್ತರ ಹೇಗಿದೆ ಎಂಬುದನ್ನು ನೋಡೋಣ. "ಸತ" ಎಂದರೆ "ಇರುವಿಕೆ" ಎಂಬುದು ನಿಜ. ಈ ಸತ್ಯ ಎರಡು ಪ್ರಕಾರ ಎಂಬುದೂ ನಿಜ. ಆದರೆ ಅದು ಶಂಕರಾಚಾರ್ಯರು ಹೇಳಿದ ರೀತಿಯ ವಿಭಾಗವಲ್ಲ. ಒಂದು ಸ್ವತಂತ್ರ ಸತ್ಯ, ಇನ್ನೊಂದು ಅಸ್ವತಂತ್ರ ಸತ್ಯ. ಬ್ರಹ್ಮನೊಬ್ಬನೇ ಸ್ವತಂತ್ರ ಸತ್ಯ, ಜಗತ್ತು ಅಸ್ವತಂತ್ರ ಸತ್ಯ. ಇದನ್ನು ಪರತಂತ್ರ ಎಂದು ಕರೆದಿರುತ್ತಾರೆ. "ಸ್ವತಂತ್ರಂ ಅಸ್ವತಂತ್ರಂಚ ದ್ವಿವಿಧಂ ತತ್ತ್ವ ತತ್ತ್ವಮಿಷ್ಯತೇ" (ತತ್ತ್ವವು ಸ್ವತಂತ್ರ ಮತ್ತು ಅಸ್ವತಂತ್ರ ಎಂದು ಎರಡು ವಿಧ ಎಂಬುದು ಪ್ರಾಮಾಣಿಕರಿಂದ ಅಪೇಕ್ಷಿತ) ಎಂಬುದು ಮಧ್ವಾಚಾರ್ಯರ ವಾಕ್ಯ. "ಸ್ವತಂತ್ರೋ ಭಗವಾನ್ ವಿಷ್ಣುಃ" ಎಂದು ವಿಷ್ಣುವೇ ಬ್ರಹ್ಮ ಶಬ್ದ ವಾಚ್ಯನು ಎಂದು ಮಧ್ವಾಚಾರ್ಯರು ಸ್ಪಷ್ಟ ಪಡಿಸಿ, ವಿಷ್ಣುವನ್ನು ಬಿಟ್ಟು ಎಲ್ಲಾ ಚೇತನ, ಅಚೇತನ ತತ್ತ್ವಗಳು ಅಸ್ವತಂತ್ರರು ಎಂದು ಹೇಳಿದ್ದಾರೆ. ಅಂದರೆ ಅವುಗಳ ಇರುವಿಕೆ (ಸತ್ಯ) ವಿಷ್ಣುವಿನ ಅಧೀನ. ಆತ್ಮ, ಬ್ರಹ್ಮ ಶಬ್ದಗಳು ವೇದದಲ್ಲಿ ಜೀವನ ಪರವಾಗಿಯೂ ಪರಮಾತ್ಮನ ಪರವಾಗಿಯೂ ಉಪಯೋಗಿಸಿರುವುದುಂಟು, ಆದರೆ, "ಆತ್ಮ" ಎಂದು ಜೀವ ಪರವಾಗಿ ಹೇಳುವಾಗ ಬ್ರಹ್ಮನನ್ನು "ಪರಮಾತ್ಮ" ನೆಂದು ಕರೆಯಲಾಗಿದೆ. ಹೀಗೆಯೇ ಜೀವ ಬ್ರಹ್ಮ, ಪರಮಾತ್ಮ "ಪರಬ್ರಹ್ಮ". ವೇದದಲ್ಲಿ ಆತ್ಮ, ಬ್ರಹ್ಮ ಶಬ್ದಗಳನ್ನು ಭಿನ್ನಾರ್ಥದಲ್ಲಿ ಉಪಯೋಗಿಸಿರುವುದು ಅದರ ಗಹನತೆಯನ್ನು ತೋರಿಸುವುದಕ್ಕಾಗಿ. ಮತ್ತು ವೇದದ ಜ್ಞಾನ ಅಷ್ಟು ಸುಲಭವಲ್ಲವೆಂದು ತೋರಿಸುವುದಕ್ಕಾಗಿ. ಜೀವನ ಸತ್ಯತ್ವ ಬ್ರಹ್ಮನಿಂದ ಕೊಟ್ಟದ್ದು. ಇದನ್ನೇ ವೇದವು "ಸತ್ಯಸ್ಯ ಸತ್ಯಂ" ಎಂದು ಬ್ರಹ್ಮನ ಮಹಿಮೆಯನ್ನು ಹೇಳುತ್ತದೆ. ಆ ಸ್ವತಂತ್ರ ಸತ್ಯದಲ್ಲಿ ಎರಡು ವಿಧ. ಚೇತನ, ಅಥವಾ

iii) ಜಡ. ಇಂದ್ರಿಯ ಗೋಚರವಾದುವು ವಿಕಾರ ಹೊಂದತಕ್ಕವುಗಳು. ಗಳು ನಿತ್ಯವಾದವು ನಿರ್ವಿಕಾರ. ಇದರಲ್ಲಿ ಜೀವ, ಮೂಲ ಪ್ರಕೃತಿ, ಕಾಲ ಬ್ರಹ್ಮ ಮುಂತಾದ ತತ್ತ್ವಗಳು ಸೇರಿರುತ್ತವೆ.

ಈ ಕಾರಣದಿಂದ ಜಗನ್ಮಿಥ್ಯತ್ವ ವಾದವು "ಸತ್ಯಸ್ಯ ಸತ್ಯಂ" ಎಂದು ಬ್ರಹ್ಮನ ಮಹಿಮೆಯನ್ನು ಹೇಳುವ ಶ್ರುತಿವಾಕ್ಯಕ್ಕೆ ವಿರುದ್ಧವಾಗುತ್ತದೆ. "ಜಗತ್ತು" ಎಂಬಲ್ಲಿ ನಾನಾಯೋಗ್ಯತೆಯುಳ್ಳ ಅತೀಂದ್ರಿಯವಾದ ಚೇತನ ರಾಶಿಗಳೂ, ಅವರ ಅನುಭವಕ್ಕೆ ಬರುವ ಇಂದ್ರಿಯಗಳಿಗೆ ಗೋಚರಿಸುವ ನಾನಾ ಜಡ ಪದಾರ್ಥಗಳೂ, ನಾನಾ ತತ್ತ್ವಗಳಿಗೆ ಅತೀಂದ್ರಿಯಗಳಾದ ಅಭಿಮಾನಿ ದೇವತೆಗಳೂ, ಇವುಗಳೆಲ್ಲವನ್ನು ನಿಯಮಿಸುವ ಪರಮ ಚೇತನನಾದ ಬ್ರಹ್ಮನೂ ಸೇರಿದ್ದಾರೆ. ಇದರಿಂದ ಜಗತ್ತು ಮಿಥ್ಯೆ ಎಂದರೆ ಇವೆಲ್ಲವನ್ನೂ ಅಲ್ಲಗಳೆದಂತಾಗಿ ಸಾಧನೆಗೆ ಅವಕಾಶವೇ ಇಲ್ಲದಂತಾಗುತ್ತದೆ. ಜಗತ್ತಿನಲ್ಲಿ ಕೆಲವು ಭಾಗ ಹುಟ್ಟಿಗೆ ವಿಕಾರ ಅಥವಾ ನಾಶ ಹೊಂದುತ್ತದೆಂದು ಹೇಳಬಹುದು. ಇದರಿಂದ ಇಡೀ "ಜಗತ್ತು ಮಿಥ್ಯೆ" ಎಂದರೆ ಅತಿವ್ಯಾಪ್ತಿ ದೋಷ ಬರುತ್ತದೆ. ಜಗತ್ತು ಸತ್ಯ ಎಂದರೆ ಅದು ಅಸ್ವತಂತ್ರವಾದ ಸತ್ಯ (ಇರುವಿಕೆ) ಉಳ್ಳದ್ದು ಎಂದು ಮಧ್ವಾಚಾರ್ಯರ ವಾದ. "ತೇನ ವಿನಾ ತೃಣಮಪಿ ನ ಚಲತಿ" ಎಂದು ಬ್ರಹ್ಮನ ಅಚಿಂತ್ಯವಾದ ಸ್ವತಂತ್ರ ಕರ್ತೃತ್ವವನ್ನು ವೇದ ಹೇಳುತ್ತದೆ. "ಬಿಂಬ" ರೂಪನಾಗಿ ಜೀವನವನ್ನು ಸದಾ ರಕ್ಷಿಸುವುದರಿಂದ ಜೀವ ನಿತ್ಯ, ನಿರ್ವಿಕಾರ. ಇದರಿಂದ ಜೀವನನ್ನು ಮಿಥ್ಯೆ ಅಥವಾ ವ್ಯಾವಹಾರಿಕ ಸತ್ಯ ಎಂದು ಕರೆಯುವುದು ತಪ್ಪು. ಪಾರಮಾರ್ಥಿಕ ಸತ್ಯ, ವ್ಯಾವಹಾರಿಕ ಸತ್ಯವೆಂಬ ವಿಭಾಗವೇ ಸರಿಯಲ್ಲ. ಜಗತ್ತೆಲ್ಲವೂ ಬ್ರಹ್ಮನ ವಿಚಿತ್ರವಾದ ಮಹಿಮೆಯನ್ನೇ ತೋರಿಸುತ್ತದೆ. ಇದನ್ನೇ ಬ್ರಹ್ಮ ಸ್ವತಂತ್ರ, ಅಸಹಾಯಕರ್ತೃ, ಪೂರ್ಣ ಎಂಬ ರೀತಿಯಲ್ಲಿ ವೇದ ಹೇಳುತ್ತದೆ. ಜಗತ್ಸೃಷ್ಟಿಗೆ ಬ್ರಹ್ಮನಿಗೆ ಚೇತನ, ಅಚೇತನ ತತ್ತ್ವಗಳ ಸಹಾಯ ಬೇಕಿದ್ದರೆ ಅವನು ಪೂರ್ಣನಲ್ಲ. ಆದ್ದರಿಂದ ರಾಮಾನುಜಾಚಾರ್ಯರು ಹೇಳುವ ಚೇತನ, ಅಚೇತನರಿಂದ ವಿಶಿಷ್ಟನಾದ ಬ್ರಹ್ಮನೂ ಪೂರ್ಣನಲ್ಲ. ಇದು ಒಂದು ರೀತಿಯ ಬ್ರಹ್ಮನ ನಿರಾಕರಣೆಯೇ ಆಗಿದೆ. ಆದ್ದರಿಂದ ಮಧ್ವಾಚಾರ್ಯರು ತೋರಿಸಿರುವ ರೀತಿಯಲ್ಲಿ ಮಾತ್ರ ಬ್ರಹ್ಮ ಪೂರ್ಣ. ಅವರ ಸಿದ್ಧಾಂತವೆಲ್ಲಾ ಈ ಪೂರ್ಣ ಬ್ರಹ್ಮನ ಮಹಿಮೆಯನ್ನೇ ತೋರಿಸುವುದಾಗಿದೆ. ಇದರಿಂದ ಅವರ ವಾದವನ್ನು ಬ್ರಹ್ಮವಾದವೆಂದೂ ಬಾಕಿ ಎಲ್ಲಾ ವಾದಗಳು ಮಾಯಾವಾದಗಳೆಂದೂ ಕರೆಯುವ ಪದ್ಧತಿ. ಇದೇ ಮಧ್ವಾಚಾರ್ಯರ ವೈಶಿಷ್ಟ್ಯ. ಮಧ್ವಾಚಾರ್ಯರ ರೀತ್ಯಾ ಬ್ರಹ್ಮವಾದವೆಂದರೆ ಬ್ರಹ್ಮನ ಗುಣ ಪೂರ್ಣತ್ವವನ್ನು ಎಲ್ಲಾ ರೀತಿಯಿಂದಲೂ ಸಮರ್ಥಿಸುವುದು. ಇದೇ "ಹರಿ ಸರ್ವೋತ್ತಮ" ಎಂಬುದರ

ಅರ್ಥ. ಮಾಯಾವಾದ ವೆಂದರೆ ಬ್ರಹ್ಮನ ಗುಣ ಪೂರ್ಣತ್ವಕ್ಕೆ ಯ
ಲಾದರೂ ಭಂಗ ತರುವುದು. ಈ ಅರ್ಥದಲ್ಲಿ ಇತರ ಎಲ್ಲಾ ಸಿದ್ಧಾಂ
ವಳ್ಳುವುಗಳು. ಬ್ರಹ್ಮ ಗುಣಪೂರ್ಣನಾಗದಿದ್ದರೆ ಸ್ವತಂತ್ರನಲ್ಲ. ಸ್ವತಂತ್ರನಲ್ಲದ
ಬ್ರಹ್ಮನೇ ಅಲ್ಲ.

ಇಲ್ಲಿ ನಾವು ಗಮನಿಸಬೇಕಾದ ವಿಷಯ ಇದು. ವೇದದಲ್ಲಿ ಕೆಲವು ವಾಕ್ಯಗಳು ಶಂಕರಾಚಾರ್ಯರು ತಪ್ಪು ಕಲ್ಪಿಸಿದ ಸಿದ್ಧಾಂತಕ್ಕೆ ಅನುಕೂಲಿಸುವ ಅರ್ಥಕೊಡುತ್ತವೆ. ಇದೇ ರೀತಿ ರಾಮಾನುಜಾಚಾರ್ಯರೂ ವೇದ ವಾಕ್ಯಗಳನ್ನು ತಮಗೆ ಅನುಕೂಲವಾಗುವಂತೆ ಬಳಸಿಕೊಳ್ಳಲು ಅವಕಾಶವಿದೆ. ಈ ಕಾರಣದಿಂದಲೇ ಇತರ ಸಿದ್ಧಾಂತಗಳು ವೇದಾಂತಗಳೆಂದು ಪ್ರಸಿದ್ಧಿ ಪಡೆದಿವೆ. ಮಧ್ವಾಚಾರ್ಯರು ಇತರರು ಮಾಡಿದ ಅರ್ಥ ಸರಿಯಲ್ಲ ಎಂದು ತೋರಿಸಿದ್ದಾರೆ. ಆದರೆ ನಮಗೆ ಒಂದು ಪ್ರಶ್ನೆ ಬರುತ್ತದೆ. ಮಧ್ವಾಚಾರ್ಯರು ಹೇಳಿದ ಅರ್ಥವೇ ಸರಿ ಎಂದು ಏಕೆ ಒಪ್ಪಬೇಕು? ಎಂಬುದು ಪ್ರಶ್ನೆ. ಮಧ್ವಾಚಾರ್ಯರ ಹೇಳಿಕೆ ಏನೆಂದರೆ ಯಾವ ಅರ್ಥ ಬ್ರಹ್ಮನ ಪೂರ್ಣತೆಗೆ ಅಥವಾ ಸ್ವಾತಂತ್ರ್ಯಕ್ಕೆ ಯಾವ ರೀತಿಯಿಂದಲಾದರೂ ಭಂಗ ತರುತ್ತದೋ ಆ ಅರ್ಥ ಸರಿಯಲ್ಲ ಎಂಬುದು. ಬ್ರಹ್ಮನ ಸ್ವಾತಂತ್ರ್ಯವನ್ನು ಕಾಪಾಡುವ ಉದ್ದೇಶವಲ್ಲ. ಬ್ರಹ್ಮನಿಗೆ ಯಾರ ರಕ್ಷಣೆಯೂ ಬೇಕಾಗಿಲ್ಲ. ಸಾಧಕರಿಗೆ ಬ್ರಹ್ಮನ ಜ್ಞಾನ ಒದಗಿಸಿ ಕೊಡುವುದೇ ಉದ್ದೇಶ. ಇದೇ ಮಧ್ವಾಚಾರ್ಯರ ವೈಶಿಷ್ಟ್ಯ.

ಶ್ರೀ ಮಧ್ವಸಿದ್ಧಾಂತ ಮುಖ್ಯ ಪ್ರಮೇಯಗಳನ್ನು ಸಾಮಾನ್ಯ ಜನರಿಗೆ ತಿಳಿಯುವಂತೆ ಬರೆಯಲು ಬೇರೆ ಅವಕಾಶ ಬೇಕಾಗುತ್ತದೆ.

ಶ್ರೀ ಕೃಷ್ಣಾರ್ಪಣ ಮಸ್ತು

ಶುದ್ಧಾಶುದ್ಧ ಪತ್ರಿಕೆ

ಪುಟ	ಪಂಕ್ತಿ	ಅಶುದ್ಧ	ಶುದ್ಧ
1	ಶ್ಲೋಕ	ತ್ರಿತೀಯಸ್ತು	ತೃತೀಯಸ್ತು
1	5	ನಬಸ್ತುತಿ	ನಖಸ್ತುತಿ
2	8	ವಿವದಾಶ್ಚ	ವಿವಿದಾಶ್ಚ
	28	ಹರಿಭಕ್ತಿ ಸಾಬ	ಹರಿಭಕ್ತಿ ಸಾರ
	31	ನನುವರತ	ನನವರತ
3	21	ಕುಹಳಿಗಳು	ಕುಹಕಿಗಳು
4	11	ಸರ್ವ ವಾಪ್ತೀ	ಸರ್ವ ವ್ಯಾಪೀ
	11	ಸರ್ವಾ	ಸರ್ವ
	15	ಕರ್ಮಾದ್ಯಷಃ	ಕರ್ಮಾದ್ಯಕ್ಷಃ
5	6	**ಸತ್ಕ**	ಸತ್ವ
6	13	ಸರ್ವಂ ಬಲ್ವಿದಂ	ಸರ್ವಂ ಖಲ್ವಿದಂ
	24	ಬ್ರಹ್ಮನಲ್ಲಿದೆಲ್ಲಿ	ಬ್ರಹ್ಮನಲ್ಲಿದುದೆಲ್ಲಿ
8	21	ಆ ಶ್ರೀ ಕೃಷ್ಣ	ಆದರೆ ಶ್ರೀ ಕೃಷ್ಣ
	27	ಬೊದಿಸಿ	ಭೋದಿಸಿ
9	5	ತದೈಕ್ಷಾತ	ತದೈಕ್ಷತ
	10	ತೋರಿಸಿರುವವು	ತೋರಿಸಿರುವರು
10	5	Bacom	Bacon

ಪುಟ	ಪಂಕ್ತಿ	ಅಶುದ್ಧ	
	10	Viscamt	Viscount
	23	ನಾಂದೀಪನೇ	ಸಾಂದೀಪನಿ
	26	ರಾಮಾನು	ರಾಮಾನುಜಾ
11	22	ಕೊಟ್ಟವು	ಕೊಟ್ಟನು
	29	ಹಾಕಿದನು	ಹಾಕಿದಳು
13	17–18ರ ಮಧ್ಯೆ 1 ಪಂಕ್ತಿ ಸೇರಿಸಿ		ಅವರು ಗೃಹಸ್ಥರ ವೇಷದಿಂದ ಬೇರೆಕಡೆ ಹೋಗುವುದಾಗಿಯೂ
14	6	ಪಡೆದರೆಂಬ	ಪಡೆದರೆಂದು
16	5	ಜಗತನ್ನು	ಜಗತ್ತನ್ನು
17	3	ಅಂಕಿ–ಅಂಶ	ಅಂಶಿ–ಅಂಶ
	10	ಸೇಹ	ನೇಹ
	15	ವಜಿನಂ	ವರ್ಜಂ
18	4	ಮಹಾ ಕಾವ್ಯಗಳು	ಮಹಾ ವಾಕ್ಯಗಳು
	32	ಕೇಳುವು	ಹೇಳ್ವು
18	11	Torn	Tom
	20	ಮಹಾಕಾವ್ಯ	ಮಹಾವಾಕ್ಯ
	23	Scriphaes	Scriptures
21	13	ಜೀವನ	ಜೀವನು
	19	ನನು	ನಾನು
22	12	ಈ	ಈಗ
23	23-24 ಪಂಕ್ತಿಗಳ ಮಧ್ಯೆ		ಅವರು ಅಂಧಃ ಕಮಸ್ಸಿಗೆ ಹೋಗುತ್ತಾರೆ. ಯಾರು ವಿದ್ಯೆಯೇನ್ನ ಉಪಾಸನೆ ಮಾಡುತ್ತಾರೋ
24	9	ಮಧ್ವರು	ಮಾಧ್ವರು
	27	ಕಾಲುಗಳನ್ನಿಟ್ಟು	ಕಾಲುಗಳನ್ನಿಟ್ಟು
26	10	ಮಹಾ ಕಾವ್ಯಗಳು	ಮಹಾ ವಾಕ್ಯಗಳು
27	1	ಇದಕಲ್ಲಿಯೂ	ಇಹದಲ್ಲಿಯೂ
30	16	"ಪ"	"ಪ್ರ"

		ಅಶುದ್ಧ	ಶುದ್ಧ
2	13	ಸ್ವಾತಂತ್ರ್ಯ	ಸ್ವಾತ-ತ್ರ್ಯ
34	2	ಸೂತ್ರ ಎಂದೂ	ಸೂತ್ರ
35	12	ಜೀವನನ್ನು ನೋಡುತ್ತಾನೆ	ಜೀವನನ್ನು ಸಮನಾಗಿ ನೋಡುತ್ತಾನೆ.
36	1	ಬಹುಷಃ	ಬಹುಶಃ
	18	to rhine on	to shine on
	27	ಜಿಜ್ಞಾಸಾಜಿಂ	ಜಿಜ್ಞಾಸಾ ಓಂ
		ಮುಮುಷು	ಮುಮುಕ್ಷು
37	7	ಅವನು	ಅವನ
38	5	ಬುಧ್ಯಾನಾತ್ಮಸಾರ್ವನು	ಬುಧ್ಯಾತ್ಮನಾವ್ನುಸ್ಸೃತ್ಸ್ಯ
	6	ಯದ್ಯತ್ಸಕಲಂ ನಾರಾಯಣಂ	ಯದ್ಯತ್ಸಕಲಂ ಪರಸ್ಮೈ ನಾರಾಯಣಾ ಪತಿ
41	3	ಅವಿರ್ವಚನೀಯ	ಅನಿರ್ವಚನೀಯ
	5	is does	it does
	15	ಕಾಲು ನಾನಲ್ಲ "ನಾನಲ್ಲ"	ಕಾಲು "ನಾನಲ್ಲ"
	30	ವ್ವೆ ವೇದಾಃ	ದ್ವೆ ವೇದಾಃ
43	23	ನಾರಾಯಣ	ನಾರಾಯಣಾಯ
	26	ಜೀವನ್ನ	ಜೀವನ
44	2	ಇದಕ್ಕ್ಯೋ	ಇದಕ್ಕೇ
	11	ಗಿದ್ದಾರೆ	ಗಿದ್ದರೆ
	26	ಎರಡನೆಯದು	ಎರಡನೆಯದನ್ನು
45	17	ದ್ವಿವಿಧಂ ತತ್ತ್ವ	ದ್ವಿವಿಧಂ
46	1	ಜೀವ ಜಡ	ಜೀವ ಮತ್ತು ಜಡ
47	1	ಬ್ರಹ್ಮರಗುಣ	ಬ್ರಹ್ಮನ ಗುಣ

— ★ —

rit

2

3

BHARATHI PRINTERS
- 3rd Block East, Jayanagar
Bangalore-560 011.